## ಅಧ್ಯಾಯ–೧೨

# ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು

ಪ್ರಾಚೀನ ಕಾಲದಲ್ಲಿ ಆಡಳಿತವು ರಾಜರ ಕೈಯಲ್ಲಿ ಕೇಂದ್ರೀಕೃತವಾಗಿದ್ದಿತು. ಅಂದಿನ ಕಾಲದ ಎಲ್ಲ ರಾಜರು ನಿರಂಕುಶ ಪ್ರಭುಗಳಾಗಿದ್ದರು ಸಹ ಅವರು ಸ್ಥಳೀಯ ಸ್ವಯಂ ಆಡಳಿತಕ್ಕೆ ಸಾಕಷ್ಟು ಮಾನ್ಯತೆ ನೀಡಿದ್ದರು. ನಾಗರಿಕರು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹಾಗೂ ತಮ್ಮ ತಮ್ಮ ಪ್ರದೇಶಗಳ ಸರ್ವಾಂಗೀಣ ಪ್ರಗತಿ ಮಾಡಿಕೊಳ್ಳುವ ಬಗ್ಗೆ ಅನುವು ಮಾಡಿಕೊಂಡಿದ್ದರು. ಹಳ್ಳಿ, ಪಟ್ಟಣ ಹಾಗೂ ನಗರ ಸಮುದಾಯಗಳ ಆಡಳಿತಕ್ಕೆ ಅನುಕೂಲಕರವಾದ ರೀತಿಯಲ್ಲಿ ಆಡಳಿತ ವ್ಯವಸ್ಥೆ ರೂಪಿಸಿಕೊಳ್ಳಲು ರಾಜರು ಅವುಗಳಿಗೆ ಸಾಕಷ್ಟು ಸ್ವಾಯತ್ತತೆಯನ್ನು ನೀಡಿದ ಬಗ್ಗೆ ದಾಖಲೆಗಳಿವೆ. ಈ ರೀತಿಯ ಸ್ವಯಂ ಆಡಳಿತ ವ್ಯವಸ್ಥೆಯ ಪರಂಪರೆಯನ್ನು ನಾವು ವೇದಕಾಲದಿಂದಲೂ ಗುರುತಿಸಬಹುದಾಗಿದೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ನಮಗೆ ಪಟ್ಟಣಗಳ ಕುರಿತಾದ ಮಾಹಿತಿ ದೊರಕಿದ್ದು, ಆಗಲೂ ಸಹ, ವ್ಯವಸ್ಥಿತ ಪೌರಾಡಳಿತ ಇದ್ದ ಬಗ್ಗೆ ಕುರುಹುಗಳು ಕಂಡು ಬಂದಿವೆ. ಪ್ರಾಚೀನ ಹಿಂದೂ ನಾಗರಿಕತೆಯ ಹೆಗ್ಗುರುತಾದ ಸ್ಥಳೀಯ ಸ್ವಯಂ ಆಡಳಿತವು ರಾಷ್ಟ್ರೀಯ ಜೀವನಾಡಿಯಾಗಿ ಧರ್ಮ, ನಾಗರಿಕ ಆಡಳಿತ, ಆರ್ಥಿಕ, ಶೈಕ್ಷಣಿಕ, ನ್ಯಾಯ ಮುಂತಾದ ಪೌರ ಜೀವನದ ವಿವಿಧ ಸ್ತರಗಳಲ್ಲಿ ಗಮನಾರ್ಹ ಪ್ರಗತಿ ಮಾಡಿದ ಬಗೆಗಿನ ಐತಿಹಾಸಿಕ ಮಾಹಿತಿ ಲಭ್ಯ ಇದೆ. ಇಂದಿನ ನಮ್ಮ ಪ್ರಜಾಸತ್ತೆಯ ಮಾದರಿಯ ಸರ್ಕಾರದಲ್ಲಿಯೂ ಸಹ ಅಧಿಕಾರ ವಿಕೇಂದ್ರೀಕರಣದ ಅಗತ್ಯತೆ ಕಂಡು ಬಂದಿದ್ದು, ಸ್ಥಳೀಯ ಸ್ವಯಂ ಆಡಳಿತಕ್ಕೆ ಹೆಚ್ಚು ಮಾನ್ಯತೆ ದೊರೆಯುವುದರೊಂದಿಗೆ, ಪ್ರಭಾವಶಾಲಿ ಆಡಳಿತ ವ್ಯವಸ್ಥೆಗಳಾಗಿ ಇವು ರೂಪುಗೊಳ್ಳುತ್ತಿವೆ. ಮೈಸೂರು ಪ್ರಾಂತ್ಯಕ್ಕೆ ಒಳಪಟ್ಟಂತೆ ಕೋಲಾರ ಜಿಲ್ಲೆಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಾದ ಗ್ರಾಮಪಂಚಾಯಿತಿ ಅಥವಾ ಶಾಸನ ಬದ್ಧ ಸ್ವಯಂ ಆಡಳಿತ ಹೊಂದಿದ ಪ್ರಾತಿನಿಧಿಕ ಸಂಸ್ಥೆಗಳಿಗೆ ಆಯಾಕಾಲದ ಸರಕಾರಗಳು ಎಲ್ಲ ರೀತಿಯ ಸಹಕಾರ ನೀಡುತ್ತಿದ್ದ ಬಗ್ಗೆ ಚಾರಿತ್ರಿಕ ಹಿನ್ನೆಲೆ ಇದೆ.

ಸರ್ಕಾರ ಹಾಗೂ ಅದರ ಆಡಳಿತ ವ್ಯವಸ್ಥೆಯನ್ನು ರಾಷ್ಟ್ರೀಯ, ಪ್ರಾಂತೀಯ ಹಾಗೂ ಸ್ಥಳೀಯವೆಂದು ವಿಂಗಡಿಸಬಹುದಾಗಿದೆ. ಗ್ರಾಮ ಅಥವಾ ಪಟ್ಟಣ ವ್ಯಾಪ್ತಿಯ ಆಡಳಿತದಲ್ಲಿ ಸ್ಥಳೀಯ ನಿವಾಸಿಗಳಿಗೆ ಪ್ರಾತಿನಿಧ್ಯ ದೊರೆತಿರುವ ಸಂಸ್ಥೆಗಳು ಸಾಕಷ್ಟು ಸ್ವಯಂ ಅಧಿಕಾರ ಹೊಂದಿದ್ದು, ಗ್ರಾಮದ ಅಭಿವೃದ್ಧಿಗಾಗಿ ಅವು ಸ್ವಲ್ಪ ಆದಾಯವನ್ನಾದರೂ ತೆರಿಗೆ ರೂಪದಲ್ಲಿ ಸಂಗ್ರಹಿಸಿ, ಸ್ಥಳೀಯ ನಾಗರಿಕರ ಮೂಲಭೂತ ಸೌಲಭ್ಯಗಳಿಗೆ ವೆಚ್ಚಮಾಡುತ್ತಿದ್ದರೆ ಅಂಥಹ ಸಂಸ್ಥೆಗಳನ್ನು ನಾವು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆ ಎನ್ನುತ್ತೇವೆ. ಈ ಸ್ಥಳೀಯ ಸಂಸ್ಥೆಗಳು ಸಾಮಾಜಿಕ ಪ್ರಗತಿಯಲ್ಲಿ ಸಮರ್ಥ ಪಾತ್ರವನ್ನು ವಹಿಸುವುದು ಅಲ್ಲದೆ ಗ್ರಾಮದ ಜನರಿಗೆ ರಾಜಕೀಯ ತರಬೇತಿ ನೀಡುವ ಸಂಸ್ಥೆಗಳಾಗಿವೆ. ಭಾರತದ ಪ್ರತಿಯೊಂದು ಹಳ್ಳಿಯು ಒಂದು ಪುಟ್ಟ ಗಣರಾಜ್ಯ (ರಿಪಬ್ಲಿಕ್) ದಂತೆ ಕಾರ್ಯನಿರ್ವಹಿಸುತ್ತಿತ್ತು. ಪ್ರತಿಯೊಂದು ಗ್ರಾಮವು ತನ್ನ ಊರಿನ–ಕುಟುಂಬಗಳ ಮುಖ್ಯಸ್ಥರ ಸಮಾವೇಶದಲ್ಲಿ ಎಲ್ಲ ಮುಖ್ಯವಾದ ಸ್ಥಳೀಯ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸುತ್ತಿತ್ತು. ಈ ರೀತಿಯ ಸಮಾವೇಶ ಅಥವಾ

ಸಭೆಗಳ ಹಕ್ಕುಬಾಧ್ಯತೆಗಳನ್ನು ಸರ್ಕಾರವು ಸಂರಕ್ಷಿಸಿತ್ತು. ಕರ್ನಾಟಕದಲ್ಲಿಯ ಆಗಿನ ಗ್ರಾಮೀಣ ಸಂಸ್ಥೆಗಳ ಸಂಪ್ರದಾಯ ಬಹಳ ಸಧೃಡವಾಗಿತ್ತು. ಕರ್ನಾಟಕದ ಶಾಸನಗಳು ಈ ವಿಷಯದ ಬಗೆಗೆ ಸಾಕಷ್ಟು ಮಾಹಿತಿ ಒದಗಿಸುತ್ತವೆ. ಸ್ಥಳೀಯ ಸಂಸ್ಥೆಗಳನ್ನು ಊರು, ಒಕ್ಕಲು, ಪ್ರಜೆ, ಪ್ರಜಾ ಸಮುದಾಯ, ಹಲರು ಅಥವಾ ಊರ ಹಲರು, ಸಮಸ್ತರು, ಊರ ಹದಿನೆಂಟು ಜಾತಿ ಮುಂತಾಗಿ ಕರೆಯಲಾಗುತ್ತಿತ್ತು. ಅಗ್ರಹಾರವೆನಿಸಿದ ಹಳ್ಳಿಗಳಲ್ಲಿ ಮಹಾಜನರ (ಬ್ರಾಹ್ಮಣ ವಿದ್ವಾಂಸರ ಕುಟುಂಬಗಳ ಮುಖ್ಯಸ್ಥರು) ಸಭೆಯು ಸ್ಥಳೀಯ ಸಂಸ್ಥೆಯಾಗಿತ್ತು. ಕೆಲವೊಮ್ಮೆ ಗ್ರಾಮಸಭೆಗಳನ್ನು ಮೂವತ್ತೊಕ್ಕಲು, ಐವತ್ತೊಕ್ಕಲು ಎಂಬ ಸಂಖ್ಯಾನಾಮದಿಂದ ಕರೆಯಲಾಗುತ್ತಿತ್ತು. ಒಕ್ಕಲು ಎಂದರೆ ಕುಟುಂಬವೆಂದು ಅರ್ಥ.

ಸಾಮಾನ್ಯವಾಗಿ ಸ್ಥಳೀಯ–ಸಂಸ್ಥೆಗಳು ಸಾರ್ವಜನಿಕ ಕಟ್ಟಡಗಳು, ದೇವಾಲಯ ಸಭಾಂಗಣಗಳು, ಕುಡಿಯುವ ನೀರಿನ ಪೂರೈಕೆ ಹಾಗೂ ನೀರಾವರಿ ವ್ಯವಸ್ಥೆ, ಅರವಟ್ಟಿಗೆಗಳು, ಅನ್ನ ಸತ್ರಗಳ ನಿರ್ಮಾಣದಂತಹ ಕಾರ್ಯ ಕೈಗೊಳ್ಳುತ್ತಿದ್ದವೆಂದು ವಿಜ್ಞಾನೇಶ್ವರನು ತನ್ನ ಮಿತಾಕ್ಷರಿ ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ.

ಗ್ರಾಮಸಭೆಗಳ ಇನ್ನಿತರ ಕಾರ್ಯಕಲಾಪಗಳು ದೇವಾಲಯ ನಿರ್ವಹಣೆ, ಹಬ್ಬಗಳು, ಜಾತ್ರೆಗಳ ವ್ಯವಸ್ಥೆ, ಸುಂಕದಕಟ್ಟೆಗಳ ನಿರ್ವಹಣೆ, ವೀರಗಲ್ಲುಗಳನ್ನು ನೆಡಿಸುವುದು, ಭೂ ಬಿಕ್ಕಟ್ಟನ್ನು ಪರಿಹರಿಸುವುದು, ನ್ಯಾಯರಕ್ಷಣೆ ಹಾಗೂ ದೇವಾಲಯಗಳಿಗೆ ಬಿತ್ತವಟ್ಟು (ಭೂಮಿ ಬಿಟ್ಟುಕೊಡುವುದು) ನೀಡುವುದು ಮುಂತಾದವುಗಳಾಗಿದ್ದವು.

ಗ್ರಾಮಗಳ ಗುಂಪನ್ನು ಕಂಪಣ, ನಾಡು, ವಿಷಯ ವೆಂಟೆ ಮುಂತಾಗಿ ಹೆಸರಿಸಲಾಗಿದೆ. ಹತ್ತನೆ ಶತಮಾನದಲ್ಲಿ 'ನಾಡು' ಒಂದು ಸ್ಥಳೀಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ಈ ನಾಡಿನ ಮುಖ್ಯಸ್ಥನನ್ನು ನಾಡಿನ ಪ್ರಭು, ನಾಡಗೌಡ ಪೆರ್ಗಡೆ ಮುಂತಾಗಿ ಕರೆಯಲಾಗುತ್ತಿತ್ತು. ಈ ಆಡಳಿತ ವ್ಯವಸ್ಥೆಯು ಹಲವಾರು ಹಳ್ಳಿಗಳ ಒಕ್ಕೂಟವಾಗಿದ್ದು ಅದನ್ನು ನಾಡಸಭೆ ಎಂದು ಕರೆಯಲಾಗುತ್ತಿತ್ತು. ನಾಡಸಭೆಯ ಮುಖ್ಯಸ್ಥನ ಹುದ್ದೆ ಅನುವಂಶಿಕವಾಗಿದ್ದಿತು. ನ್ಯಾಯದಾನ, ನೀರಾವರಿ ಸೌಲಭ್ಯ ಒದಗಿಸುವುದು ಹಾಗೂ ಸಾಮೂಹಿಕ ಅಭಿವೃದ್ಧಿ ಕಾರ್ಯ ಕೈಗೊಳ್ಳುವುದು ನಾಡಸಭೆಯ ತೀರ್ಮಾನಕ್ಕೆ ಸೇರಿತ್ತು.

ಕೋಲಾರ ಜಿಲ್ಲೆಯ ಗ್ರಾಮಗಳನ್ನು ವಾಡಿ, ಹುಂಡಿ, ಹಟ್ಟಿ, ಕೊಪ್ಪಲು, ಪಳ್ಳಿವಾರು, ಪಾಲ ಎಂದು ಕರೆಯಲಾಗುತ್ತಿತ್ತು. ಗ್ರಾಮಾಡಳಿತವು, ಸ್ವತಂತ್ರವಾಗಿ ದಕ್ಷವಾಗಿ ಕಾರ್ಯನಿರ್ವಹಿಸುತ್ತಿತ್ತು. ಗ್ರಾಮಸಭೆಗಳು ಊರ ದೇವಸ್ಥಾನ ಇಲ್ಲವೆ ಮಂಟಪಗಳಲ್ಲಿ ಸೇರುತ್ತಿದ್ದವು. ಪುದವಟ್ಟುಗಳನ್ನು ರಚಿಸುವುದು ಹಾಗೂ ಧರ್ಮ ರಕ್ಷಣೆಯು ಗ್ರಾಮಸಭೆಯ ಹೊಣೆಯಾಗಿತ್ತು. ಈ ಗ್ರಾಮಸಭೆಗಳು ಮುಂದೆ ವಿಜಯನಗರ ಅರಸರು, ಹೈದರ್, ಟಿಪ್ಪು ಹಾಗೂ ಮೈಸೂರು ಅರಸರ ಆಡಳಿತವಿದ್ದಾಗಲೂ ಸಹ, ಉಚ್ಛ್ರಾಯ ಸ್ಥಿತಿಯಲ್ಲಿ ಮುಂದುವರೆದಿದ್ದು ತಿಳಿದುಬರುತ್ತದೆ. ಹೀಗೆ ಗ್ರಾಮ ಸಭೆಗಳು ಸ್ಥಳೀಯ ಸ್ವಯಮಾಡಳಿತ ಘಟಕಗಳಾಗಿ ಬಹು ಮಹತ್ವದ ಪಾತ್ರ ವಹಿಸುತ್ತಿದ್ದುದು ವೇದ್ಯವಾಗುತ್ತದೆ.

ಅಗ್ರಹಾರಗಳೆಂದು ಕರೆಯಲ್ಪಡುತ್ತಿದ್ದ ಸ್ವಯಮಾಡಳಿತ ಸಂಸ್ಥೆಗಳು ಬ್ರಾಹ್ಮಣ ಮುಖಂಡರ ಆಡಳಿತಕ್ಕೆ ಒಳಪಟ್ಟಿದ್ದವು. ಅವುಗಳು ಸಾಮಾನ್ಯವಾಗಿ ಬ್ರಾಹ್ಮಣ ಸಮುದಾಯ ಒಂದೇ ಕಡೆ ವಾಸಿಸುತ್ತಿದ್ದ ಊರು ಅಥವಾ ಓಣಿಗಳಾಗಿದ್ದವು. ಊರೊಡೆಯನೆ ಪ್ರಮುಖ ಅಧಿಕಾರಿ ಎನಿಸಿದ್ದನು. ಆರನೇ ಶತಮಾನದ ಶಾಸನವೊಂದು ಅಗ್ರಹಾರ ಕೆಲಸಕಾರ್ಯಗಳು ಗ್ರಾಮಕಾರ್ಯಗಳೆಂದೂ ಆಗಿನ ನೀತಿ ಸಂಹಿತೆಯು 'ಸಮಯ', 'ಮರ್‍ಯಾದೆ' ಎಂದು ಉಲ್ಲೇಖಗೊಂಡಿದ್ದು, ಅಲ್ಲಿನ ಮಹಾಜನರಿಗೆ ಸರ್ಕಾರ ಪುರಸ್ಕಾರ ನೀಡುತ್ತಿದ್ದ ಬಗ್ಗೆ ತಿಳಿಸುತ್ತದೆ.

೧೮೬೨ರಷ್ಟು ಹಿಂದೆಯೇ ಮೈಸೂರು ಪ್ರಾಂತ್ಯದ ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಪೌರಸಮಿತಿ ರಚನೆಯಾಗಿತ್ತು. ೧೮೭೪ರ ಹೊತ್ತಿಗೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪೌರಸಮಿತಿಗಳು ರಚನೆಗೊಂಡಿದ್ದು ತಿಳಿದುಬರುತ್ತದೆ. ಪೌರಸಮಿತಿಗಳ ಪ್ರಾಮುಖ್ಯತೆ ಅರಿತ ಸರಕಾರ ಕ್ರಮೇಣ ಈ ಸಂಸ್ಥೆಗಳಲ್ಲಿ ಸುಧಾರಣೆ ಹಾಗೂ ಪರಿಣಾಮಕಾರಿಯಾದ ಆಡಳಿತ ಒದಗಿಸುವ ದಿಸೆಯಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲು ಯೋಚಿಸಿತು. ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಸುಧಾರಣೆಗಳನ್ನೊಳಗೊಂಡ ಗೊತ್ತುವಳಿ (ರೆಸಲ್ಯೂಶನ್) ಹಾಗೂ ದಿವಾನ ರಂಗಾಚಾರ್ಲು ಮತ್ತು ಶೇಷಾದ್ರಿಅಯ್ಯರ್‌ರವರ

ಪ್ರಗತಿಪರ ಧೋರಣೆಗಳನ್ನೊಳಗೊಂಡ ಅಂಶಗಳನ್ನು ಆಧರಿಸಿ ೧೯೦೩ರಲ್ಲಿ ಹೊರಡಿಸಲಾದ "ದಿ ಮೈಸೂರು ರೆಜೆಲ್ಯೂಶನ್–೨"ನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಯಿತು. ನಂತರ ೭ನೇಯ ಅಧಿನಿಯಮದ ಪ್ರಕಾರ ಜಿಲ್ಲೆಯಲ್ಲಿ ಹಲವು ಪುರಸಭೆಗಳು ರಚನೆಗೊಂಡವು. ಚುನಾಯಿತ ಸದಸ್ಯರ ಕೊರತೆ ಮತ್ತು ಹಣಕಾಸಿನ ಮೇಲಿನ ಹತೋಟಿ ಇಲ್ಲದಿರುವಿಕೆ ಮುಂತಾದ ನ್ಯೂನತೆಗಳಿಂದಾಗಿ ಸ್ಥಳೀಯ ಮಂಡಳಿಗಳು ಕಾರ್ಯನಿರ್ವಹಿಸಲು ವಿಫಲಗೊಂಡವು. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಈ ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತಾ ಬಂದಿವೆ. ೧೯೫೧ರ ಅಧಿನಿಯಮ ಮತ್ತು ೧೯೬೪ ಹಾಗೂ ೧೯೮೩ರ ಹೊಸ ಪಂಚಾಯತ್ ರಾಜ್ ಕಾನೂನುಗಳು ಸ್ವಯಂ ಆಡಳಿತ ಸಂಸ್ಥೆಗಳಿಗೆ ಸಾಕಷ್ಟು ಸ್ವಾಯತ್ತತೆ ನೀಡುತ್ತಾ ಬಂದಿವೆ.

## ಐತಿಹಾಸಿಕ ಹಿನ್ನೆಲೆ

ಕೋಲಾರವು ಎರಡನೇ ಶತಮಾನದ ಹೊತ್ತಿಗೆ ಗಂಗರ ರಾಜಧಾನಿಯಾಗಿತ್ತು. ಗಂಗರು ಕೋಲಾರ ಪ್ರಾಂತ್ಯವನ್ನು ೧೧ನೇ ಶತಮಾನದವರೆಗೆ ಆಳಿದರು. ನಂತರ ಚೋಳರ ಆಡಳಿತಕ್ಕೆ ಕೋಲಾರ ಒಳಪಟ್ಟಿತು. ಕೋಲಾರ (ಕೋಲಾಲ) ಚೋಳರ ಆಡಳಿತದಲ್ಲಿ ಒಂದು ಪ್ರಮುಖ ಪಟ್ಟಣವಾಗಿತ್ತು. ಕ್ರಿ.ಶ. ೪ ರಿಂದ ೧೯ನೇ ಶತಮಾನದವರೆಗೆ ಕದಂಬ, ಗಂಗ, ಪಲ್ಲವ, ಚೋಳ, ಚಾಲುಕ್ಯ, ಹೊಯ್ಸಳ, ಬಾಣ ರಾಷ್ಟ್ರಕೂಟ, ವಿಜಯನಗರ ಅರಸರು, ಹಾಗೂ ಮೈಸೂರು ಅರಸರ ಆಡಳಿತಾವಧಿಯ ೧,೩೪೭ ಶಾಸನಗಳು ಜಿಲ್ಲೆಯಲ್ಲಿ ದೊರಕಿದ್ದು, ಅವುಗಳಲ್ಲಿ ಚೋಳರ ಕಾಲದ ಸುಮಾರು ೧೬೨ ಶಾಸನಗಳು ದೊರಕಿವೆ. ಕೆಲವು ಶಾಸನಗಳು ಅವರ ಆಡಳಿತಾವಧಿಯಲ್ಲಿಯ ಕೆರೆಕುಂಟೆ ನಿರ್ಮಾಣ, ದೇವಸ್ಥಾನಗಳ ಜೀರ್ಣೋದ್ಧಾರ, ಜನರ ಸಾಮಾಜಿಕ ರೀತಿ ರಿವಾಜು, ಆಚರಣೆ ಹಾಗೂ ಯುದ್ಧಗಳ ಬಗ್ಗೆ ಮಾಹಿತಿ ಒದಗಿಸುತ್ತವೆ. ಕೋಲಾರವನ್ನು ಹಲವು ಪಾಳೆಗಾರರು, ಪ್ರಭುಗಳು ಆಳಿದರು. ಅವರಲ್ಲಿ ಆವತಿ ನಾಡ ಪ್ರಭುಗಳು, ಸುಗಟೂರಿನ ಪಾಳೆಗಾರರು, ಗುಮ್ಮನಾಯಕನ ಪಾಳ್ಯದ ನಾಯಕರು ಪ್ರಮುಖರು ಇವರ ೫೦ ಶಾಸನಗಳು ದೊರಕಿವೆ. ಅಲಂಗಿರಿಯಲ್ಲಿ ಶಿವಾಜಿ ಮಹಾರಾಜನು ಕೆಲವು ದೇವಾಲಯಗಳಿಗೆ ದತ್ತಿ ಕೊಟ್ಟ ಬಗ್ಗೆ ಉಲ್ಲೇಖವಿದೆ.

ಚೋಳರ ಕಾಲದ ಆಡಳಿತ ಘಟಕಗಳಾದ ಮಂಡಲಂ (ಮಹಾನಾಡು)–ನೂಲಂಬಪಾಡಿ ಇದು ಕೋಲಾರ, ಬೆಂಗಳೂರು, ಈಗಿನ ಆಂಧ್ರಪ್ರದೇಶದ ಚಿತ್ತೂರು ಹಾಗೂ ಅನಂತಪುರ ಭಾಗಗಳನ್ನು ಹೊಂದಿತ್ತು. ಅವನೀಯನಾಡು (ಮುಳಬಾಗಿಲು ತಾಲೂಕು), ಇಲನಗರನಾಡು (ಬಂಗಾರುಪೇಟೆ ತಾಲೂಕು), ಕೈವಾರನಾಡು (ಶಿಡ್ಲಘಟ್ಟ/ಚಿಂತಾಮಣಿ ತಾಲೂಕು) ಕಲವರನಾಡು (ಚಿಕ್ಕಬಳ್ಳಾಪುರ ತಾಲೂಕು) ಕುವಲಾಲಾನಾಡು (ಕೋಲಾರ), ಪುದಲ್ನಾಡು (ಮುಳಬಾಗಿಲು ತಾಲೂಕು), ತಡಿಗೈವಲಿ (ವಿಕ್ರಮ ಚೋಳ ಮಂಡಲಂ)ದ ಕುರುಕುಡಾಚ್ಚಿ ನಾಡು (ಮಾಲೂರು ತಾಲೂಕು) ಮುಂತಾದವು ಕೆಲವು ನಾಡುಗಳಾಗಿದ್ದವು. ಮಂಡಲಂ ಅಥವಾ ಮಹಾನಾಡು ಸರಿಸುಮಾರಾಗಿ ಈಗಿನ ಜಿಲ್ಲೆಯ ವ್ಯಾಪ್ತಿ ಹೊಂದಿದ ಪ್ರದೇಶವಾಗಿದ್ದಿತು ಹಾಗೂ ನಾಡು ಈಗಿನ ತಾಲೂಕಿನಷ್ಟು ವಿಸ್ತಾರ ಪ್ರದೇಶ ಹೊಂದಿದ್ದಿತು.

## ನಾಡಸಭೆ

ಗ್ರಾಮಸಭೆ ಒಂದು ಹಳ್ಳಿ ಅಥವಾ ಗ್ರಾಮದ ಸ್ವಯಮಾಡಳಿತವಾಗಿದ್ದು ಅದರ ವಿಸ್ತೃತ ರೂಪ ನಾಡಸಭೆ ಎನಿಸಿದೆ. ಹತ್ತನೇ ಶತಮಾನದ ಹೊತ್ತಿಗೆ ನಾಡು ಒಂದು ಸ್ಥಳೀಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ಹಲವಾರು ಗ್ರಾಮಗಳ ಗುಂಪನ್ನು ನಾಡು ಎಂದು ಕರೆದಿದ್ದು ಇಂತಹ ನಾಡಿನ ಮುಖ್ಯಾಧಿಕಾರಿಯನ್ನು ನಾಡಗೌಡ, ಗೌಂಡಪ್ರಭು, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿದ್ದು ಈ ಹುದ್ದೆಯು ಅನುವಂಶಿಕವಾಗಿತ್ತು. ಶಾಸನಗಳಲ್ಲಿ ನಾಡು ಮತ್ತು ಮಹಾನಾಡಿನ ಉಲ್ಲೇಖ ಬರುತ್ತದೆ. ಹಳ್ಳಿಗಳ ಒಕ್ಕೂಟದಿಂದ ಉಂಟಾದ ಈ ಸಭೆಯನ್ನು ನಾಡಸಭೆ ಎಂದು ಕರೆದಿದ್ದು, ಇದು ಇಂದಿನ ಮಂಡಲ ಇಲ್ಲವೆ ತಾಲೂಕು ಪಂಚಾಯತ್‌ಗೆ ಹೋಲಿಸಬಹುದಾಗಿದೆ. ನಾಡಶಾನುಭೋಗರನ್ನು ನಾಡಸಭೆ ಆಯ್ಕೆ ಮಾಡುತ್ತಿತ್ತು. ನ್ಯಾಯನಿರ್ಣಯ, ದೇಗುಲಗಳ ನಿರ್ಮಾಣ ಹಾಗೂ ನಿರ್ವಹಣೆ, ಅರವಟ್ಟಿಗೆಗಳ ಸ್ಥಾಪನೆ, ವೀರಗಲ್ಲು, ಮಹಾಸತಿಗಲ್ಲು ನೆಡಿಸುವುದು, ಸುಂಕದ ಕಟ್ಟೆಗಳ ನಿರ್ಮಾಣ, ಭೂ ಹಗರಣ ಬಗೆಹರಿಸುವುದು, ದೇವಾಲಯಗಳಲ್ಲಿ ನಂದಾದೀಪ ಹಾಗೂ ಅಗಿಷ್ಟಿಕೆ ಸೇವೆಗಳನ್ನು ಏರ್ಪಡಿಸುವುದು ಮುಂತಾದ ಪ್ರಮುಖ ಕರ್ತವ್ಯಗಳನ್ನು ನಾಡಸಭೆ ನಿರ್ವಹಿಸುತ್ತಿತ್ತು. ಆ ಕಾಲದಲ್ಲಿ ನಾಡಸಭೆ, ಪಟ್ಟಣಸಭೆ, ನಗರ

ವ್ಯಾಪಾರಿಗಳ ಸಭೆ ಇವುಗಳ ನಡುವೆ ಮಧುರ ಹೊಂದಾಣಿಕೆ ಇದ್ದಿತು. ಇವುಗಳು ಒಂದಕ್ಕೊಂದು ಪೂರಕವಾಗುವಂತೆ ಕಾರ್ಯನಿರ್ವಹಿಸುತ್ತಿದ್ದವು. ನಾಡಸಭೆಗಳು ಆಗಾಗ್ಗೆ ಸಭೆ ಸೇರಿ ತಮ್ಮ ನಾಡಿನ ಪ್ರಜೆಗಳ ಹಿತಾಸಕ್ತಿಗಳಿಗೆ ಅನುಗುಣವಾಗಿ, ಅವರ ಸರ್ವತೋಮುಖ ಏಳ್ಗೆಗೆ ಅನುಕೂಲವಾಗುವ ಕ್ರಮಗಳನ್ನು ಕೈಗೊಳ್ಳುತ್ತಿದ್ದವು.

**ಮಹಾನಾಡು**

ಹಲವು ನಾಡುಗಳು ಹಾಗೂ ನಗರಪ್ರದೇಶಗಳನ್ನೊಳಗೊಂಡ ವಿಸ್ತೃತವಾದ ಪ್ರದೇಶದ ಸ್ವಯಮಾಡಳಿತ ಸಂಸ್ಥೆಯನ್ನು ಮಹಾನಾಡು ಎಂದು ಕರೆಯಲಾಗುತ್ತಿತ್ತು. ಇವು ಸರಿಸುಮಾರು ೧೨–೧೩ನೇ ಶತಮಾನದದಿಂದೇಚೆಗೆ ಅಸ್ತಿತ್ವಕ್ಕೆ ಬಂದಿರಬಹುದು. ಮಹಾನಾಡುಗಳನ್ನು ಪದಿನಾಡು (ಹತ್ತುನಾಡುಗಳ ಒಕ್ಕೂಟ) ಪದಿನಾಲ್ಕು ನಾಡು (ಹದಿನಾಲ್ಕು ನಾಡುಗಳ ಒಕ್ಕೂಟ) ಹೀಗೆ ಸಂಖ್ಯಾಸೂಚಕವಾಗಿ ಕರೆಯಲಾಗುತ್ತಿತ್ತು. ಮಹಾನಾಡುಗಳನ್ನು ಇಂದಿನ ಜಿಲ್ಲಾ ಪರಿಷತ್ ಇಲ್ಲವೆ ಜಿಲ್ಲಾ ಪಂಚಾಯತ್‌ಗೆ ಹೋಲಿಸಬಹುದಾಗಿದೆ. ಮಹಾನಾಡುಗಳ ಸಭೆಗಳು ನಾಡಸಭೆಗಳಂತೆ ಆಗಾಗ್ಗೆ ಸೇರದೆ ಅಪರೂಪವಾಗಿ (ವಿರಳವಾಗಿ) ಸೇರುತ್ತಿದ್ದವು. ಮಹಾನಾಡು ಸಭೆಗಳಿಗೆ ಆಡಳಿತ ಅಥವಾ ಹೊಣೆಗಾರಿಕೆ ಜವಾಬ್ದಾರಿ ಇರಲಿಲ್ಲ. ಈ ಸಭೆಯು ವಿಶೇಷವಾಗಿ ವರ್ತಕ ಸಮುದಾಯ, ನಗರ ಪ್ರತಿನಿಧಿಗಳು ವೃತ್ತಿಪರ ಸಂಘಟನೆಗಳ ಸದಸ್ಯರು, ರಾಜ ಪ್ರತಿನಿಧಿಗಳು ಹಾಗೂ ಸ್ಥಳೀಯ ಸಾಮಾನ್ಯ ಜನರಿಂದ ತುಂಬಿರುತ್ತಿತ್ತು. ಮಹಾನಾಡುಗಳು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಮೇಲೆ ತಮ್ಮ ಪ್ರಭಾವವನ್ನು ಬೀರಬಲ್ಲವಾಗಿದ್ದವು. ಇವು ತಮ್ಮ ಪ್ರದೇಶ ವ್ಯಾಪ್ತಿಯಲ್ಲಿನ ನ್ಯಾಯ ವ್ಯವಸ್ಥೆ, ನೀರವಾರಿ ಸೌಲಭ್ಯ, ತೆರಿಗೆ ವಿಧಿಸುವಿಕೆ ಮುಂತಾದ ವಿಶೇಷ ಅಧಿಕಾರ ಪಡೆದಿದ್ದವು. ರಾಜ, ಮಹಾರಾಜರು ಈ ಸಂಸ್ಥೆಗಳಿಗೆ ಸಾಕಷ್ಟು ಸ್ವಾಯತ್ತತೆ ನೀಡಿದ್ದರು. ಹಣಕಾಸಿನ ವಿಷಯದಲ್ಲಿಇವು ಸ್ವಾವಲಂಬನೆ ಹೊಂದಿದ್ದವು.

**ಪೌರಾಡಳಿತ**

ಪಟ್ಟಣಗಳಲ್ಲಿ ಪೌರಸಭೆಗಳು ಇದ್ದ ಬಗ್ಗೆ, ಪಟ್ಟಣಗಳ ನಿರ್ಮಾಣ ಹಾಗೂ ಅವುಗಳಿಗೆ ನಾಗರಿಕ ಸೌಲಭ್ಯ ಒದಗಿಸಿಕೊಡುವ ಬಗ್ಗೆ, ಧರ್ಮಸತ್ರಗಳ ನಿರ್ವಹಣೆಯಂತಹ ಪ್ರಮುಖ ಕಾರ್ಯಗಳು ಪಟ್ಟಣ ಪ್ರಮುಖರೆನಿಸಿದ ಪಟ್ಟಣಸ್ವಾಮಿಗಳು ನೋಡಿಕೊಳ್ಳುತ್ತಿದ್ದ ಬಗ್ಗೆ ನಮಗೆ ಶಾಸನಗಳಿಂದ ತಿಳಿದುಬರುತ್ತದೆ. ಗಂಗರ ಕಾಲದಲ್ಲಿ ಅವರ ರಾಜ್ಯಾಡಳಿತಕ್ಕೆ ಒಳಪಟ್ಟಂತೆ ಪೌರಸಭೆಗಳು ಇದ್ದವೆಂದು ತಿಳಿದು ಬರುತ್ತದೆ. ಪಟ್ಟಣದ ಆಡಳಿತ ವ್ಯವಸ್ಥೆಯಲ್ಲಿ ವ್ಯಾಪಾರಸ್ಥ ಅಥವಾ ವರ್ತಕರದೇ ಪ್ರಧಾನ ಪಾತ್ರವಿದ್ದಿತು. ಗಾಣಿಗರು, ಕಂಬಾರರು, ಕಾರ್ಮಿಕರು, ಮೇದರು, ಪಂಚಮರು ಹಾಗೂ ಲೇವಾದೇವಿದಾರರು ಈ ವರ್ತಕರೊಂದಿಗೆ ಸಹಕರಿಸುತ್ತಿದ್ದರು. ಪಟ್ಟಣದ ಎಲ್ಲ ೧೮ ಜಾತಿಯ (ಪ್ರಕೃತಿಯ) ಜನರ ಪ್ರಾತಿನಿಧ್ಯ ಪೌರಸಭೆಗಳಿಗೆ ಇರುತ್ತಿತ್ತು. ಇಂತಹ ಪೌರಾಡಳಿತ ಸಭೆಗಳಿಗೆ "ಆಚಾರ ವ್ಯವಸ್ಥೆ" ಎಂದು ಶಾಸನಗಳಲ್ಲಿ ಉಲ್ಲೇಖವಿದ್ದು, ಪೌರಾಡಳಿತದ ವಿವಿಧ ಅಂಗ ಸಂಸ್ಥೆಗಳ ಬಗ್ಗೆಯೂ ಶಾಸನಗಳಲ್ಲಿ ಉಲ್ಲೇಖವಿದೆ.

ಈ ಪೌರಾಡಳಿತವು ಮಧ್ಯಕಾಲೀನ ಯುಗದಲ್ಲಿ ಪ್ರಾರಂಭಗೊಂಡಿದ್ದು, ಇದು ಗ್ರಾಮದ ಆಡಳಿತಕ್ಕಿಂತ ಭಿನ್ನವೂ, ವೈವಿಧ್ಯಮಯವೂ ಆಗಿದ್ದಿತು. ಪೌರಸಭೆಗಳಿಗೆ ರಾಜನಿಂದ ನಿಯುಕ್ತನಾದ ತಳಾರನೆಂಬ ಅಧಿಕಾರಿ ಇರುತ್ತಿದ್ದನು. ಪಟ್ಟಣದ ನಾಗರಿಕರ ಆಸ್ತಿಪಾಸ್ತಿ ರಕ್ಷಣೆ ಅವನ ಕೆಲಸವಾಗಿತ್ತು. ಪೌರಸಭೆಗಳಲ್ಲಿ, ಪೌರಾಧ್ಯಕ್ಷ, ಸೇನಭೋವ (ಶಾನುಭೋಗ), ಮಣಿಗಾರ, ಮುಮುಗಿಗಳಲ್ಲದೆ ವ್ಯಾಪಾರಿ ಸಂಘಗಳ ಪ್ರತಿನಿಧಿಗಳು ಸಹ ಇರುತ್ತಿದ್ದರು. ಪೌರಸಭೆಗಳು, ಪಟ್ಟಣದ ಮನೆಗಳು, ಎಣ್ಣೆಗಾಣಗಳು ಹಾಗೂ ವಿವಿಧ ಕಸಬುಗಳಲ್ಲಿ ನಿರತರಾದವರ ಮೇಲೆ ಮತ್ತು ವ್ಯಾಪಾರಿ ಮಳಿಗೆಗಳ ಮೇಲೆ ತೆರಿಗೆ ವಿಧಿಸುವ ಆಧಿಕಾರ ಹೊಂದಿತ್ತು. ಬ್ರಾಹ್ಮಣರಿಗೆ ತೆರಿಗೆಯಿಂದ ವಿನಾಯಿತಿ ಇತ್ತು. ವಸತಿ–ಮನೆ ಹಾಗೂ ರಸ್ತೆಗಳಿಗೆ ಸಂಬಂಧಿಸಿದ ವ್ಯಾಜ್ಯ ಅಥವಾ ಬಿಕ್ಕಟ್ಟುಗಳನ್ನು ಸಭೆ ತೀರ್ಮಾನಿಸುತ್ತಿತ್ತು. ಬೆಲೆ ನಿಯಂತ್ರಣ, ತೆರಿಗೆ ನಿರ್ವಹಣೆ, ಪಟ್ಟಣ ನೈರ್ಮಲ್ಯ ಕಾಪಾಡುವುದು, ಪಟ್ಟಣಕ್ಕೆ ಬಂದು ಹೋಗುವವರ ಲೆಕ್ಕ ವಿವರ ಹಾಗೂ ಇನ್ನಿತರ ಎಲ್ಲ ಜವಾಬ್ದಾರಿಗಳ ಬಗೆಗೆ ಕೈಗೊಂಡ ಕ್ರಮಗಳ ಬಗ್ಗೆ ರಾಜನಿಗೆ ಕಾಲಕಾಲಕ್ಕೆ ವರದಿ ಒಪ್ಪಿಸುವುದು ಸಭೆಯ ಕರ್ತವ್ಯವಾಗಿತ್ತು. ಪೌರಸಭೆಗಳು ಹೆಚ್ಚಿನ ಸ್ವಯಂ ಅಧಿಕಾರ ಹೊಂದಿದ್ದು ರಾಜನು ಈ ಸಭೆಗಳ ಹಕ್ಕುಬಾಧ್ಯತೆಗಳನ್ನು ರಕ್ಷಿಸುತ್ತಿದ್ದನು.

## ಆಧುನಿಕ ಕಾಲದ ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆ

ಭಾರತದಲ್ಲಿ ಬ್ರಿಟಿಷ್‌ರ ಆಡಳಿತಾವಧಿಯಲ್ಲಿ ಪೌರಸಮಿತಿಗಳು ರಚನೆಗೊಂಡವು. ಪ್ರಥಮ ಹಂತದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ೧೮೬೪ರಲ್ಲಿ ಪೌರ ಸಮಿತಿಗಳು ರಚನೆಯಾದ ಬಗ್ಗೆ ದಾಖಲೆಗಳು ಲಭ್ಯವಿವೆ. ೧೯೦೬ ಪುರಸಭೆಗಳ ಏಳನೇ ಅಧಿನಿಯಮದ ಮೇರೆಗೆ ಹಲವು ಪುರಸಭೆಗಳು ರೂಪುಗೊಂಡವು. ಆದರೆ ಅವು ಸದಸ್ಯರ ಕೊರತೆ ಹಾಗೂ ಹಣಕಾಸಿನ ಮೇಲಿನ ಹತೋಟಿ ಇಲ್ಲದ ಕಾರಣ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲವಾದವು. ಈ ಕುಂದುಕೊರತೆಯನ್ನು ಸರಿಪಡಿಸುವುದುಕ್ಕಾಗಿ ಆಗಿನ ಮೈಸೂರು ಸರ್ಕಾರವು ೧೯೧೪ರಲ್ಲಿ ಎರಡು ಸಮಿತಿಗಳನ್ನು ರಚಿಸಿತು. ಅವು ೧) ಎಂ.ಕಾಂತರಾಜು ಅರಸು ಅಧ್ಯಕ್ಷತೆಯ 'ಸ್ಥಳೀಯ ಸ್ವಯಮಾಧಿಕಾರ ಸಮಿತಿ' ಮತ್ತು ೨) ದಿವಾನ ಬಹದ್ದೂರ್ ಸಿ. ಶ್ರೀನಿವಾಸ ಅಯ್ಯಂಗಾರ್ ಅಧ್ಯಕ್ಷತೆಯ "ಸ್ಥಳೀಯ ಹಣಕಾಸು ಸಮಿತಿ". ಇವು ಎಲ್ಲಾ ಸ್ಥಳೀಯ ಮಂಡಳಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಈ ಸಮಿತಿಗಳು ಪರಿಶೀಲಿಸಬೇಕಾಗಿತ್ತು. ಎಲ್ಲಾ ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಹೆಚ್ಚಾಗಿರಬೇಕೆಂದು ಹಾಗೂ ತಾಲೂಕು ಮಂಡಳಿಗಳಿಗೆ ಮುಕ್ತ ಅಧಿಕಾರವಿರಬೇಕೆಂದು ಆ ಸಮಿತಿಗಳು ಶಿಫಾರಸ್ಸು ಮಾಡಿದ್ದವು. ೧೯೦೬ರ ಪುರಸಭಾ ನಿಯಮಗಳಿಗೆ ತಿದ್ದುಪಡಿ ಮಾಡಿದ ಹೊಸ ಮಸೂದೆಯನ್ನು ೧೯೧೭ನೇಯ ಜೂನ್ ೨೯ರಂದು ಮಂಡಿಸಲಾಯಿತು. ೧೯೧೮ರ ಸ್ಥಳೀಯ ಮಂಡಳಿಗಳ ಮತ್ತು ಗ್ರಾಮಪಂಚಾಯಿತಿಗಳ ಆರನೇ ಅಧಿನಿಯಮವು ಎಲ್ಲಾ ಸ್ಥಳೀಯ ಮಂಡಳಿಗಳಿಗೆ ಸಂಬಂಧಿಸಿದ ಕಾನೂನನ್ನು ಪುನರ್ ರೂಪಿಸಿತಲ್ಲದೆ ಹೆಚ್ಚು ಅಧಿಕಾರ ಹೊಂದಿದ ಗ್ರಾಮಪಂಚಾಯಿತಿಗಳ ಸ್ಥಾಪನೆಗಳಿಗೆ ಅವಕಾಶವಿತ್ತಿತು. ಹೀಗೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಥಮ ಬಾರಿಗೆ ಪ್ರತ್ಯೇಕವಾದ ಸ್ವಯಂ ಆಡಳಿತ ಸಂಸ್ಥೆಗಳು ಸ್ಥಾಪನೆಗೊಂಡವು. ೧೯೧೮ರ ಅಧಿನಿಯಮದ ಪ್ರಕಾರ ತಾಲೂಕು ಮತ್ತು ಜಿಲ್ಲಾ ಮಂಡಳಿಗಳಲ್ಲಿ ವಿವಿಧ ಜನಾಂಗಗಳಿಗೆ ಪ್ರಾತಿನಿಧ್ಯ ಒದಗಿಸಿಕೊಡುವ ನಿಯಮಗಳನ್ನು ರೂಪಿಸಲಾಯಿತು. ಜಿಲ್ಲಾ ಮತ್ತು ತಾಲೂಕು ಸಮಿತಿಗಳು ನಿರ್ವಹಿಸುತ್ತಿದ್ದ ಅಭಿವೃದ್ಧಿ ಕಾರ್ಯನಿರ್ವಹಣೆಯನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಮಂಡಳಿಗಳು ಪದನಿಮಿತ್ತ ಉಪಾಧ್ಯಕ್ಷರನ್ನು ಹೊಂದಿದ್ದು, ನಗರ ಮತ್ತು ಪುರಸಭೆಗಳಿಗೆ ಅಧ್ಯಕ್ಷರು ಆಯ್ಕೆಯಾದ ಕಾರಣ, ಜಿಲ್ಲಾಧಿಕಾರಿಗಳು ಅವುಗಳ ಅಧ್ಯಕ್ಷತೆಯನ್ನು ಬಿಟ್ಟುಕೊಟ್ಟರು. ಅಧಿಕಾರ ವಿಕೇಂದ್ರೀಕರಣವನ್ನು ಕ್ರಮೇಣ ಆಡಳಿತದಲ್ಲಿ ಅಳವಡಿಸಿಕೊಳ್ಳಬೇಕೆಂದು ಬ್ರಿಟಿಷ್‌ರ ಧೋರಣೆಯಂತೆ ಸರ್ಕಾರವು ತನ್ನ ಹತೋಟಿಯನ್ನು ಇನ್ನಷ್ಟು ಸಡಿಲಗೊಳಿಸಿ, ಮಂಡಳಿಗಳ ಅಧಿಕಾರ ವ್ಯಾಪ್ತಿ ಹೆಚ್ಚಿಸಿ, ಕೆಲವು ಆಯ್ದ ಮಂಡಳಿಗಳಿಗೆ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನೂ ಸಹ ವಹಿಸಿಕೊಟ್ಟಿತು.

೧೯೨೧ರ ಮೈಸೂರು ಸ್ಥಳೀಯ ಬೋರ್ಡ್‌ಗಳು ಮತ್ತು ಗ್ರಾಮಪಂಚಾಯಿತಿ ತಿದ್ದುಪಡಿ ನಿಬಂಧನೆಯ ಪ್ರಕಾರ ಶಿಕ್ಷಣ, ಕೃಷಿ ಮತ್ತು ಕೈಗಾರಿಕೆಗಳಿಗೆ ವಿಶೇಷ ಗಮನ ಕೊಡುವುದರ ಮೂಲಕ ಆರ್ಥಿಕ ಅಭಿವೃದ್ಧಿಗೆ ಗಮನ ನೀಡಲಾಯಿತು. ಅವುಗಳನ್ನು ಜಿಲ್ಲಾ ಮಂಡಳಿಗಳ ಆಡಳಿತ ವ್ಯಾಪ್ತಿಗೆ ತರಲಾಯಿತು. ಮಂಡಳಿಗಳಿಗೆ ಶಿಕ್ಷಣ ಕರವನ್ನು ವಿಧಿಸಲು ಅಧಿಕಾರ ನೀಡಲಾಯಿತು.

## ಪಂಚಾಯಿತಿಗಳ ರಚನೆ

೧೯೧೯ರಲ್ಲಿ ಹಲವು ಗ್ರಾಮಗಳ ಗುಂಪಿಗೆ ಒಂದರಂತೆ ಗ್ರಾಮಪಂಚಾಯಿತಿಯನ್ನು ಸ್ಥಾಪಿಸಲಾಯಿತು. ಪ್ರತಿ ಪಂಚಾಯಿತಿಗೂ ಪ್ರತ್ಯೇಕ ಸಂಪನ್ಮೂಲಗಳಿದ್ದು ಅವುಗಳ ಆಡಳಿತಕ್ಕೆ ನಾಮಕರಣಗೊಂಡ ಅಧ್ಯಕ್ಷರಿದ್ದರು. ಇಂತಹ ಪಂಚಾಯಿತಿಗಳ ಪ್ರಗತಿ ಸಮಾಧಾನಕರವಾಗಿದ್ದರೆ ಮಾತ್ರ ಚುನಾವಣೆ ಹಕ್ಕನ್ನು ಕೊಡಲಾಗುತ್ತಿತ್ತು. ಆಯ್ದ ಕೆಲವು ತಾಲೂಕು ಪಂಚಾಯಿತಿಗಳಿಗೆ ನ್ಯಾಯ ಪಂಚಾಯಿತಿ ಹಾಗೂ ಅರಣ್ಯ ಪಂಚಾಯಿತಿ ನಿಯಮಗಳ ರೀತ್ಯ ಅಧಿಕಾರ ವಹಿಸಿಕೊಡಲಾಯಿತಲ್ಲದೆ ಮುಜರಾಯಿ ಸಂಸ್ಥೆಗಳ ಮೇಲಿನ ಹತೋಟಿ ಹಾಗೂ ಪ್ರಾಥಮಿಕ ಶಾಲೆಗಳ ಮೇಲ್ವಿಚಾರಣೆಗಳನ್ನು ವರ್ಗಾಯಿಸಲಾಯಿತು. ಪಂಚಾಯಿತಿಗಳ ಕಾರ್ಯಪರಿಶೀಲನೆ ಹಾಗೂ ಮೇಲ್ವಿಚಾರಣೆ ಹಾಗೂ ಹತೋಟಿ ಅಧಿಕಾರವನ್ನು ತಹಸೀಲ್ದಾರ್ (ಅಮಲ್ದಾರ್)ರಿಗೆ ನೀಡಲಾಗಿತ್ತು. ಈ ಕ್ರಮದಿಂದಾಗಿ ಜಿಲ್ಲಾ, ತಾಲೂಕು, ಅಂತರ ತಾಲೂಕು ಹಾಗೂ ಗ್ರಾಮಗಳಿಗೆ ನೀಡಲಾಗುವ ಸೌಲಭ್ಯಗಳಾದ ನಿರ್ಮಲೀಕರಣ, ಸಂಪರ್ಕ ವ್ಯವಸ್ಥೆ, ವೈದ್ಯಕೀಯ, ಶಿಕ್ಷಣ ಮುಂತಾದವುಗಳನ್ನು ನೀಡಲು ಜಿಲ್ಲಾ ಮಂಡಳಿಗಳಿಗೆ ಸಂಪೂರ್ಣ ಅಧಿಕಾರ ದೊರಕಿತು. ತಾಲೂಕು ಮಂಡಳಿಗಳನ್ನು ರದ್ದುಗೊಳಿಸಿದ್ದರಿಂದ, ೧೯೨೭ರಲ್ಲಿ ಜಿಲ್ಲಾ ಮಂಡಳಿಗಳನ್ನು ಪುನರ್ ರಚಿಸಲಾಯಿತು.

**ಮೈಸೂರು ಪುರಸಭೆಗಳ ಅಧಿನಿಯಮ–೧೯೩೩**

ಮೈಸೂರು ಪುರಸಭೆಗಳ ಅಧಿನಿಯಮ ೧೯೩೩ರ ಜಾರಿಗೊಳ್ಳುವ ಪೂರ್ವದಲ್ಲಿ ಮೈಸೂರು ಸಣ್ಣ ಪುರಸಭೆಗಳ ಅಧಿನಿಯಮ, ನಗರ (ದೊಡ್ಡ) ಪುರಸಭೆಗಳ ಅಧಿನಿಯಮ ಹಾಗೂ ನಗರ ಪ್ರದೇಶಗಳಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಅಧಿನಿಯಮಗಳು ಜಾರಿಯಲ್ಲಿದ್ದವು. ೧೯೩೯ರ ವೇಳೆಗೆ ಪ್ರಾಂತ್ಯದ ಪ್ರತಿಯೊಂದು ಜಿಲ್ಲಾ ಮಂಡಳಿಗೂ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿದ್ದು, ಸರಕಾರಿ ಅಧಿಕಾರಿ ಹಾಗೂ ನಾಮಕರಣ ಸದಸ್ಯರ ಸಂಖ್ಯೆಯನ್ನು ಕಡಿಮೆಗೊಳಿಸಲಾಯಿತು. ಈ ಅಧಿನಿಯಮವು ಗ್ರಾಮೀಣ ಸಂಸ್ಥೆಗಳನ್ನು ಇನ್ನಷ್ಟು ಬಲಗೊಳಿಸಿ ಅಭಿವೃದ್ಧಿ ಕಾರ್ಯಗಳನ್ನೂ ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಮಾಡಲು ನೆರವಾಯಿತು. ೧೯೪೦ರಲ್ಲಿ ಹೊರಡಿಸಲಾದ ಸರ್ಕಾರಿ ಆದೇಶಗಳ ಮೂಲಕ ತೀವ್ರ ಪ್ರಚಾರ, ಗ್ರಾಮ ಸುಧಾರಣೆಗೆ ತರಬೇತುಗೊಂಡ ಗ್ರಾಮೀಣ ಕಾರ್ಯಕರ್ತರ ನಿಯೋಜನೆ, ಮುಂತಾದ ಕ್ರಮಗಳನ್ನು ಕೈಗೊಳ್ಳಲಾಯಿತು. ಸ್ವಾತಂತ್ರ್ಯಾ ನಂತರದ ಅವಧಿಯಲ್ಲಿ ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಸ್ವಾಯತ್ತತೆ ಪಡೆದು, ಅಭಿವೃದ್ಧಿ ಹೊಂದಿ ಸಧೃಡಗೊಂಡವು.

**ಮೈಸೂರು ಪುರಸಭೆಗಳ ಅಧಿನಿಯಮ–೧೯೫೧**

ಸಣ್ಣ ಹಾಗೂ ದೊಡ್ಡ ಪುರಸಭೆಗಳ ತಾರತಮ್ಯವನ್ನು ಈ ಅಧಿನಿಯಮವು ಪ್ರಥಮ ಬಾರಿಗೆ ತೊಡೆದುಹಾಕಿತು. ವಯಸ್ಕ ಮತದಾನದ ಮೂಲಕ ಎಲ್ಲ ಪುರಸಭೆಗಳ ಸದಸ್ಯರ ಚುನಾವಣೆಗೆ ಅವಕಾಶ ದೊರಕಿತಲ್ಲದೆ, ಚುನಾಯಿತರಾದ ಸದಸ್ಯರು ತಮ್ಮಲ್ಲಿಯೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆಯ್ಕೆಮಾಡಿಕೊಳ್ಳುವ ಅಧಿಕಾರವನ್ನು ಪಡೆದರು. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪುರಸಭೆಗಳಿಗೆ ಚುನಾವಣೆ ನಡೆಸಲು ಅವಕಾಶವಿದ್ದಿತು. ಅಧ್ಯಕ್ಷರು ಸಭೆ ಕರೆದು ಕಲಾಪ ನಡೆಸುವ ಅಧಿಕಾರ ಪಡೆದಿದ್ದರು. ಪುರಸಭೆಯ ಕಾರ್ಯಾಲಯದ ಎಲ್ಲ ಸಿಬ್ಬಂದಿಯ ಮೇಲ್ವಿಚಾರಣೆ, ಆಡಳಿತ ಹಾಗೂ ಜನಹಿತ ಕಾರ್ಯಕೈಗೊಳ್ಳುವ ಜವಾಬ್ದಾರಿಯನ್ನು ಅಧ್ಯಕ್ಷರು ಹೊಂದಿದ್ದರು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅವರ ಕಾರ್ಯನಿರ್ವಹಿಸಬೇಕಾಗುತ್ತಿತ್ತು.

ಪುರಸಭೆಯ ಚಟುವಟಿಕೆಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ೧) ನೈರ್ಮಲ್ಯ, ೨) ಆರೋಗ್ಯ, ೩) ರಕ್ಷಣೆ ಮತ್ತು ೪) ಸಾರ್ವಜನಿಕ ಸೌಕರ್ಯಗಳಾಗಿ ವಿಂಗಡಿಸಲಾಗಿತ್ತು. ಸಾರ್ವಜನಿಕ ಸೌಕರ್ಯಗಳಡಿ ರಸ್ತೆ ನಿರ್ವಹಣೆ, ಶಿಕ್ಷಣ, ಉದ್ಯಾನಗಳು, ಗ್ರಂಥಾಲಯಗಳು ಹಾಗೂ ತಂಗುದಾಣ ಮತ್ತು ವಿಶ್ರಾಂತಿ ಗೃಹಗಳ ನಿರ್ಮಾಣದಂತಹ ಕಾರ್ಯಜವಾಬ್ದಾರಿ ಪುರಸಭೆಯದಾಗಿತ್ತು.

೧೯೫೧ರ ಅಧಿನಿಯಮದ ಪ್ರಕಾರ ಕೋಲಾರ ಜಿಲ್ಲೆಯಲ್ಲಿ ಒಟ್ಟು ೧೩ ಪುರಸಭೆಗಳು ರಚನೆಗೊಂಡವು. ಅವು ಕ್ರಮವಾಗಿ, ಕೋಲಾರ, ರಾಬರ್ಟ್‌ಸನ್‌ಪೇಟೆ, ಬಂಗಾರಪೇಟೆ, ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಮಂಚೇನಹಳ್ಳಿ, ಬಾಗೇಪಲ್ಲಿ ಮತ್ತು ಗುಡಿಬಂಡೆ ಹಾಗೂ ಕೋಲಾರ ಗೋಲ್ಡ್ ಫೀಲ್ಡ್ (ಕೆ.ಜಿ.ಎಫ್) ಸ್ಯಾನಿಟರಿ ಬೋರ್ಡ್ ರಚನೆಗೊಂಡಿತು. ಆಸ್ತಿ ತೆರಿಗೆ, ಆಕ್ಟ್ರಾಯ್, ಮಾರುಕಟ್ಟೆ ಶುಲ್ಕ, ಮನರಂಜನಾ ತೆರಿಗೆ ಮತ್ತು ಇನ್ನಿತರ ಉಪಕರ ಹಾಗೂ ತೆರಿಗೆಗಳನ್ನು ಹಾಕಲು ಪುರಸಭೆಗಳಿಗೆ ಅಧಿಕಾರ ನೀಡಲಾಯಿತು.

**ವೆಂಕಟಪ್ಪ ಸಮಿತಿ**

ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳು ಹೆಚ್ಚು ಜನಹಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸಿ, ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತಿರುವ ಬಗ್ಗೆ ಹಾಗೂ ಅವುಗಳ ಅಭಿವೃದ್ಧಿ ಯೋಜನೆಗಳ ಪ್ರತಿ ಪರಿಶೀಲನೆಗಾಗಿ ೧೯೪೯ರಲ್ಲಿ ವಿ.ವೆಂಕಟಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಯಿತು. ಈ ಸಮಿತಿಯು ೧೯೫೦ರ ಜೂನ್ ೧೨ ರಂದು ತನ್ನ ವರದಿ ಸಲ್ಲಿಸಿತು. ಸಮಿತಿ ಮಾಡಿದ ಶಿಫಾರಸ್ಸುಗಳನ್ನು ೧೯೫೨ ಮೈಸೂರು ಗ್ರಾಮಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಅಧಿನಿಯಮಗಳಲ್ಲಿ ಅಳವಡಿಸಲಾಯಿತು. ತತ್ಪರಿಣಾಮವಾಗಿ ಎರಡು ಹಂತದ ಸ್ಥಳೀಯ ಸ್ವಯಮಾಡಳಿತ– ಸಂಸ್ಥೆಗಳು ರೂಪುಗೊಂಡವು. ಪಂಚಾಯಿತಿಗಳು ಜಿಲ್ಲಾಮಂಡಳಿ ಸದಸ್ಯರನ್ನು ಪರೋಕ್ಷವಾಗಿ ಚುನಾಯಿಸಬಹುದಾಯಿತು. ಆದರೆ ಚುನಾವಣೆ ನಡೆಸುವ ಬಗ್ಗೆ ಯಾವುದೇ ಪ್ರಸ್ತಾಪವಿರಲಿಲ್ಲ.

೧೯೫೩ರಲ್ಲಿ ಡಿ.ಎಚ್.ಚಂದ್ರಶೇಖರಯ್ಯರವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಇನ್ನೊಂದು ವಿಚಾರಣಾ ಸಮಿತಿಯು ಜಿಲ್ಲಾ ಮಂಡಳಿಗಳನ್ನು ಮುಂದುವರೆಸುವ ಮತ್ತು ತಾಲೂಕು ಮಂಡಳಿಗಳನ್ನು ಪ್ರಾರಂಭಿಸುವ ಅವಶ್ಯಕತೆಗಳ ಬಗ್ಗೆ ಪರಿಶೀಲನೆ ನಡೆಸಿ, ೧೯೫೪ರಲ್ಲಿ ಮುಂದಿನ ಶಿಫಾರಸ್ಸುಗಳನ್ನು ಮಾಡಿತು. ೧) ತಾಲೂಕು ಮಂಡಳಿಗಳ ಸದಸ್ಯರುಳ್ಳ ಜಿಲ್ಲಾ ಮಂಡಳಿಗಳನ್ನು ಮುಂದುವರೆಸುವುದು. ೨) ತಾಲೂಕು ಮಂಡಳಿಗಳನ್ನು ಪುನರಾರಂಭಿಸುವುದು ಹಾಗೂ ೩) ತಾಲೂಕು ಮಂಡಳಿಯ ಸದಸ್ಯತ್ವದ ಮೂರನೇ ಒಂದು ಭಾಗವನ್ನು ಗ್ರಾಮಪಂಚಾಯಿತಿ ಮತ್ತು ಪುರಸಭಾ ಮಂಡಳಿಗಳ ಪ್ರತಿನಿಧಿಗಳಿಗಾಗಿ ಕಾಯ್ದಿರಿಸಿ ಉಳಿದ ಮೂರನೇ ಎರಡು ಭಾಗವನ್ನು ತಾಲೂಕಿನಲ್ಲಿ ನೇರ ಚುನಾವಣೆಯ ಮೂಲಕ ಆಯ್ಕೆ ಮಾಡುವುದು. ಆದರೆ ರಾಜ್ಯ ಪುನರ್ ವಿಂಗಡನೆಯಾದ ಬಳಿಕ ಜಾರಿಗೆ ತರಲಾದ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ (೧೯೫೯)ವು ಗ್ರಾಮೀಣ ಸಂಸ್ಥೆಗಳಿಗೆ ಸಂಬಂಧಿಸಿದ ಹಿಂದಿನ ಎಲ್ಲಾ ಶಾಸನಗಳಿಗೆ ಪರ್ಯಾಯವಾಗಿ ಜಾರಿಗೊಂಡಿತು.

## ರಾಜ್ಯ ಪುನರ್ವಿಂಗಡನೆ ನಂತರದ ಬೆಳವಣಿಗೆಗಳು

ರಾಜ್ಯದ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಅನುವು ಮಾಡಿ ಕೊಡುವ ಮತ್ತು ಹೆಚ್ಚು ವ್ಯಾಪಕವಾದ ಏಕರೂಪ ಕಾನೂನಿಕ ಅವಶ್ಯಕತೆ ಉಂಟಾಯಿತು. ಏಕೆಂದರೆ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರ ಸಹಭಾಗಿತ್ವದಿಂದ ಕೈಗೊಳ್ಳಬೇಕಾಗಿತ್ತು ಹಾಗಾಗಿ ದೇಶದ ಇತರೆಡೆಗಳಂತೆ ಕರ್ನಾಟಕದಲ್ಲಿಯೂ ೧೯೫೭ರಲ್ಲಿ ಬಲವಂತರಾಯ್ ಮೆಹ್ತಾ ಸಮಿತಿ ವರದಿಯ ಮೇರೆಗೆ ಪಂಚಾಯಿತಿ ರಾಜ್ ಕಾನೂನನ್ನು ಜಾರಿಗೊಳಿಸಲಾಯಿತು. ನಂತರ ಮೂರು ಹಂತಗಳ ಪಂಚಾಯತ್‌ರಾಜ್ ಕಾಯ್ದೆ (೧೯೫೯), ಕರ್ನಾಟಕ ಗ್ರಾಮ ಪಂಚಾಯಿತಿಗಳು ಹಾಗೂ ಸ್ಥಳೀಯ ಮಂಡಳಿಗಳ ಕಾಯ್ದೆಯಾಗಿ ಜಾರಿಗೆ ಬಂದಿತು. ಅದರಂತೆ ಗ್ರಾಮ ಪಂಚಾಯಿತಿ, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಗಳಿಗೆ ಅಧಿಕೃತ ಜವಾಬ್ದಾರಿ ವರ್ಗಾಯಿಸಲ್ಪಟ್ಟಿತು. ಪುನರ್‌ವಿಂಗಡನೆ ಸಮಯದಲ್ಲಿ ರಾಜ್ಯದ ಬೇರೆಬೇರೆ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾನೂನುಗಳನ್ನು ರದ್ದುಪಡಿಸಿ ಈ ಹೊಸ ಕಾನೂನನ್ನು ೧೯೬೦ರ ನವೆಂಬರ್ ಒಂದರಂದು ಜಾರಿಗೊಳಿಸಲಾಯಿತು. ಪಂಚಾಯತ್‌ರಾಜ್ ಸಂಸ್ಥೆಯ ಮೂಲಕ ಗ್ರಾಮ ಸ್ವರಾಜ್ಯದ ಗುರಿಯನ್ನು ಹೊಂದಿದ್ದ ಏಕೀಕೃತ ಕರ್ನಾಟಕದ ಮೊದಲನೇ ಶಾಸನ ಇದಾಗಿದ್ದಿತು. ಅನಂತರ ೧೯೫೯ರ ಅಧಿನಿಯಮಕ್ಕೆ ೧೯೬೧ರಲ್ಲಿ ೨೬ನೇಯ, ೧೯೬೪ರಲ್ಲಿ ೨೨ನೇಯ, ೧೯೬೫ರಲ್ಲಿ ೫ನೇಯ, ೧೯೭೦ರಲ್ಲಿ ೭ನೇಯ ಹಾಗೂ ೧೯೭೪ರಲ್ಲಿ ೨೧ನೇಯ ತಿದ್ದುಪಡಿಗಳನ್ನು ತರಲಾಯಿತು. ೧೯೮೩ ಮತ್ತು ೧೯೯೩ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ವ್ಯಾಪಕ ತಿದ್ದುಪಡಿ ಮಾಡಿ ಹೊಸ ಪಂಚಾಯತ್ ರಾಜ್ ಕಾಯ್ದೆಯನ್ನು ಜಾರಿಗೊಳಿಸಲಾಯಿತು.

## ಜಿಲ್ಲಾ ಅಭಿವೃದ್ಧಿ ಸಮಿತಿ

ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಹಳೆಯ ಜಿಲ್ಲಾ ಮಂಡಳಿಗಳನ್ನು ರದ್ದುಪಡಿಸಿ, ೧೯೫೯ರ ಕರ್ನಾಟಕ ಗ್ರಾಮ ಪಂಚಾಯತ್‌ಗಳ ಹಾಗೂ ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ ೧೯೬೦ರಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಯಿತು. ಜಿಲ್ಲಾ ಅಭಿವೃದ್ಧಿ ಸಮಿತಿಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ಇತರ ಸ್ಥಳೀಯ ಸಂಸ್ಥೆಗಳಾದ ತಾಲೂಕು ಅಭಿವೃದ್ಧಿ ಮಂಡಳಿಗಳು, ಗ್ರಾಮ ಪಂಚಾಯತಿಗಳು ಮತ್ತು ಪಟ್ಟಣ ಪಂಚಾಯಿತಿಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡುವ ಜವಾಬ್ದಾರಿ ಹೊಂದಿದ್ದವು. ಇದಕ್ಕೆ ಜಿಲ್ಲಾಧಿಕಾರಿಯು ಪದನಿಮಿತ್ತ ಅಧ್ಯಕ್ಷರಾಗಿದ್ದು, ಜಿಲ್ಲಾ ಅಭಿವೃದ್ಧಿ ಸಹಾಯಕರು ಕಾರ್ಯದರ್ಶಿಯಾಗಿರುತ್ತಿದ್ದರು. ಇವರೂ ಅಲ್ಲದೆ ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ, ರಾಜ್ಯಸಭೆ ಮತ್ತು ಶಾಸನಸಭಾ ಸದಸ್ಯರು ಹಾಗೂ ಜಿಲ್ಲೆಯಲ್ಲಿ ವಾಸವಾಗಿರುವ ರಾಜ್ಯ ಸಭೆಯ ಸದಸ್ಯರು, ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ನಾಮಕರಣಗೊಂಡ ಕೆಲವು ಸದಸ್ಯರು ಮತ್ತು ಒಬ್ಬ ಮಹಿಳಾ ಸದಸ್ಯೆ ಇರುತ್ತಿದ್ದರು. ತಾಲೂಕು ಅಭಿವೃದ್ಧಿ ಮಂಡಳಿಗಳ ವಾರ್ಷಿಕ ಆಯವ್ಯಯವನ್ನು ಪರಿಶೀಲಿಸಿ ಮಂಜೂರು ಮಾಡುವುದು, ಅವುಗಳ ಕಾರ್ಯವನ್ನು ಪರಾಮರ್ಶೆ ಮಾಡುವುದು ಮತ್ತು ಅವು ಸಣ್ಣದಾಗಿ ಕಾರ್ಯನಿರ್ವಹಿಸುವುದಕ್ಕೆ ಮಾರ್ಗದರ್ಶನ ನೀಡುವುದು ಮುಂತಾದ ಕೆಲಸಗಳನ್ನು ಈ ಸಮಿತಿಯು ಮಾಡುತ್ತಿತ್ತು.

**ತಾಲೂಕು ಅಭಿವೃದ್ಧಿ ಮಂಡಳಿಗಳು**

ತಾಲೂಕು ಅಭಿವೃದ್ಧಿ ಮಂಡಳಿಗಳು ಹಿಂದಿನ ಮೈಸೂರು ರಾಜ್ಯದಲ್ಲಿನ ಜಿಲ್ಲಾ ಅಧೀನ ಗ್ರಾಮ ಅಭಿವೃದ್ಧಿ ಪ್ರಾತಿನಿಧಿಕ ಮಂಡಳಿಗಳಾಗಿದ್ದು, ಮೈಸೂರು ಸ್ಥಳೀಯ ಮಂಡಳಿಗಳ ಮಾದರಿಯಲ್ಲಿಯೇ ಪ್ರತಿ ತಾಲೂಕಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಆಗಿನ ಸಹಾಯಕ ಆಯುಕ್ತರು ಅದರ ಮುಖ್ಯಸ್ಥರಾಗಿದ್ದರು. ಮಂಡಳಿಯಲ್ಲಿ ೧೨ ಮಂದಿ ಸದಸ್ಯರಿರುತ್ತಿದ್ದರು. ಅವರಲ್ಲಿ ನಾಲ್ವರು ಪದನಿಮಿತ್ತ ಸದಸ್ಯರಾಗಿದ್ದರು. ಇನ್ನು ನಾಲ್ವರು ಚುನಾಯಿತರು ಮತ್ತು ಮೂವರನ್ನು ಸರ್ಕಾರ ನಾಮಕರಣ ಮಾಡುತ್ತಿತ್ತು. ಉಳಿದ ಒಬ್ಬರು ಪುರಸಭೆಯಿಂದ ಚುನಾಯಿತರಾಗುತ್ತಿದ್ದರು. ಜಿಲ್ಲಾ ಮಂಡಳಿಯ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ತಾಲೂಕು ಮಂಡಳಿಗಳು ಒಂದು ವರ್ಷದಲ್ಲಿ ಕನಿಷ್ಠ ಆರು ಬಾರಿ ಸಭೆ ಸೇರಬೇಕಾಗುತ್ತಿತ್ತು. ಸ್ಥಳೀಯ ಮಂಡಳಿ ಮತ್ತು ಗ್ರಾಮಪಂಚಾಯಿತಿ ಕಾಯ್ದೆ (೧೯೧೮) ಜಾರಿಗೊಂಡು ಮುಂದೆ ೧೯೨೨ರಲ್ಲಿ ಅದನ್ನು ರದ್ದು ಮಾಡಲಾಯಿತು. ಈ ಹೊಸ ಕಾಯ್ದೆಯನ್ವಯ ಮಂಡಳಿಗಳಿಗೆ ಚುನಾಯಿತ ಸದಸ್ಯರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲಾಯಿತು. ಇದರಲ್ಲಿ ಪ್ರಮುಖ ಸಮುದಾಯಗಳಿಗೆ ಹೆಚ್ಚಾಗಿ ಪ್ರಾತಿನಿಧ್ಯ ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ಸ್ವತಂತ್ರ ಅಧಿಕಾರವನ್ನು ನೀಡಲಾಯಿತು. ಜಿಲ್ಲಾ ಮತ್ತು ತಾಲೂಕು ಪ್ರಗತಿ ಸಮಿತಿಗಳು ಇಲ್ಲಿಯವರೆಗೂ ನಿರ್ವಹಿಸುತ್ತಿದ್ದ ಜಿಲ್ಲೆಯಲ್ಲಿನ ಆರ್ಥಿಕ ಅಭಿವೃದ್ಧಿ ಕೆಲಸಗಳನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ಗ್ರಾಮ ಪಂಚಾಯಿತಿಗಳ ನಿಬಂಧನೆಗಳನ್ನು ತಿದ್ದುಪಡಿ ಮಾಡಿ, ಸ್ಥಳೀಯ ಮಂಡಳಿಗಳ ಆರ್ಥಿಕ ಅಭಿವೃದ್ಧಿಗೆ ಗಮನ ನೀಡಬೇಕೆಂದು ಮತ್ತು ಶಿಕ್ಷಣ ಸುಂಕವನ್ನು ವಿಧಿಸಬೇಕೆಂಬ ನಿಯಮ ಅಳವಡಿಸಲಾಯಿತು.

**ತಾಲೂಕು ಮಂಡಳಿಗಳ ಪುನರ್ ರಚನೆ.**

ರಾಜ್ಯ ಪುನರ್ ವಿಂಗಡನೆ ನಂತರ (೧೯೬೦ ರಲ್ಲಿ) ತಾಲೂಕು ಅಭಿವೃದ್ಧಿ ಮಂಡಳಿಗಳನ್ನು ಅವು ಆರಂಭಗೊಂಡ ೩೩ ವರ್ಷಗಳ ನಂತರ ಪುನರುಜ್ಜೀವನಗೊಳಿಸಲಾಯಿತು. ೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ, ಗ್ರಾಮಾಂತರ ಸ್ಥಳೀಯ ಸ್ವಯಂ ಸರ್ಕಾರದಲ್ಲಿ ಮೂರು ಹಂತಗಳನ್ನು ಮಾಡಲಾಗಿದ್ದು, ತಾಲೂಕು ಅಭಿವೃದ್ಧಿ ಮಂಡಳಿಯು ಪ್ರಧಾನ ಪಾತ್ರವನ್ನು ಹೊಂದಿದ್ದಿತು. ಇದೇ ರೀತಿಯಲ್ಲಿ ೧೯೬೦ರಲ್ಲಿ ಪ್ರತಿಯೊಂದು ಕಂದಾಯ ತಾಲೂಕಿಗೆ ಅನುಗುಣವಾಗಿ ತಾಲೂಕು ಅಭಿವೃದ್ಧಿ ಮಂಡಳಿಗಳನ್ನು ರಚಿಸಲಾಯಿತು. ತಾಲೂಕು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಮುನಿಸಿಪಾಲಿಟಿಯ ಪ್ರದೇಶವು ಸೇರಿರಲಿಲ್ಲ. ಪ್ರತಿ ಮಂಡಳಿಯ ಚುನಾಯಿತ ಸದಸ್ಯರ ಸಂಖ್ಯೆ ೧೯ಕ್ಕೆ ನಿಗದಿಪಡಿಸಲಾಗಿತ್ತು. ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇದ್ದರೆ ಸದಸ್ಯರ ಸಂಖ್ಯೆ ೧೫ ಆಗಿರಬೇಕಾಗಿತ್ತು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಮಹಿಳೆಯರಿಗೆ ಮೀಸಲಾತಿ ಇತ್ತು. ಸಂಸ್ಥೆಗಳ ನಾಲ್ಕು ವರ್ಷಗಳ ಆಡಳಿತಾವಧಿಯನ್ನು ಐದು ವರ್ಷಗಳಿಗೆ ಏರಿಸುವಂತೆ ಕಾಯ್ದೆಯಲ್ಲಿ ಮಾರ್ಪಾಡು ತರಲಾಯಿತು. ತಾಲೂಕಿನಿಂದ ಚುನಾಯಿತರಾದ ಶಾಸಕರು ಮಂಡಳಿಯ ಪದನಿಮಿತ್ತ ಸದಸ್ಯರಾಗಿರುತ್ತಿದ್ದರು. ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಿದ್ದನು. ತಾಲೂಕು ಅಭಿವೃದ್ಧಿ ಮಂಡಳಿಗಳ ನಡುವೆ ಸೂಕ್ತ ಸಮನ್ವಯವಿರಬೇಕೆಂದು ಕಾಯ್ದೆಯಲ್ಲಿ ಸೂಚಿಸಲಾಗಿತ್ತು. ಕುಡಿಯುವ ನೀರಿನ ಬಾವಿ ಇಲ್ಲವೆ ಕೊಳವೆಬಾವಿಗಳನ್ನು ತೋಡುವುದು, ಸಣ್ಣ ನೀರಾವರಿ ನಿರ್ಮಾಣ ಕಾರ್ಯಕೈಗೊಳ್ಳುವುದು ಹಾಗೂ ರಸ್ತೆಗಳ ನಿರ್ಮಾಣ ಮುಂತಾದ ಸಾರ್ವಜನಿಕ ಸೌಕರ್ಯಗಳನ್ನೊದಗಿಸುವುದು ಮಂಡಳಿಗಳ ಪ್ರಮುಖ ಚಟುವಟಿಕೆಗಳಾಗಿದ್ದವು. ಸರ್ಕಾರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದೂ ಸಹ ಮಂಡಳಿಯ ಕರ್ತವ್ಯವಾಗಿತ್ತು.

ತಾಲೂಕುಗಳ ಭೂ ಕಂದಾಯದ ಶೇ.೫೦ ಭಾಗ ವಾರ್ಷಿಕ ಅನುದಾನಕ್ಕೆ ಆಯಾ ತಾಲೂಕು ಮಂಡಳಿಗಳು ಅರ್ಹವಾಗಿದ್ದವು. ಇದರ ಜೊತೆಗೆ ಸರ್ಕಾರವು ನಿರ್ದೇಶಿಸಿದ ಕಾರ್ಯಗಳಿಗೆ ವೆಚ್ಚ ಮಾಡಲು ಶೇಕಡಾ ೧೦ರಷ್ಟು ಹಣ ಮಂಡಳಿಗಾಗಿ ದೊರೆಯುತ್ತಿತ್ತು. ಮಂಡಳಿಗಳಿಗೆ ಸ್ಥಿರ ಆಸ್ತಿಗಳ ಮೇಲೆ ಸುಂಕವನ್ನು ಮತ್ತು ಮಾರಾಟಕ್ಕಾಗಿ ತಂದ ಜಾನುವಾರುಗಳಿಗೆ ತೆರಿಗೆಯನ್ನು ವಿಧಿಸುವ ಅಧಿಕಾರವಿದ್ದಿತು. ತಾಲೂಕು ಅಭಿವೃದ್ಧಿ ಮಂಡಳಿಗಳು ಹೆಚ್ಚಾಗಿ ಸರ್ಕಾರದ ಅನುದಾನವನ್ನು ಅವಲಂಬಿಸಿದ್ದವು. ಆಯಾ ಪ್ರದೇಶ ವ್ಯಾಪ್ತಿಗೆ ಬರುವ ಭೂ ಕಂದಾಯದ ಅನುದಾನ ಆಯಾ ತಾಲೂಕು

ಅಭಿವೃದ್ಧಿ ಮಂಡಳಿ ಮತ್ತು ಗ್ರಾಮಪಂಚಾಯಿತಿಗಳ ನಡುವೆ ೬೦:೪೦ ಪ್ರಮಾಣದಲ್ಲಿ ಹಂಚಿಕೆ ಮಾಡಲಾಗುತ್ತಿತ್ತು. ೧೯೮೭ರಿಂದ ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ಬದಲಾಗಿ ತಾಲೂಕು ಪಂಚಾಯಿತಿ ಸಮಿತಿಗಳು ಕಾರ್ಯವಹಿಸುತ್ತಿವೆ.

**ಪಟ್ಟಣ ಪಂಚಾಯತಿಗಳು**

ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆ (೧೯೫೯) ಯ ಕಲಂ ೩ರ ಪ್ರಕಾರ ಗ್ರಾಮಪಂಚಾಯಿತಿ ಹಾಗೂ ಪಟ್ಟಣ ಮುನಿಸಿಪಾಲಿಟಿಗಳ ನಡುವೆ ಪಟ್ಟಣ ಪಂಚಾಯಿತಿ ಎಂಬ ಸ್ವಯಂ ಆಡಳಿತ ಸಂಸ್ಥೆಯು ಮಧ್ಯಮವರ್ತಿಯ ಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿತ್ತು. ೫,೦೦೦ಕ್ಕೂ ಹೆಚ್ಚಿನ ಜನಸಂಖ್ಯೆ ಇದ್ದು, ಪಂಚಾಯಿತಿಯ ವಾರ್ಷಿಕ ವರಮಾನವು ರೂ.೧೦,೦೦೦ ಕ್ಕಿಂತಲೂ ಹೆಚ್ಚಿದ್ದರೆ ಅಂತಹ ಪಂಚಾಯಿತಿಗಳನ್ನು ಸರ್ಕಾರವು ಪಟ್ಟಣ ಪಂಚಾಯಿತಿ ಎಂದು ಕರೆದಿದೆ. ಈ ಸಂಸ್ಥೆಗಳಲ್ಲಿ ೧೧ ರಿಂದ ೧೯ ಜನ ಸದಸ್ಯರಿರುತ್ತಿದ್ದು ಅವರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ಮೀಸಲಾತಿ ಇತ್ತು. ೧೯೮೩ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ರೀತ್ಯ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯಿತಿ ಸಮಿತಿಗಳು ಹಾಗೂ ಮಂಡಲ ಪಂಚಾಯಿತಿಗಳ ರಚನೆಗೊಂಡವು. ಹೀಗಾಗಿ ಈ ಹಿಂದೆ ಇದ್ದ ಪಟ್ಟಣಪಂಚಾಯಿತಿಗಳನ್ನು ಮಂಡಲ ಪಂಚಾಯಿತಿಗಳೆಂದು (೧೯೮೭ರಿಂದ) ಪುನರ್ ರಚಿಸಲಾಯಿತು.

**ಗ್ರಾಮ ಪಂಚಾಯಿತಿಗಳು**

೧೯೧೪ರಲ್ಲಿ ಹಳ್ಳಿಗಳ ಅಭಿವೃದ್ಧಿ ಯೋಜನೆಯನ್ನು ಸರ್. ಎಂ.ವಿಶ್ವೇಶ್ವರಯ್ಯನವರು ಜಾರಿಗೆ ತಂದರು. ಮುಂದೆ, ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ನಿಬಂಧನೆಗಳನ್ನು ೧೯೧೮ರಲ್ಲಿ ಜಾರಿಗೊಳಿಸಿದ್ದರ ಪರಿಣಾಮವಾಗಿ ಗ್ರಾಮಪಂಚಾಯಿತಿಗಳು ಶಾಸನಬದ್ಧವಾಗಿ ಸ್ಥಾಪನೆಗೊಂಡವು. ಆಧುನಿಕ–ಸ್ಥಳೀಯ ಆಡಳಿತ ಘಟಕಗಳಾದ ಗ್ರಾಮಪಂಚಾಯಿತಿ ರೂಪಗೊಳ್ಳುವ ಪೂರ್ವದಲ್ಲಿ ಹಳ್ಳಿಗಳ ನೈರ್ಮಲ್ಯವನ್ನು ೧೮೯೮ರ ಗ್ರಾಮ ನೈರ್ಮಲ್ಯ ನಿಬಂಧನೆಯಡಿ ಆರೋಗ್ಯ ಇಲಾಖೆ ನೋಡಿಕೊಳ್ಳುತ್ತಿತ್ತು. ಹಳ್ಳಿಗಳಲ್ಲಿ ಜಾಡಮಾಲಿಗಳನ್ನು ನೇಮಕ ಮಾಡಿಕೊಂಡ ಬಗ್ಗೆ ದಾಖಲೆಗಳು ಇವೆ. ೧೯೧೪ರಲ್ಲಿ ಗ್ರಾಮ ಇಲ್ಲವೆ ಹಳ್ಳಿಗಳ ಒಂದು ಗುಂಪಿಗೆ ಒಂದರಂತೆ ಗ್ರಾಮಪಂಚಾಯಿತಿಗಳ ರಚನೆಗೆ ಅವಕಾಶವಿದ್ದಿತು. ಗ್ರಾಮಪಂಚಾಯಿತಿಗಳಿಗೆ ನಾಮಕರಣಗೊಂಡ ಅಧ್ಯಕ್ಷರಿದ್ದು ಅವುಗಳಿಗೆ ಪ್ರತ್ಯೇಕವಾದ ಸಂಪನ್ಮೂಲಗಳನ್ನು ಗುರುತಿಸಲಾಗಿತ್ತು. ಮುಂದೆ ೧೯೨೭ರಲ್ಲಿ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು ರದ್ದುಪಡಿಸಿ ಅವುಗಳ ಸ್ಥಾನದಲ್ಲಿ ಎಲ್ಲ ಹಳ್ಳಿಗಳಿಗೆ ಪಂಚಾಯಿತಿಗಳನ್ನು ಶಾಸನಬದ್ಧವಾಗಿ ರಚಿಸಬೇಕೆಂದು ಹಾಗೂ ಪ್ರತಿ ಪಂಚಾಯಿತಿಯಲ್ಲಿ ಐದಕ್ಕೆ ಕಡಿಮೆ ಇಲ್ಲದಂತೆ ೧೨ಕ್ಕೆ ಹೆಚ್ಚಿಲ್ಲದಂತೆ ಸದಸ್ಯರಿದ್ದು, ಅವರಲ್ಲಿ ಅರ್ಧದಷ್ಟು ಸದಸ್ಯರನ್ನು ಚುನಾಯಿಸಬೇಕೆನ್ನುವ ಸಲಹೆಯನ್ನು ಮಾಡಲಾಯಿತು. ಪಂಚಾಯಿತಿ ಅಧ್ಯಕ್ಷರನ್ನು ಪ್ರಾರಂಭದ ಹಂತದಲ್ಲಿ ಸರ್ಕಾರವು ನೇಮಿಸುತ್ತಿತ್ತು. ಪಂಚಾಯಿತಿಗಳಿಗೆ ಕಡ್ಡಾಯ ಮತ್ತು ಐಚ್ಛಿಕ ಎಂಬ ಎರಡು ವಿಧದ ಕಾರ್ಯಗಳಿದ್ದವು. ಅವು ಕ್ರಮವಾಗಿ ಹಳ್ಳಿಯ ನೈರ್ಮಲ್ಯ ಮತ್ತು ಸಂಪರ್ಕ, ಆರೋಗ್ಯ ಹಾಗೂ ಇತರೆ ಸಾರ್ವಜನಿಕ ಸೌಕರ್ಯಗಳು ಆಗಿದ್ದವು. ಪಂಚಾಯಿತಿಗಳಿಗೆ ಸಂಪನ್ಮೂಲ ಒದಗಿಸುವ ದಿಶೆಯಲ್ಲಿ ಮನೆಗಳು, ಅಂಗಡಿಗಳು ಹಾಗೂ ಖಾಲಿ ನಿವೇಶನಗಳು ಮತ್ತು ಹಿತ್ತಲುಗಳ ಮೇಲೆ ತೆರಿಗೆಯನ್ನು ವಿಧಿಸಲು ಅಧಿಕಾರ ನೀಡಲಾಗಿತ್ತು. ಮೈಸೂರು ಜಿಲ್ಲಾ ಮಂಡಳಿಗಳ ನಿಬಂಧನೆ–೩ (೧೯೨೬) ರಂತೆ ಪಂಚಾಯಿತಿಗಳನ್ನು ಜಿಲ್ಲಾ ಮಂಡಳಿಗಳ ಆಡಳಿತಾತ್ಮಕ ನಿಯಂತ್ರಣದಿಂದ ಸ್ಥಳೀಯ ಕಂದಾಯ ಅಧಿಕಾರಿಗಳ ನೇರ ನಿಯಂತ್ರಣದಡಿಯಲ್ಲಿ ತರಲಾಯಿತು. ಅವುಗಳ ಸಮರ್ಪಕ ಕಾರ್ಯನಿರ್ವಹಣೆ ನಿಯಂತ್ರಣ, ತಪಾಸಣೆ ಮತ್ತು ಮೇಲ್ವಿಚಾರಣೆಯ ಅಧಿಕಾರವನ್ನು ತಹಸೀಲ್ದಾರರಿಗೆ ನೀಡಲಾಗಿತ್ತು. ೧೯೫೯ರವರೆಗೆ ಜಿಲ್ಲೆಯಲ್ಲಿನ ಗ್ರಾಮಪಂಚಾಯಿತಿಗಳು, ಜಿಲ್ಲಾ ಮಂಡಳಿಗಳ ಕಾಯ್ದೆಗೆ ಅನುರೂಪವಾಗಿ ಕಾರ್ಯನಿರ್ವಹಿಸುತ್ತಿದ್ದವು. ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆ (೧೯೫೯)ಯು ೧೯೮೫ರವರೆಗೆ ಜಾರಿಯಲ್ಲಿತ್ತು. ಇದರಂತೆ ೧,೫೦೦ಕ್ಕಿಂತ ಕಡಿಮೆ ಇಲ್ಲದ ಮತ್ತು ೧೦,೦೦೦ಕ್ಕೆ ಮೀರದಂತಹ ಜನಸಂಖ್ಯೆಯ ಕಂದಾಯ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಒಂದರಂತೆ ಗ್ರಾಮ ಪಂಚಾಯಿತಿ ರೂಪುಗೊಂಡಿತು. ಪ್ರತಿಯೊಂದು ಪಂಚಾಯಿತಿಯೂ ೧೧ಕ್ಕಿಂತ ಕಡಿಮೆ ಇಲ್ಲದೆ, ೧೯ಕ್ಕಿಂತ ಹೆಚ್ಚಿಲ್ಲದಂತೆ ಸದಸ್ಯರನ್ನು ಹೊಂದಿದ್ದಿತು.

ಪ್ರತಿ ಗ್ರಾಮ ಪಂಚಾಯಿತಿಗೆ ಬೇಕಾದ ಆರ್ಥಿಕ ಸಂಪನ್ಮೂಲ, ಆಯಾ ಗ್ರಾಮದ ಭೂ ಕಂದಾಯದ ಶೇ.೩೦ರಷ್ಟು ಮತ್ತು ವಿಶೇಷ ಉದ್ದೇಶಗಳಿಗಾಗಿ ಶೇ.೧೦ರಷ್ಟು ವಿವೇಚನಾಧೀನ ಅನುದಾನವು ಸರ್ಕಾರದಿಂದ ದೊರೆಯುತ್ತಿತ್ತು. ಪಂಚಾಯಿತಿಯು ತನ್ನ ವ್ಯಾಪ್ತಿಗೆ ಸೇರಿದ ಖಾಲಿ ನಿವೇಶನ, ಕಟ್ಟಡ, ವೃತ್ತಿ, ವ್ಯಾಪಾರ, ಉದ್ಯೋಗ ಮತ್ತು ನೌಕರಿ, ಜಾತ್ರೆ ಮತ್ತು ಹಬ್ಬಗಳು, ಮನೋರಂಜನೆ, ವಾಹನ (ಮೋಟಾರು ವಾಹನಗಳನ್ನು ಹೊರತುಪಡಿಸಿ) ಇವುಗಳ ಮೇಲೆ ತೆರಿಗೆಯನ್ನು ವಿಧಿಸುವುದು ಹಾಗೂ ಬಸ್‌ನಿಲ್ದಾಣ, ಮಾರುಕಟ್ಟೆ, ಗಾಡಿನಿಲ್ದಾಣ ಮತ್ತು ಜಲಾಹಾರಗಳ ಮೇಲೆ ಸುಂಕ ವಿಧಿಸುವ ಅಧಿಕಾರವನ್ನು ಹೊಂದಿತ್ತು. ಪಂಚಾಯಿತಿ ಹಂತದಲ್ಲಿ ಗ್ರಾಮಲೆಕ್ಕಿಗನು ಕಾರ್ಯದರ್ಶಿಯ ಕೆಲಸ ನಿರ್ವಹಿಸುತ್ತಿದ್ದನು. ವಾರ್ಷಿಕ ೧೨,೦೦೦ ರೂ.ಗಳಿಗಿಂತ ಹೆಚ್ಚು ಆದಾಯವಿರುವ ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಪಂಚಾಯಿತಿ ಕಾರ್ಯದರ್ಶಿಯನ್ನು ನೇಮಿಸಬಹುದಾಗಿತ್ತು. ೨೦೦೨–೦೩ರಲ್ಲಿ ಕೋಲಾರ ಜಿಲ್ಲೆಯಲ್ಲಿ ಒಟ್ಟು ೩೦೬ ಗ್ರಾಮಪಂಚಾಯಿತಿಗಳು ಇದ್ದವು.

### ಪಂಚಾಯತ್ ರಾಜ್ ಕಾನೂನು

ಆಡಳಿತದಲ್ಲಿ ವಿಕೇಂದ್ರೀಕರಣ ತರುವ ಮೂಲಕ ಪ್ರಜೆಗಳಿಗೆ ನೇರವಾಗಿ ಆಡಳಿತ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಒದಗಿಸುವುದು ಮತ್ತು ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿ ಯಾಗುವಂತೆ ನೋಡಿಕೊಳ್ಳುವುದು ಪಂಚಾಯತ್ ರಾಜ್ ವ್ಯವಸ್ಥೆಯ ಆಶಯವಾಗಿದೆ. ಈ ಉದ್ದೇಶದಿಂದ ಸರ್ಕಾರ ಸಮಗ್ರ ತಿದ್ದುಪಡಿಗಳೊಂದಿಗೆ ಹೊಸ ಪಂಚಾಯತ್ ರಾಜ್ ಕಾನೂನನ್ನು ೧೯೮೩ರಲ್ಲಿ ಜಾರಿಗೆ ತಂದಿತು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸುವ ಮೂಲಕ ಇದನ್ನು ಇನ್ನೂ ಹೆಚ್ಚು ಅರ್ಥಪೂರ್ಣವಾಗಿಯೂ, ವ್ಯಾಪಕವಾಗಿಯೂ, ಸಾರ್ವಜನಿಕರ ಒಳಿತಿಗಾಗಿ ಮಾರ್ಪಡಿಸಲಾಯಿತು. ಈ ಕಾನೂನಿನ್ವಯ ಮಂಡಲ ಪಂಚಾಯಿತಿ, ತಾಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ ಹೀಗೆ ಮೂರು ಹಂತಗಳಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆ ರೂಪಗೊಂಡಿತು. ಈ ಹೊಸ ಕಾನೂನಿನಲ್ಲಿ ಅಡಕಗೊಂಡಿದ್ದ ನ್ಯಾಯ ಪಂಚಾಯಿತಿಯು ಜಾರಿಗೆ ಬರಲಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಮಾತ್ರ ಚುನಾಯಿತ ಸದಸ್ಯರನ್ನೊಳಗೊಂಡಿದ್ದವು. ತಾಲೂಕು ಪಂಚಾಯಿತಿ ಸಮಿತಿಗೆ ಹೆಚ್ಚಿನ ಅಧಿಕಾರವಾಗಲೀ ಅಥವಾ ಪ್ರತ್ಯೇಕ ಹಣಕಾಸಿನ ಅಧಿಕಾರವಾಗಲಿ ಇರಲಿಲ್ಲ. ಅವು ಕೇವಲ ಸಲಹಾ ಸಮಿತಿಯಂತೆ ಜಿಲ್ಲಾ ಪರಿಷತ್ ಅಧೀನದಲ್ಲಿ ಕಾರ್ಯ ನಿರ್ವಹಿಸುವಂತಾಗಿತ್ತು. ಜಿಲ್ಲೆಯ ಬಹುಪಾಲು ಅಭಿವೃದ್ಧಿ ಚಟುವಟಿಕೆಗಳು ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳ್ಳುತ್ತಿದ್ದವು. ಈ ವಿಧದ ಸ್ಥಳೀಯ ಆಡಳಿತ ವ್ಯವಸ್ಥೆಯು ೧೯೯೨ರವರೆಗೆ (ಅಂದರೆ ೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬರುವವರೆಗೆ) ಮುಂದುವರೆಯಿತು.

### ಜಿಲ್ಲಾ ಪರಿಷತ್‌ಗಳು

ಜಿಲ್ಲಾಮಟ್ಟದಲ್ಲಿ ವ್ಯಾಪಕ ಅಧಿಕಾರ ಹೊಂದಿದ ಜಿಲ್ಲಾಪರಿಷತ್ತುಗಳು ಸಮಾನಾಂತರ ಸರ್ಕಾರಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ರಾಜ್ಯದ ಬಹುಪಾಲು ಅಭಿವೃದ್ಧಿಕಾರ್ಯಗಳು ಜಿಲ್ಲಾ ಪರಿಷತ್ ಮೂಲಕ ಕಾರ್ಯಗತಗೊಳ್ಳುತ್ತಿದ್ದವು. ೨೪–೨–೧೯೮೭ರಲ್ಲಿ ಕೋಲಾರ ಜಿಲ್ಲಾ ಪರಿಷತ್ತು ಸ್ಥಾಪನೆಗೊಂಡಿತು. ೧೯೮೭–೮೮ರಲ್ಲಿ ಕೋಲಾರ ಜಿಲ್ಲಾ ಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆ ೬೭ ಇದ್ದು, ಅವರಲ್ಲಿ ಚುನಾಯಿತ ಸದಸ್ಯರ ಸಂಖ್ಯೆ–೪೯ ಆಗಿತ್ತು. ಇಬ್ಬರು ಲೋಕಸಭಾ ಸದಸ್ಯರು, ೧೨ ವಿಧಾನಸಭಾ ಸದಸ್ಯರು, ನಾಲ್ಕು ವಿಧಾನಪರಿಷತ್ತಿನ ಸದಸ್ಯರು ಹಾಗೂ ಉಳಿದವರು ಸ್ಥಾಯಿ ಸಮಿತಿಯ ಸದಸ್ಯರಾಗಿದ್ದರು. ಈ ವ್ಯವಸ್ಥೆ ೧೯೯೨ರ ಕೊನೆಯವರೆಗೆ ಮುಂದುವರಿದುಕೊಂಡು ಬಂದಿತು. ನಂತರ, ೧೯೯೩ರಲ್ಲಿ ಕರ್ನಾಟಕ ಪಂಚಾಯಿತಿ ಅಧಿನಿಯಮ ಜಾರಿಗೆ ಬಂದಮೇಲೆ ಮಂಡಲ ಪಂಚಾಯಿತಿಗಳು, ತಾಲೂಕು ಪಂಚಾಯಿತಿ ಸಮಿತಿಗಳು ಮತ್ತು ಜಿಲ್ಲಾ ಪರಿಷತ್‌ಗಳು ರದ್ದಾದವು.

### ತಾಲೂಕು ಪಂಚಾಯಿತಿ ಸಮಿತಿಗಳು

ಜಿಲ್ಲಾ ಪರಿಷತ್‌ನ ಅಧಿನಿಯಮದಲ್ಲಿ ಸೂಚಿಸಿದಂತೆ ಪ್ರತಿ ತಾಲೂಕಿಗೆ ಒಂದರಂತೆ ತಾಲೂಕು ಪಂಚಾಯಿತಿ ಸಮಿತಿಗಳನ್ನು ರಚಿಸಲು ಅವಕಾಶ ಕಲ್ಪಿಸಿ ಕೊಡಲಾಯಿತು. ಮಂಡಲಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳ ನಡುವೆ ಸಂಪರ್ಕ ಕಲ್ಪಿಸುವ

ವ್ಯವಸ್ಥೆ ಇದಾಗಿತ್ತು. ಆಯಾ ತಾಲೂಕುಗಳನ್ನು ಪ್ರತಿನಿಧಿಸುವ ವಿಧಾನಮಂಡಲದ ಸದಸ್ಯರು ಮಂಡಲ ಪಂಚಾಯಿತಿಯ ಪ್ರಧಾನರು, ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು, ಮುಂತಾದವರು ಈ ಸಮಿತಿಯ ಸದಸ್ಯರಾಗಿದ್ದಾರೆ. ಮಂಡಲ ಪಂಚಾಯಿತಿ ಕಾರ್ಯನಿರ್ವಹಣೆಯಲ್ಲಿ ಸಲಹೆ ನೀಡುವುದು, ತಾಲೂಕಿನಲ್ಲಿ ಕೈಗೊಳ್ಳಲಾಗುವ ಅಭಿವೃದ್ಧಿ ಯೋಜನೆ ಕಾಮಗಾರಿಗಳನ್ನು ಪರಿಶೀಲಿಸುವುದು ಸಮಿತಿಯ ಜವಾಬ್ದಾರಿಯಾಗಿತ್ತು.

**ಮಂಡಲ ಪಂಚಾಯಿತಿಗಳು**

ಸರ್ಕಾರದ ಎಲ್ಲ ಯೋಜನೆಗಳನ್ನು ಜಾರಿಮಾಡುವುದು, ವಯಸ್ಕರ ಶಿಕ್ಷಣ, ಗೃಹನಿರ್ಮಾಣ, ಗ್ರಾಮೀಣ ನೀರು ಸರಬರಾಜು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ, ಗ್ರಾಮೀಣ ರಸ್ತೆ, ಸೇತುವೆಗಳ ಅಭಿವೃದ್ಧಿ ಮುಂತಾದ ಕಲ್ಯಾಣ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಮಂಡಲ ಪಂಚಾಯಿತಿಗಳ ಪಾತ್ರ ಬಹಳ ಮಹತ್ವದ್ದಾಗಿದೆ. ಎಂಟರಿಂದ ೧೨ ಸಾವಿರ ಜನಸಂಖ್ಯೆ ಇರುವ ಹಳ್ಳಿಗಳ ಗುಂಪಿಗೆ ಒಂದರಂತೆ ಮಂಡಲ ಪಂಚಾಯಿತಿಯನ್ನು ರಚಿಸಲಾಗಿತ್ತು. ಪ್ರತಿ ೪೦೦ ಜನಸಂಖ್ಯೆಗೆ ಒಬ್ಬರಂತೆ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಮಂಡಲ ಪಂಚಾಯಿತಿಯ ಸದಸ್ಯರಾಗಿರುತ್ತಿದ್ದರು. ಪ್ರತಿ ಮಂಡಲದಲ್ಲಿ ೨೦ ರಿಂದ ೩೦ ಜನ ಸದಸ್ಯರಿದ್ದರು. ಪ್ರತಿ ಮಂಡಲ ಪಂಚಾಯಿತಿಯು ಉಪಸಮಿತಿಗಳನ್ನು ರಚಿಸಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿತ್ತು. ಉಪ ಸಮಿತಿಯು ಮೂರಕ್ಕೆ ಕಡಿಮೆ ಇಲ್ಲದಂತೆ ಹಾಗೂ ಐದಕ್ಕೆ ಹೆಚ್ಚಿಲ್ಲದಂತೆ ಸದಸ್ಯರನ್ನು ಹೊಂದಿದ್ದು, ಸಮಿತಿಯಲ್ಲಿ ಪ್ರಧಾನರು ಹಾಗೂ ಉಪಪ್ರಧಾನರು ಸೇರಿರಬೇಕಾಗಿತ್ತು.

**ಗ್ರಾಮಸಭೆ**

ಗ್ರಾಮಸಭೆಯು ಗ್ರಾಮಮಟ್ಟದಲ್ಲಿಯ ಅತ್ಯಂತ ಕೆಳಸ್ತರದ ಸಭೆಯಾಗಿದೆ. ಇದು ಕಾಲಕಾಲಕ್ಕೆ ಸಭೆ ಸೇರಿ ಸ್ಥಳೀಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಿತ್ತು. ಗ್ರಾಮಸಭೆಗಳು ಮಾಡಿದ ಶಿಫಾರಸ್ಸು ಹಾಗೂ ಸಲಹೆಗಳನ್ನು ಮಂಡಲಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ತುಗಳು ಪರಿಗಣಿಸುತ್ತಿದ್ದವಲ್ಲದೆ ಅವುಗಳ ಸಲಹೆಗಳಿಗೆ ಮಾನ್ಯತೆ ನೀಡುತ್ತಿದ್ದವು. ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಜವಾಬ್ದಾರಿಯು ಗ್ರಾಮಸಭೆಯದಾಗಿತ್ತು

**ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ (೧೯೯೩)**

ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಕಾರ್ಯವಿಧಾನವನ್ನು ಉತ್ತಮಗೊಳಿಸಿ ಅವುಗಳನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ಸರ್ಕಾರವು ಹೊಸದಾಗಿ ಪಂಚಾಯಿತಿ ರಾಜ್ ಕಾನೂನನ್ನು ೧೯೯೩ರ ಮೇ ೧೦ರಂದು ಜಾರಿಗೆ ತಂದಿತು. ಈ ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಲ ಪಂಚಾಯಿತಿ, ತಾಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತಿಗೆ ಬದಲಾಗಿ ಇದನ್ನು ರಚಿಸಲಾಯಿತು. ರಾಜ್ಯಾಂಗದ ೭೩ನೇ ತಿದ್ದುಪಡಿಯ ನಂತರ ಕಾರ್ಯರೂಪಕ್ಕೆ ಬಂದಿರುವ ಪಂಚಾಯತ್ ರಾಜ್ ಕಾಯ್ದೆ ಇದಾಗಿದ್ದು, ಆಡಳಿತದಲ್ಲಿ ವಿಕೇಂದ್ರೀಕರಣ, ದಕ್ಷತೆ, ಹಿಂದುಳಿದವರಿಗೆ ಹಾಗೂ ಮಹಿಳೆಯರಿಗೆ ಮೀಸಲಾತಿ ಸೌಲಭ್ಯವು ವಿಶಿಷ್ಟವೆನಿಸಿದ್ದು ದೇಶದಲ್ಲಿಯೇ ಪ್ರಥಮ ಪ್ರಯೋಗವೆನಿಸಿದೆ. ಹಿಂದಿನ ಮಂಡಲಪಂಚಾಯಿತಿಗಳ ಕಾರ್ಯವ್ಯಾಪ್ತಿ ಆಡಳಿತವಿಧಾನಗಳ ಲೋಪದೋಷಗಳನ್ನು ಗುರುತಿಸಿ, ಮೊದಲಿನ ಮಂಡಲ ಪಂಚಾಯಿತಿಯ ಆಡಳಿತ ವ್ಯಾಪ್ತಿ ಮೊಟಕುಗೊಳಿಸಿ ಅವುಗಳನ್ನು ಪುನಃ ಗ್ರಾಮಪಂಚಾಯಿತಿಗಳೆಂದೇ ಗುರುತಿಸಿಕೊಳ್ಳಲಾಯಿತು. ಗ್ರಾಮದ ಸಾರ್ವಜನಿಕ ವೇದಿಕೆಯಾದ ಗ್ರಾಮಸಭೆಯನ್ನು ಇನ್ನಷ್ಟು ಬಲಪಡಿಸಲಾಯಿತು. ಆಡಳಿತದಲ್ಲಿ ಪಾರದರ್ಶಕತ್ವ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಿ ಕಾನೂನನ್ನು ತಿದ್ದುಪಡಿ ಮಾಡಲಾಯಿತು. ಪ್ರತಿ ಗ್ರಾಮಪಂಚಾಯಿತಿಗೆ ಪ್ರಾರಂಭದಲ್ಲಿ ವಾರ್ಷಿಕ ಒಂದು ಲಕ್ಷ ರೂಪಾಯಿ ಅನುದಾನ ಒದಗಿಸಲಾಗಿತ್ತು. ಈ ಹಣವನ್ನು ಪಂಚಾಯಿತಿ ತನ್ನ ಸಿಬ್ಬಂದಿ ವೆಚ್ಚಕ್ಕೆ ಬಳಸದೆ, ಅತ್ಯಾವಶ್ಯಕವೆನಿಸಿದ ನೀರು ಪೂರೈಕೆ ಹಾಗೂ ದೀಪದ ವ್ಯವಸ್ಥೆಗೆ ಮಾತ್ರ ಉಪಯೋಗಿಸಕೊಳ್ಳಬೇಕಾಗಿತ್ತು. ೧೯೯೧ರ ಜನಗಣತಿಯಂತೆ ರಾಜ್ಯದಲ್ಲಿದ್ದ ಹಿಂದಿನ ೨,೪೮೯ ಮಂಡಲ ಪಂಚಾಯಿತಿಗಳ ಬದಲಾಗಿ ೫,೬೪೫ ಗ್ರಾಮಪಂಚಾಯಿತಿಗಳು ಅಸ್ತಿತ್ವದಲ್ಲಿವೆ. ಗ್ರಾಮ ಪಂಚಾಯಿತಿಗಳಿಗೆ ೧೯೯೩ ೧ನೇಯ ಡಿಸೆಂಬರ್ ಕೊನೆಯಲ್ಲಿ ಚುನಾವಣೆಗಳು ನಡೆದವು. ಚುನಾಯಿತ ಸದಸ್ಯರ ಸಂಖ್ಯೆ ೭೯,೮೬೫ ಆಗಿದ್ದು, ಆ ಪೈಕಿ ೨೩,೪೫೪ ಮಹಿಳೆಯರು

ರಾಜ್ಯದ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳಿಗೆ ೧೯೯೫ ಮಾರ್ಚ್‌ನಲ್ಲಿ ಚುನಾವಣೆ ನಡೆದಿದ್ದು, ಆಯ್ಕೆಗೊಂಡ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಸದಸ್ಯರ ಸಂಖ್ಯೆಗಳು ಕ್ರಮವಾಗಿ ೯೧೯ ಮತ್ತು ೩,೩೪೦. ಪ್ರತಿ ೧೦ ಸಾವಿರ ಜನಸಂಖ್ಯೆಗೆ ಒಬ್ಬರಂತೆ ತಾಲೂಕು ಪಂಚಾಯಿತಿಗಳಿಗೆ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಪ್ರತಿ ೪೦ ಸಾವಿರ ಜನಸಂಖ್ಯೆ ಒಬ್ಬರಂತೆ ಚುನಾಯಿತ ಪ್ರತಿನಿಧಿಗಳು ಇರುವರು.

ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ತಾಲೂಕು ಪಂಚಾಯಿತಿಗಳನ್ನು ಹೊಸ ಕಾನೂನಿನಡಿಯಲ್ಲಿ ಸಕ್ರಿಯಗೊಳಿಸಲಾಗಿದೆ. ಸುಮಾರು ಅರ್ಧದಷ್ಟು ಅಭಿವೃದ್ಧಿ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ತಾಲೂಕುಮಟ್ಟದಲ್ಲಿಯೇ ಅನುಷ್ಠಾನಗೊಳಿಸಲಾಗುವುದು. ಪ್ರತಿ ಹಂತದಲ್ಲಿಯೂ ಗರಿಷ್ಠ ಮೀಸಲಾತಿಯ ಪ್ರಮಾಣ ಶೇ.೫೬ (೨೩+೩೩). ಅದರಂತೆ ಈ ಸಂಸ್ಥೆಗಳ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆಯಲ್ಲಿಯೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ, ಹಿಂದುಳಿದವರಿಗೆ ಹಾಗೂ ಮಹಿಳೆಯರಿಗೆ ಮೀಸಲಾತಿ ಇದೆ. ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಈ ಕಾಯ್ದೆಯೂ ಹಿಂದಿನ ಕಾನೂನಿಗಿಂತ ಬಹಳ ಪ್ರಗತಿಪರವಾಗಿದೆ.

ರಾಜ್ಯಾಂಗದ ೭೩ನೇ ತಿದ್ದುಪಡಿಯ ಅನ್ವಯ ಜಿಲ್ಲೆಗೆ ಒಂದರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಪ್ರತಿಯೋಜನೆಯನ್ನು ಪರಿಶೀಲಿಸಿ ಅವುಗಳ ಗುಣಮಟ್ಟವನ್ನು ಹೆಚ್ಚಿಸಿ ಅನುಷ್ಠಾನಕ್ಕೆ ತರುವುದು ಈ ಸಮಿತಿಗಳ ಉದ್ದೇಶವಾಗಿದೆ. ಪಂಚಾಯತ್‌ರಾಜ್ ಹಣಕಾಸು ವ್ಯವಸ್ಥೆಯನ್ನು ಐದು ವರ್ಷಗಳಿಗೊಮ್ಮೆ ಪರಿಶೀಲಿಸಲು ಹಣಕಾಸು ಆಯೋಗ ಮತ್ತು ಕಾಯಂ ಆದ ಚುನಾವಣಾ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡಲಾಗಿದೆ. ಅದರಂತೆ ರಾಜ್ಯ ಸರ್ಕಾರವು ಪ್ರತ್ಯೇಕವಾದ ಹಣಕಾಸು ಆಯೋಗ ಹಾಗೂ ಚುನಾವಣಾ ಆಯೋಗಗಳನ್ನು ರಚಿಸಿದೆ. ಐದು ವರ್ಷಗಳಿಗೊಮ್ಮೆ ಚುನಾವಣೆ ನಡೆಸುವುದನ್ನು ಕಡ್ಡಾಯಗೊಳಿಸಿದೆ. ಪ್ರತಿ ಹಂತದಲ್ಲಿಯೂ ಚುನಾಯಿತ ಪ್ರತಿನಿಧಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹೊಣೆಗಾರಿಕೆಯ ಬಗ್ಗೆ ಕಾಯ್ದೆಯು ಸೂಕ್ತ ಗಮನ ನೀಡಿದೆ. ಜಿಲ್ಲಾ ಪಂಚಾಯತ್‌ದ ಮುಖ್ಯ ಕಾರ್ಯದರ್ಶಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂದು ಕರೆಯಲಾಗುತ್ತದೆ. ಜಿಲ್ಲಾ ಮತ್ತು ತಾಲೂಕು ಪಂಚಾಯತ್‌ನ ಅಧ್ಯಕ್ಷರನ್ನು, ಕರ್ತವ್ಯಲೋಪವೆಸಗಿ ತಪ್ಪಿತಸ್ಥರೆಂದು ಕಂಡುಬಂದರೆ ಅವರನ್ನು ಬಹುಮತದ (೨/೩) ಆಧಾರದ ಮೇಲೆ ಪದಚ್ಯುತಿಗೊಳಿಸಬಹುದಾಗಿದೆ. ಸೂಕ್ತ ಸಂದರ್ಭದಲ್ಲಿ ಸರ್ಕಾರವು ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳನ್ನು ಕಾರಣವಿದ್ದಲ್ಲಿ ವಿಚಾರಣೆಗೆ ಒಳಪಡಿಸಿ ರದ್ದುಪಡಿಸಬಹುದು. ಹೊಸ ಕಾನೂನಿನ್ವಯ ಪಂಚಾಯತ್ ರಾಜ್ ವ್ಯವಸ್ಥೆಯ ಸಿಬ್ಬಂದಿ ವರ್ಗಾವಣೆ ಅಧಿಕಾರವನ್ನು ಸರ್ಕಾರ ಹೊಂದಿದೆ. ಹಾಗೆಯೇ ಪಂಚಾಯಿತಿಗಳು ಗ್ರಾಮದ ಹಿತಕ್ಕೆ ಧಕ್ಕೆಯಾಗುವ ಯಾವುದೇ ಕೆಲಸವನ್ನು ಮಾಡಿದಲ್ಲಿ ಮತ್ತು ಜನವಿರೋಧಿ ಗೊತ್ತುವಳಿಗಳನ್ನು ಕೈಗೊಂಡ ಪಕ್ಷದಲ್ಲಿ ಅಂಥಹ ಗ್ರಾಮಪಂಚಾಯಿತಿಗಳನ್ನು ರದ್ದುಪಡಿಸುವ ಹಕ್ಕು ಸರ್ಕಾರಕ್ಕಿದೆ. ಪ್ರತಿ ಗ್ರಾಮಪಂಚಾಯಿತಿ, ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗೆ ಪ್ರತ್ಯೇಕ ನಿಧಿಗಳನ್ನು ಹೊಂದಲು ಅವಕಾಶ ಮಾಡಿಕೊಡಲಾಗಿದೆ. ಜಿಲ್ಲಾ ಪಂಚಾಯತ್‌ನ ಕೆಲಸಕಾರ್ಯಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಅಥವಾ ವಿಭಾಗಾಧಿಕಾರಿ ಪರಿಶೀಲಿಸಬಹುದು.

**ಪಂಚಾಯಿತಿಗಳಿಗೆ ಬಹುಮಾನ ಯೋಜನೆ**

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆಗಳನ್ನು ಮಾಡುವ ಗ್ರಾಮಪಂಚಾಯಿತಿ ಇಲ್ಲವೇ ತಾಲೂಕು ಪಂಚಾಯಿತಿ ಇಲ್ಲವೇ ಜಿಲ್ಲಾ ಪಂಚಾಯಿತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ೧೯೯೬ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಇದರ ಅನ್ವಯ ಗ್ರಾಮಪಂಚಾಯಿತಿಗಳಿಗೆ ರಾಜ್ಯಮಟ್ಟದಲ್ಲಿ ಮೂರು ಬಹುಮಾನಗಳನ್ನು (ರೂ.ಒಂದು ಲಕ್ಷ, ರೂ.೫೦,೦೦೦ ಹಾಗೂ ರೂ.೨೫,೦೦೦), ತಾಲೂಕು ಪಂಚಾಯಿತಿಗಳಿಗೆ ಮೂರು ಬಹುಮಾನಗಳನ್ನು (ರೂ. ಎರಡು ಲಕ್ಷ, ರೂ. ಒಂದು ಲಕ್ಷ ಮತ್ತು ೫೦ ಸಾವಿರ) ಹಾಗೂ ಅತ್ಯುತ್ತಮ ಜಿಲ್ಲಾ ಪಂಚಾಯತ್‌ಗೆ ೫ ಲಕ್ಷ ರೂ.ಗಳ ಒಂದು ಬಹುಮಾನ ನೀಡುವ ಅವಕಾಶ ಕಲ್ಪಿಸಲಾಗಿದೆ.

**ಜಿಲ್ಲಾ ಪಂಚಾಯತ್**

ಕರ್ನಾಟಕ ಪಂಚಾಯತ್ ರಾಜ್ ಕಾನೂನಿನ್ವಯ ರಾಜ್ಯದ ಎಲ್ಲೆಡೆ ಜಿಲ್ಲಾ ಪಂಚಾಯತ್‌ಗಳು ಸ್ಥಾಪನೆಗೊಂಡವು. ಹಿಂದಿನ ಜಿಲ್ಲಾ ಪರಿಷತ್‌ಗೆ ಬದಲಾಗಿ ಹೊಸ ಕಾನೂನಿನಡಿ ಅತ್ಯಂತ ಪ್ರಭಾವಶಾಲಿ ಹಾಗೂ ಅಧಿಕಾರಯುತವಾದ ಜಿಲ್ಲಾ ಪಂಚಾಯತ್ ಎಂಬ ಸ್ವಯಮಾಡಳಿತ ಸಂಸ್ಥೆಯು ಜಿಲ್ಲಾ ಮಟ್ಟದಲ್ಲಿ ರಚನೆಗೊಂಡಿತು. ಗ್ರಾಮೀಣ ಜನತೆಯ ಅಭಿವೃದ್ಧಿಗೆ ಸರ್ಕಾರವು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು ಅವು ಹೆಚ್ಚು ಪರಿಣಾಮಕಾರಿಯಾಗಿ ಜಿಲ್ಲಾ ಪಂಚಾಯತ್ ಮೂಲಕ ಕಾರ್ಯಗತಗೊಳ್ಳುತ್ತವೆ. ಜಿಲ್ಲಾ ಪಂಚಾಯಿತಿಯ ಆಡಳಿತ ವ್ಯಾಪ್ತಿಯು ಆಯಾ ಜಿಲ್ಲೆಯಲ್ಲಿ ಬರುವ, ಪುರಸಭೆಗಳು, ನಗರಸಭೆ, ಮಹಾನಗರಪಾಲಿಕೆ, ನೈರ್ಮಲ್ಯ ಮಂಡಳಿ, ಅಧಿಸೂಚಿತ ಪ್ರದೇಶ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಹೊರತುಪಡಿಸಿ, ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಸೀಮಿತಗೊಂಡಿದೆ. ಜಿಲ್ಲಾ ಪಂಚಾಯಿತಿಗೆ ಚುನಾಯಿತರಾದ ಎಲ್ಲಾ ಸದಸ್ಯರು, ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ, ರಾಜ್ಯಸಭೆಯ (ಜಿಲ್ಲೆಯಲ್ಲಿ ವಾಸವಿರುವ) ಸದಸ್ಯರು, ರಾಜ್ಯ ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರು ಹಾಗೂ ಎಲ್ಲಾ ತಾಲೂಕು ಪಂಚಾಯಿತಿಗಳ ಅಧ್ಯಕ್ಷರು ಈ ಸಭೆಯ ಸದಸ್ಯರಾಗಿರುತ್ತಾರೆ. ಪರಿಶಿಷ್ಟ ಜಾತಿ/ಪಂಗಡ ಹಿಂದುಳಿದ ವರ್ಗದವರಿಗೆ ಕಾನೂನಿನ್ವಯ ಮೀಸಲಾತಿಯಿದೆ. ಒಟ್ಟು ಚುನಾಯಿತ ಸದಸ್ಯರಲ್ಲಿ ೧/೩ ಭಾಗದಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿರುತ್ತದೆ. ಚುನಾಯಿತ ಸದಸ್ಯರ ಅಧಿಕಾರಾವಧಿ ಐದು ವರ್ಷಗಳಾಗಿರುತ್ತದೆ.

**ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು**

ಚುನಾಯಿತ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡುವರು. ಕೋಲಾರದ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿಯಿದೆ ಹಾಗೂ ಇವರ ಸಂಬಳ ಸಾರಿಗೆ ಹಾಗೂ ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ಸರ್ಕಾರವು ಗೊತ್ತುಪಡಿಸುವುದು.

**ಆಡಳಿತ:**ಕಾನೂನಿನ್ವಯ ಜಿಲ್ಲಾ ಪಂಚಾಯಿತಿಯು ಕನಿಷ್ಠ ೨ ತಿಂಗಳಿಗೊಮ್ಮೆಯಾದರೂ ಸಭೆ ನಡೆಸಬೇಕು. ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದ ಗೊತ್ತುವಳಿ ನಕಲನ್ನು ವಿಭಾಗೀಯ ಕಮೀಶನ್‌ರಿಗೆ ಕಳುಹಿಸಿಕೊಡಬೇಕು. ಆಡಳಿತ ಸುಗಮ ಹಾಗೂ ಪರಿಣಾಮಕಾರಿಯಾಗಿ ನಡೆಯಲು ಅನುಕೂಲವಾಗುವಂತೆ ಚುನಾಯಿತ ಸದಸ್ಯರನ್ನೊಳಗೊಂಡ ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಜಿಲ್ಲಾ ಪಂಚಾಯತಿಗಳು ರಚಿಸಿಕೊಂಡ ಸ್ಥಾಯಿಸಮಿತಿಗಳು ಯಾವುವೆಂದರೆ, ೧) ಸಾಮಾನ್ಯ (ಜನರಲ್) ಸಮಿತಿ, ೨) ಹಣಕಾಸು ಲೆಕ್ಕ ತಪಾಸಣೆ ಮತ್ತು ಯೋಜನೆ, ೩) ಸಾಮಾಜಿಕ ನ್ಯಾಯ ೪) ಶಿಕ್ಷಣ ಮತ್ತು ಆರೋಗ್ಯ, ೫) ವ್ಯವಸಾಯ ಮತ್ತು ಕೈಗಾರಿಕಾ ಸಮಿತಿ.

ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆ ಕುರಿತಂತೆ ರಾಜ್ಯ ಸರ್ಕಾರವು ಪ್ರತ್ಯೇಕ ಚುನಾವಣಾ ಆಯೋಗ ರಚಿಸಿದೆ. ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯನ್ನು ಸರ್ಕಾರವು ಜಿಲ್ಲಾ ಪಂಚಾಯಿತಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಿಸುವುದು. ಜಿಲ್ಲಾ ಪಂಚಾಯಿತಿಯ ಆಡಳಿತದ ಪ್ರತಿಯೊಂದು ವಿಭಾಗವು ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಆಡಳಿತಾತ್ಮಕ ಹಾಗೂ ಹಣಕಾಸಿನ ನಿರ್ವಹಣೆ ಸಿಬ್ಬಂದಿ ನಿಯಂತ್ರಣ ಮುಂತಾದವುಗಳ ಮೇಲೆ ಅಧ್ಯಕ್ಷರ ಪರಮಾಧಿಕಾರವಿರುತ್ತದೆ. ನೈಸರ್ಗಿಕ ವಿಪತ್ತು, ಬರ ಮುಂತಾದ ಸಂದರ್ಭಗಳಲ್ಲಿ ಪರಿಹಾರ ಕ್ರಮಕ್ಕಾಗಿ ಅಧ್ಯಕ್ಷರು, ಒಂದು ಲಕ್ಷ ರೂ. ಮಂಜೂರು ಮಾಡಬಹುದಾಗಿದೆ. ಹೊಸ ಕಾನೂನಿನ್ವಯ ಜಿಲ್ಲೆಗೆ ಪ್ರತ್ಯೇಕವಾದ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಅವಕಾಶವಿದೆ.

**ಜಿಲ್ಲಾ ಪಂಚಾಯಿತಿಯ ಕರ್ತವ್ಯಗಳು**

ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯ ಯೋಜನೆಗಳನ್ನು ರೂಪಿಸುವುದು ಹಾಗೂ ಅವುಗಳ ಅನುಷ್ಠಾನ, ತಾಲೂಕು ಪಂಚಾಯಿತಿ ಹಾಗೂ ಗ್ರಾಮಪಂಚಾಯಿತಿ ನಡುವೆ ಪರಸ್ಪರ ಸಾಮರಸ್ಯ ಉಂಟು ಮಾಡುವುದು, ಅವು ಕೈಗೊಂಡ ಅಭಿವೃದ್ಧಿ ಯೋಜನೆಗಳ ಪರಿಶೀಲನೆ, ಮಾರ್ಗದರ್ಶನ, ಮುಂತಾದವು ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಕರ್ತವ್ಯಗಳಾಗಿವೆ.

ಕಾನೂನಿನ್ವಯ ಕಾರ್ಯಗಳ ಪಟ್ಟಿಯು ಸುಮಾರು ೩೦ ವಿವಿಧ ಅಭಿವೃದ್ಧಿ ಕಾರ್ಯಗಳನ್ನೊಳಗೊಂಡಿರುವುದು. ಅವುಗಳಲ್ಲಿ ಮುಖ್ಯವಾದವುಗಳು. ೧) ವ್ಯವಸಾಯ, ತೋಟಗಾರಿಕೆ, ೨) ಭೂ ಅಭಿವೃದ್ಧಿ ಭೂ ಸಾರ ಸಂರಕ್ಷಣೆ ೩) ಸಣ್ಣ ನೀರಾವರಿ ಯೋಜನೆಗಳು ೪) ಪಶುಸಂಗೋಪನೆ ಹೈನುಗಾರಿಕೆ, ಕುಕ್ಕುಟ ಅಭಿವೃದ್ಧಿ ಯೋಜನೆಗಳು ೫) ಆಹಾರ ಸಂರಕ್ಷಣೆ, ೬) ಸಣ್ಣ ಕೈಗಾರಿಕೆ ಅಭಿವೃದ್ಧಿ, ೭) ಗ್ರಾಮೀಣ ವಸತಿ, ಕುಡಿಯುವ ನೀರಿನ ಪೂರೈಕೆ, ಗ್ರಾಮ ನೈರ್ಮಲ್ಯ, ೮) ರಸ್ತೆಗಳು, ಕಟ್ಟಡಗಳು, ಸೇತುವೆಗಳ ನಿರ್ಮಾಣ, ೯) ಅಸಾಂಪ್ರದಾಯಕ ಇಂಧನ ಅಭಿವೃದ್ಧಿ ಮತ್ತು ಬಳಕೆ, ೧೦) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಡತನ ನಿರ್ಮೂಲನೆ ಯೋಜನೆಗಳ ಅನುಷ್ಠಾನ, ೧೧) ಪ್ರಾಥಮಿಕ, ಪ್ರೌಢ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣ ನಿರ್ವಹಣೆ, ೧೨) ಮಹಿಳಾ ಮತ್ತು ಮಕ್ಕಳ ಕಲ್ಯಾಣ, ೧೨) ಸಮಾಜ ಕಲ್ಯಾಣ, ಪರಿಶಿಷ್ಟ ಜಾತಿ/ ಪಂಗಡಗಳ ಕಲ್ಯಾಣ ಅಭಿವೃದ್ಧಿ ಯೋಜನೆಗಳು, ೧೨) ಸಾರ್ವಜನಿಕ ಆಸ್ತಿಪಾಸ್ತಿ ಸಂರಕ್ಷಣೆ ೧೪) ಸಾರ್ವಜನಿಕ ಆಹಾರ ವಿತರಣೆ, ೧೫) ಗ್ರಾಮೀಣ ವಿದ್ಯುದೀಕರಣ, ೧೬) ಸಹಕಾರ ಹಾಗೂ ೧೭) ಗ್ರಂಥಾಲಯಗಳ ಅಭಿವೃದ್ಧಿ.

**ಹಣಕಾಸು**

ಜಿಲ್ಲಾ ಪಂಚಾಯತ್‌ಗೆ ತನ್ನದೇ ಆದ ಪಂಚಾಯತ್ ಫಂಡ್ (ನಿಧಿ) ಇದ್ದು, ನಿಧಿಯು ೧) ರಾಜ್ಯ ಸಂಚಿತ ನಿಧಿಯಿಂದ ವರ್ಗಾಯಿಸಲಾದ ಹಣ, ೨) ಸರ್ಕಾರ ನೀಡುವ ಅನುದಾನ, ೩) ಸಾಲಗಳು ೪) ಮುಂಗಡಗಳು, ೫) ವಂತಿಕೆಗಳು, ೬) ಆಸ್ತಿಗಳಿಂದ ಬರುವ ಬಾಡಿಗೆ, ೭) ವಿವಿಧ ಸೇವೆಗಳ ಶುಲ್ಕಗಳು ಹಾಗೂ ೮) ಬಡ್ಡಿ ಹಣ ಮುಂತಾದ ಮೂಲಗಳಿಂದ ಸಂಗ್ರಹವಾಗುತ್ತದೆ. ಜಿಲ್ಲಾ ಪಂಚಾಯಿತಿಯು ತನ್ನ ಆದಾಯದ ಕನಿಷ್ಠ ಶೇ.೨೧ರಷ್ಟು ಹಣವನ್ನು ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿಗೆ ವಿನಿಯೋಗಿಸಬೇಕು.

**ಜಿಲ್ಲಾ ಪಂಚಾಯಿತಿಯ ವಿವಿಧ ಗ್ರಾಮೀಣ ಅಭಿವೃದ್ಧಿ ಯೋಜನೆಗಳು**

I **ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು**

೧) ಜವಾಹರ್ ರೋಜ್‌ಗಾರ್ ಯೋಜನೆ (ಜೆ.ಆರ್.ವೈ)

೨) ಜವಾಹರ್ ಗ್ರಾಮ ಸಮೃದ್ಧಿ ಯೋಜನೆ (ಜೆ.ಜಿ.ಎಸ್.ವೈ)

೩) ಇಂದಿರಾ ಆವಾಸ್ ಯೋಜನೆ (ಐ.ವೈ)

೪) ದಶಲಕ್ಷ ಬಾವಿ ಯೋಜನೆ (ಎಂ.ಡಬ್ಲ್ಯು.ಎಸ್)

೫) ಉದ್ಯೋಗ ಭರವಸೆ ಯೋಜನೆ (ಇ.ಎ.ಎಸ್)

೬) ನೆಮ್ಮದಿ ಯೋಜನೆ (ರಾಜ್ಯ ಯೋಜನೆ, ಭರವಸೆ ಯೋಜನೆ)

೭) ಜವಾಹರ್ ರೋಜ್‌ಗಾರ್ ಯೋಜನೆ – ೨ನೇ ವಾಹಿನಿ ತೀವ್ರಗೊಳಿಸುವ ಜವಾಹರ್ ರೋಜ್‌ಗಾರ್ ಯೋಜನೆ (ಇಂಟೆನ್ಸಿಫೈಡ್ ರೋಜ್‌ಗಾರ್ ಯೋಜನೆ, ಐಜಿಆರ್‌ವೈ)

೮) ಬರಪೀಡಿತ ಪ್ರದೇಶಾಭಿವೃದ್ಧಿ (ಡಿ.ಪಿ.ಎಪಿ) ಕಾರ್ಯಕ್ರಮ

೯) ಸಮಗ್ರ ಬರಡು – ಬಂಜರು ಭೂಮಿ ಅಭಿವೃದ್ಧಿ ಯೋಜನೆ (ಐಡಬ್ಲ್ಯುಡಿಪಿ)

೧೦) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (ಎಸ್.ಜಿ.ಆರ್.ವೈ)

೧೧) ಜಲ ರಕ್ಷಣೆ ಕಾರ್ಯಕ್ರಮ ಯೋಜನೆ

೧೨) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ – ಗ್ರಾಮೀಣ ಆವಾಸ್ ಯೋಜನೆ (ಜಿ.ಎ.ವೈ)

ಅ) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ – ಗ್ರಾಮೀಣ ನೀರು ಸರಬರಾಜು ಯೋಜನೆ

ಆ) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ– ಪ್ರಾಥಮಿಕ ಶಿಕ್ಷಣ ಮತ್ತು ಕುಡಿಯುವ ನೀರು ಶೌಚಾಲಯ, ಶಾಲಾ ಕೊಠಡಿಗಳ ನಿರ್ಮಾಣ ಹಾಗೂ ದುರಸ್ತಿ

ಇ) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ (ಡಿ.ಎಂ.ಜಿ.ವೈ) ಪ್ರಾಥಮಿಕ ಆರೋಗ್ಯ ಶುಶ್ರೂಷೆ (ಪಿ.ಹೆಚ್.ಸಿ)

೧೩) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿ.ಎಂ.ಜಿ.ಎಸ್.ವೈ)

೧೪) ನೂರು ಬಾವಿ ಯೋಜನೆ (ಹೆಚ್ಚುವರಿ ಆಹಾರ ಉತ್ಪಾದನಾ ಕಾರ್ಯಕ್ರಮ)

೧೫) ಜೀತ ಮುಕ್ತರ ಪುನರ್ ವಸತಿ

**II ವಿಶೇಷ ಆರ್ಥಿಕ ಹಾಗೂ ಸ್ವಉದ್ಯೋಗ ಕಾರ್ಯಕ್ರಮಗಳು**

೧) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ)

೨) ಗ್ರಾಮೀಣ ಪ್ರದೇಶದ ಯುವಕ–ಯುವತಿಯರಿಗೆ ಸ್ವಯಂ ಉದ್ಯೋಗ ತರಬೇತಿ (ಟ್ರೈಸಂಯೋಜನೆ)

೩) ಗ್ರಾಮೀಣ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು ಕಾರ್ಯಕ್ರಮ (ಎಸ್.ಐ.ಟಿ.ಆರ್.ವಿ.ಪಿ.ಟಾ)

೪) ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ ಐಡಬ್ಲ್ಯೂಸಿಆರ್ಎ – ಡ್ವಾಕ್ವಾ ಯೋಜನೆ ಇದು ಐಆರ್‌ಡಿಪಿಯ ಉಪಯೋಜನೆ

೫) ಗಂಗಾ ಕಲ್ಯಾಣ ಯೋಜನೆ ಇದು (ಐಆರ್‌ಡಿಪಿಯ ಉಪಯೋಜನೆ)

೬) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್.ಜಿ.ಎಸ್.ವೈ)

೭) ಗ್ರಾಮೀಣ ಸಾಮೂಹಿಕ ಗುಂಪು ವಿಮಾ ಯೋಜನೆ (ಆರ್.ಜಿ.ಎಲ್.ಐ.ಎಸ್)

೮) ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಮೀಕ್ಷೆ

೯) ಭಾಗ್ಯಜ್ಯೋತಿ ಕಾರ್ಯಕ್ರಮ

**III ಗ್ರಾಮೀಣ ಇಂಧನ – ಕಾರ್ಯಕ್ರಮಗಳು (ಆರ್.ಇ.ಪಿ)**

೧) ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ (ಎಸ್.ಐ.ಬಿ.ಡಿ)

೨) ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ

೩) ಸಮಗ್ರ ಗ್ರಾಮೀಣ ಇಂಧನ ಶಕ್ತಿ ಕಾರ್ಯಕ್ರಮ (ಐ.ಆರ್.ಇ.ಪಿ)

**IV ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳು**

೧) ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮ (ಆರ್ ಡಬ್ಲು ಎಸ್)

೨) ಪುನರ್ ರಚಿತ ಕೇಂದ್ರೀಯ ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮ (ಆರ್.ಸಿ.ಆರ್.ಎಸ್.ಪಿ)

೩) ನಿರ್ಮಲ ಕರ್ನಾಟಕ

೪) ಸ್ವಚ್ಛ ಗ್ರಾಮ ಯೋಜನೆ

೫) ಆಶ್ರಯ ಅಂಬೇಡ್ಕರ್ (ಗ್ರಾಮೀಣ) ವಸತಿ ಯೋಜನೆಗಳು

೬) ಗ್ರಾಮ ಪಂಚಾಯಿತಿ ವಸತಿ ಯೋಜನೆ (ಜಿ.ಪಿ.ಹೆಚ್.ಪಿ)

೭) ನವಗ್ರಾಮ ಆಶ್ರಯ ವಸತಿ ಯೋಜನೆ

೮) ವಿಶೇಷ ಉದ್ಯೋಗ ಗುಂಪಿನ ಯೋಜನೆ (ಎಸ್.ಒ.ಜಿ)

V ಆಶ್ರಯ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ನಿವೇಶನ ಹಂಚಿಕೆ ಕಾರ್ಯಕ್ರಮ

**ತಾಲೂಕು ಪಂಚಾಯಿತಿ**

೧೯೯೩ರ ಕರ್ನಾಟಕ ಪಂಚಾಯಿತಿ ರಾಜ್ ಕಾನೂನಿನ್ವಯ ಪ್ರತಿ ತಾಲೂಕಿಗೆ ಒಂದರಂತೆ ತಾಲೂಕು ಪಂಚಾಯಿತಿ ರಚನೆಗೆ ಅವಕಾಶವಿದೆ. ಸಂಪೂರ್ಣವಾಗಿ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುವ ಇವು ಆಯಾ ತಾಲೂಕಿಗೆ ಬರುವ ನಗರಸಭೆ/ಪುರಸಭೆ ಇವುಗಳನ್ನು ಹೊರತುಪಡಿಸಿ ಉಳಿದ ಗ್ರಾಮೀಣ ಪ್ರದೇಶಕ್ಕೆ ಸೀಮಿತಗೊಂಡಿವೆ. ಪ್ರತಿ ತಾಲೂಕು ಪಂಚಾಯಿತಿ ೧೨೧ನೇ ಪ್ರಕರಣದಡಿಯಲ್ಲಿ ನಿರೂಪಿಸಿರುವಂತೆ, ತಾಲೂಕಿನ ಜನಸಂಖ್ಯೆ ಆಧಾರದ ಮೇಲೆ ಪ್ರತಿ ೧೦ ಸಾವಿರ ಜನಸಂಖ್ಯೆ ಇಲ್ಲವೇ ಅದರ ಶೇಷ ಭಾಗಕ್ಕೆ ಒಬ್ಬ ಸದಸ್ಯನಂತೆ ಚುನಾಯಿತ ವ್ಯಕ್ತಿಗಳನ್ನೊಳಗೊಂಡಿರಬೇಕು. ಆದರೆ ಒಂದು ಲಕ್ಷಕ್ಕಿಂತ ಕಡಿಮೆ ಜನ ಸಂಖ್ಯೆ ಇರುವ ತಾಲೂಕುಗಳಿಗೆ ಕನಿಷ್ಠ ೧೧ ಜನ ಚುನಾಯಿತ ಸದಸ್ಯರಿರತಕ್ಕದ್ದು. ತಾಲೂಕಿನ ಒಳಗೆ ಇರುವ ಲೋಕಸಭಾ ಮತ್ತು ರಾಜ್ಯವಿಧಾನಸಭಾ ಸದಸ್ಯರ ಕ್ಷೇತ್ರಗಳನ್ನು ಪೂರ್ಣವಾಗಿ ಇಲ್ಲವೆ ಭಾಗಶಃ ಪ್ರತಿನಿಧಿಸುವ ಚುನಾಯಿತರಾದ ಜನತಾ ಪ್ರತಿನಿಧಿಗಳು, ಆಯಾ ತಾಲೂಕಿನ ಮತದಾರರು ಎಂದು ನೋಂದಾಯಿಸಲ್ಪಟ್ಟ ಲೋಕಸಭೆ ಹಾಗೂ ರಾಜ್ಯಸಭೆ ಸದಸ್ಯರನ್ನು ಒಳಗೊಂಡಿರುತ್ತದೆ. ಸಮಿತಿಯು ತಾಲೂಕಿನಲ್ಲಿರುವ ಗ್ರಾಮಪಂಚಾಯಿತಿಗಳ ೧/೫ ಭಾಗದಷ್ಟು ಅಧ್ಯಕ್ಷರುಗಳನ್ನು ಸಹ ಸರದಿಯ ಪ್ರಕಾರ ಒಂದು ವರ್ಷದ ಅವಧಿಗೆ ತಾಲೂಕು ಪಂಚಾಯಿತಿಗೆ ಆಯ್ಕೆ ಮಾಡಲಾಗುತ್ತದೆ. ತಾಲೂಕು ಪಂಚಾಯಿತಿಯಲ್ಲಿ ಕನಿಷ್ಠ ಶೇ.೨೦ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಹಾಗೂ ಒಟ್ಟು ಸ್ಥಾನಗಳ ಪೈಕಿ ೧/೩ ರಷ್ಟು ಮಹಿಳೆಯರಿಗೆ ಹಾಗೂ ಹಿಂದುಳಿದವರಿಗೆ ಮೀಸಲಿಡಲಾಗಿದೆ.

ತಾಲೂಕು ಪಂಚಾಯಿತಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಮಾನ್ಯ ಸ್ಥಾಯಿಸಮಿತಿ, ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ ಮತ್ತು ಸಾಮಾಜಿಕ ನ್ಯಾಯ ಸಮಿತಿಗಳನ್ನು ರಚಿಸಿಕೊಳ್ಳಬಹುದಾಗಿದೆ. ಚುನಾಯಿತ ಪ್ರತಿನಿಧಿಗಳ ಅಧಿಕಾರಾವಧಿ ಐದು ವರ್ಷಗಳು. ಚುನಾಯಿತ ಸದಸ್ಯರು ತಮ್ಮಲ್ಲಿಯ ಒಬ್ಬರನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನಾಗಿ ಆಯ್ಕೆಮಾಡಿಕೊಳ್ಳಬಹುದು. ಹೀಗೆ ಮಾಡುವಾಗ ಅವರು ಸರ್ಕಾರವು ಆಗಾಗ ನಿಗದಿಪಡಿಸಿದ ಮೀಸಲಾತಿ ನಿಯಮ ಅನುಸರಿಸಬೇಕಾಗುವುದು. ತಾಲೂಕು ಪಂಚಾಯಿತಿಗಳು ಕನಿಷ್ಠ ತಿಂಗಳಿಗೊಮ್ಮೆಯಾದರೂ ಸಭೆ ಸೇರಿ ತನ್ನ ಕಲಾಪ ನಡೆಸಬೇಕು. ತಾಲೂಕು ಪಂಚಾಯಿತಿಯ ಅಧ್ಯಕ್ಷರು ತಾಲೂಕಿನ ಎಲ್ಲ ವಿಧದ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಸಿಬ್ಬಂದಿ ಮೇಲ್ವಿಚಾರಣೆ, ಹಣಕಾಸಿನ ನಿರ್ವಹಣೆ, ಗೊತ್ತುವಳಿಗಳ ನಿರ್ಣಯ, ಸ್ಥಾಯಿಸಮಿತಿಗಳ ನಿರ್ವಹಣೆ ಮುಂತಾದ ಅಧಿಕಾರಗಳನ್ನು ಹೊಂದಿರುವರು. ಇದರ ಸಿಬ್ಬಂದಿ ವೆಚ್ಚವನ್ನು ಸರ್ಕಾರದ ಅನುದಾನದಿಂದ ಭರಿಸಲಾಗುತ್ತದೆ. ಕೋಲಾರ ಜಿಲ್ಲೆಯ ೧೧ ತಾಲೂಕು ಪಂಚಾಯಿತಿಗಳಿಗೆ ೧೯೯೫ರಲ್ಲಿ ಚುನಾವಣೆ ನಡೆಸಲಾಯಿತು. ತಾಲೂಕು ಪಂಚಾಯಿತಿಯು ಕಾಲಕಾಲಕ್ಕೆ ಸರ್ಕಾರ ಸೂಚಿಸುವ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ತಾಲೂಕು ಪಂಚಾಯಿತಿಗೆ ಸರ್ಕಾರವು ೨೭ ವಿವಿಧ ಬಗೆಯ ಕಾರ್ಯ ಜವಾಬ್ದಾರಿಗಳನ್ನು ವಹಿಸಿಕೊಟ್ಟಿದೆ. ಅವುಗಳೆಂದರೆ, ಜಿಲ್ಲಾ ಪಂಚಾಯಿತಿ ಸೂಚಿಸಿದ ವಾರ್ಷಿಕ ಯೋಜನೆಯ ಕರುಡು ತಯಾರಿಕೆ ಮತ್ತು ತಾಲೂಕಿನ ಆಯವ್ಯಯ ಪತ್ರ ತಯಾರಿಸುವುದು, ವ್ಯವಸಾಯ ಹಾಗೂ ಅದರ ವಿಸ್ತರಣಾ ಯೋಜನೆಗಳು, ಜಮೀನು ಅಭಿವೃದ್ಧಿ ಹಾಗೂ ಭೂ ಸಂರಕ್ಷಣೆ, ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣ, ಪಶುಪಾಲನೆ ಹಾಗೂ ಹೈನು ಅಭಿವೃದ್ಧಿ, ಮೀನುಗಾರಿಕೆ, ಗೃಹ ಕೈಗಾರಿಕೆ, ಗ್ರಾಮೀಣ ವಸತಿ ಯೋಜನೆ, ಗ್ರಾಮಾಂತರ ಕುಡಿಯುವ ನೀರಿನ ಯೋಜನೆ, ಅಸಾಂಪ್ರದಾಯಕ ಇಂಧನ ಶಕ್ತಿಯ ಬಳಕೆ, ಗ್ರಾಮೀಣ ನೈರ್ಮಲ್ಯ, ರಸ್ತೆ ಚರಂಡಿಗಳ ನಿರ್ಮಾಣ, ತಾಲೂಕು ಪಂಚಾಯಿತಿಗಳ ಆಸ್ತಿ ನಿರ್ವಹಣೆ ಮತ್ತು ರಕ್ಷಣೆ, ಶಿಕ್ಷಣ (ಪ್ರಾಥಮಿಕ–ಪ್ರೌಢ, ತಾಂತ್ರಿಕ ಹಾಗೂ ವೃತ್ತಿಪರ) ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಚಟುವಟಿಕೆಗಳು, ಸಮಾಜ ಕಲ್ಯಾಣ, ಗ್ರಾಮೀಣ ವಿದ್ಯುದೀಕರಣ ಹಾಗೂ ಸಹಕಾರಿ ಚಟುವಟಿಕೆಗಳು.

**ಜಿಲ್ಲಾ ಪಂಚಾಯತ್, ಕೋಲಾರ**

೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ೫೦ ಸದಸ್ಯರುಳ್ಳ ಕೋಲಾರ ಜಿಲ್ಲಾ ಪಂಚಾಯತ್ ೧೯೯೫ರಲ್ಲಿ ರಚನೆಗೊಂಡಿತು. ಪ್ರಸ್ತುತ ೪೭ ಜನ ಚುನಾಯಿತ ಸದಸ್ಯರನ್ನು ಇದು ಒಳಗೊಂಡಿದೆ. ಇವರಲ್ಲದೆ ಇಬ್ಬರು ಲೋಕಸಭಾ ಸದಸ್ಯರು, ೧೨ ಜನ ವಿಧಾನಸಭಾ ಸದಸ್ಯರು ಹಾಗೂ ನಾಲ್ವರು ವಿಧಾನ ಪರಿಷತ್ ಸದಸ್ಯರು ಹಾಗೂ ೧೧ ಮಂದಿ ತಾಲೂಕು ಪಂಚಾಯತ್ ಅಧ್ಯಕ್ಷರು ಸದಸ್ಯರಾಗಿರುತ್ತಾರೆ. ಜಿಲ್ಲೆಯನ್ನು ಆಡಳಿತ ದೃಷ್ಟಿಯಿಂದ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಕೋಲಾರ ಉಪವಿಭಾಗವು ಐದು ತಾಲೂಕುಗಳನ್ನು ಅಂದರೆ ಕೋಲಾರ, ಮಾಲೂರು, ಮುಳಬಾಗಿಲು, ಬಂಗಾರಪೇಟೆ ಮತ್ತು ಶ್ರೀನಿವಾಸಪುರಗಳನ್ನು ಒಳಗೊಂಡಿರುತ್ತದೆ. ಚಿಕ್ಕಬಳ್ಳಾಪುರ ಉಪವಿಭಾಗವು ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿ ಮತ್ತು ಶಿಡ್ಲಘಟ್ಟ ತಾಲೂಕುಗಳನ್ನು ಹೊಂದಿದೆ. ಗ್ರಾಮಮಟ್ಟದಲ್ಲಿ ೩೦೬ ಗ್ರಾಮಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿದ್ದು, ತಾಲೂಕುಮಟ್ಟದಲ್ಲಿ ತಾಲೂಕು ಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯಲ್ಲಿ ೧೮ ಅಭಿವೃದ್ಧಿ ಇಲಾಖೆಗಳು ಕಾರ್ಯನಿರತವಾಗಿವೆ. ಅವುಗಳು ಸಾರ್ವಜನಿಕ ಶಿಕ್ಷಣ, ಜಿಲ್ಲಾ ಯುವಜನ ಹಾಗೂ ಕ್ರೀಡೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗ ಕೋಲಾರ ಹಾಗೂ ಚಿಕ್ಕಬಳ್ಳಾಪುರ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೃಷಿ, ತೋಟಗಾರಿಕೆ, ಪಶುಪಾಲನೆ, ಮೀನುಗಾರಿಕೆ, ಅರಣ್ಯ, ಸಹಕಾರ, ಸಣ್ಣ ನೀರಾವರಿ, ಕೈಗಾರಿಕೆ, ರೇಷ್ಮೆ ಹಾಗೂ ಕೈಮಗ್ಗ ಜವಳಿ ಇಲಾಖೆಗಳಾಗಿರುತ್ತವೆ.

ಕೋಲಾರ ಜಿಲ್ಲಾ ಪಂಚಾಯತ್ ಕಾರ್ಯಾಲಯವು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದು, ಅವುಗಳಲ್ಲಿ ಕೆಲವು ತಾಲೂಕು ಪಂಚಾಯಿತಿ ಮತ್ತೆ ಕೆಲವು ಗ್ರಾಮ ಪಂಚಾಯಿತಿ ಮೂಲಕ ನಿರ್ವಹಿಸುವಂತಹವು. ಕಾರ್ಯಕ್ರಮಗಳಲ್ಲಿ ಹೆಚ್ಚಿನವುಗಳನ್ನು ವಿವಿಧ ಇಲಾಖೆಗಳ ಮೂಲಕ ಕಾರ್ಯಗತಗೊಳಿಸಲಾಗುತ್ತದೆ. ಜಿಲ್ಲಾ ಪಂಚಾಯಿತಿಯಲ್ಲಿ ೫ ಸ್ಥಾಯಿಸಮಿತಿಗಳು ಇವೆ. ಅವುಗಳೆಂದರೆ ೧) ಸಾಮಾನ್ಯ ಸ್ಥಾಯಿ ಸಮಿತಿ. (ಇದು ತನ್ನ ವ್ಯಾಪ್ತಿಗೆ ಬರುವ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರಿಶೀಲನೆ ಹಾಗೂ ತೀರ್ಮಾನ ತೆಗೆದುಕೊಳ್ಳುವುದು) ೨) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ. (ಯೋಜನೆಗಳು, ಲೆಕ್ಕಪತ್ರ ತಪಾಸಣೆ, ವ್ಯವಹಾರಗಳ ಪರಿಶೀಲನೆ, ಅನುಮೋದನೆ ಮಂಜೂರಾತಿ ಮುಂತಾದವು). ೩) ಸಾಮಾಜಿಕ–ನ್ಯಾಯ ಸ್ಥಾಯಿ ಸಮಿತಿ– (ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಮತ್ತು ಮಹಿಳೆಯರ ಮಕ್ಕಳ ಕಲ್ಯಾಣ ಇಲಾಖೆಗಳ ಕಾರ್ಯಕ್ರಮಗಳನ್ನು ಪರಿಶೀಲಿಸಿ ಅನುಮೋದಿಸುವುದು), ೪) ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ– (ಶಿಕ್ಷಣ ಹಾಗೂ ಆರೋಗ್ಯ ಕಾರ್ಯಕ್ರಮಗಳನ್ನು ಪರಿಶೀಲಿಸಿ ಅನುಮೋದನೆ ನೀಡುವುದು), ೫) ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ– (ತನ್ನ ವ್ಯಾಪ್ತಿಗೆ ಬರುವ ಇಲಾಖಾ ಕಾರ್ಯಕ್ರಮಗಳನ್ನು ಪರಿಶೀಲಿಸಿ ಪರಿಕರಗಳ ಖರೀದಿಗೆ ಅನುಮೋದನೆ ನೀಡುವುದು ಹಾಗೂ ಖರೀದಿ ಸಮಿತಿ ಇದ್ದು ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಯ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದೆ) ಖರೀದಿಸಿದ ಸಾಮಗ್ರಿಗಳ ಬಗ್ಗೆ ಚರ್ಚಿಸಿ ನಿರ್ಧಾರಗಳನ್ನು ಕೈಗೊಳ್ಳುವುದು. ಈ ಸ್ಥಾಯಿಸಮಿತಿಗಳಲ್ಲಿ ಅಧ್ಯಕ್ಷರೂ ಸೇರಿದಂತೆ ಏಳು ಜನ ಸದಸ್ಯರಿರುತ್ತಾರೆ.

ಸರ್ಕಾರವು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಡಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಯೋಜಿಸಿ ಆರ್ಥಿಕ ನೆರವು ಹಾಗೂ ಅನುದಾನ ನೀಡುವ ಮೂಲಕ ಅವುಗಳನ್ನು ಕಾರ್ಯಗತಗೊಳಿಸುತ್ತವೆ.

೨೦೦೨–೨೦೦೩ ಸಾಲಿನ ಜಿಲ್ಲಾ ಪಂಚಾಯತ್ ಯೋಜನಾ ಕಾರ್ಯಕ್ರಮಗಳ ಆರ್ಥಿಕ ಪ್ರಗತಿ ವಿವರ ಕೋಷ್ಟಕ ೧೨.೧ರಲ್ಲಿ ಕೊಡಲಾಗಿದೆ.

## ಕೋಷ್ಟಕ ೧೨.೧: ಜಿಲ್ಲಾ ಪಂಚಾಯತ್ ಯೋಜನಾ ಕಾರ್ಯಕ್ರಮಗಳ ೨೦೦೩–೨೦೦೪ನೇ ಸಾಲಿನ ಆರ್ಥಿಕ ಪ್ರಗತಿ ವಿವರ

ಲಕ್ಷ ರೂ.ಗಳಲ್ಲಿ

| ಕ್ರ.ಸಂ. | ಇಲಾಖೆ/ ವಲಯ | ವಾರ್ಷಿಕ ಅನುದಾನ | ಮಾರ್ಚ್ ೨೦೦೩ರ ಅಂತ್ಯದಲ್ಲಿ ಖರ್ಚು | ಶೇಕಡ |
|---|---|---|---|---|
| ೧ | ೨ | ೩ | ೪ | ೫ |
| ೧ | ಸಾಮಾನ್ಯ ಶಿಕ್ಷಣ ಪ್ರಾಥಮಿಕ ಮತ್ತು ಸೆಕೆಂಡರಿ | ೧೦೬.೦೦ | ೪೬.೦೩ | ೪೩.೪೩ |
| ೨ | ಕ್ರೀಡಾ ಕಾರ್ಯಕ್ರಮ ಮತ್ತು ಯುವಜನ ಸೇವೆ | ೧೨.೦೨ | ೫.೭೩ | ೪೭.೬೭ |
| ೩ | ವೈದ್ಯಕೀಯ ಮತ್ತು ಜನಾರೋಗ್ಯ | ೬೬.೬೩ | ೨೯.೭೬ | ೪೪.೬೬ |
| ೪ | ಭಾರತೀಯ ವೈದ್ಯ ಪದ್ಧತಿ | ೩.೩೧ | ೩.೫೯ | ೧೦೮.೪೬ |
| ೫ | ಕುಟುಂಬ ಕಲ್ಯಾಣ | ೩೧೫.೫೮ | ೨೫೧.೧೦ | ೭೯.೫೭ |
| ೬ | ನೀರು ಪೂರೈಕೆ ಮತ್ತು ನೈರ್ಮಲ್ಯ | ೮೩೩.೩೨ | ೭೨೫.೭೧ | ೮೭.೦೯ |
| ೭ | ಹರಿಜನ ಮತ್ತು ಗಿರಿಜನ ಕಲ್ಯಾಣ | ೩೧೨.೭೫ | ೧೮೪.೧೬ | ೫೮.೮೯ |
| ೮ | ವಿಶೇಷ ಘಟಕ ಯೋಜನೆ | ೧೧೮.೯೪ | ೬೪.೩೬ | ೫೪.೧೧ |
| ೯ | ಹಿಂದುಳಿದ ವರ್ಗಗಳ ಕಲ್ಯಾಣ | ೨೮.೨೫ | ೨೭.೯೪ | ೯೮.೯೧ |
| ೧೦ | ಮಹಿಳಾ ಮತ್ತು ಮಕ್ಕಳ ಕಲ್ಯಾಣ | ೭೭೮.೬೯ | ೭೬೯.೮೯ | ೯೮.೮೭ |
| ೧೧ | ಪೌಷ್ಠಿಕ ಆಹಾರ | ೨೬೩.೮೩ | ೨೬೯.೪೯ | ೧೦೨.೧೫ |
| ೧೨ | ವ್ಯವಸಾಯ | ೧೦೯.೯೧ | ೮೧.೪೧ | ೭೪.೦೭ |
| ೧೩ | ತೋಟಗಾರಿಕೆ | ೨೨.೫೧ | ೧೦.೮೪ | ೪೮.೧೪ |
| ೧೪ | ಪಶುಸಂಗೋಪನೆ | ೬೪.೪೧ | ೯೨.೫೦ | ೧೪೩.೬೨ |
| ೧೫ | ಮೀನುಗಾರಿಕೆ | ೨೫.೦೫ | ೨೦.೩೦ | ೮೧.೦೫ |
| ೧೬ | ಅರಣ್ಯ ಇಲಾಖೆ | ೮೩.೬೨ | ೧೦೫.೧೮ | ೧೨೫.೭೮ |
| ೧೭ | ಸಹಕಾರ ಸೇವೆಗಳು | ೮.೨೮ | ೫.೦೪ | ೬೦.೮೭ |
| ೧೮ | ಡಿ.ಆರ್.ಡಿ.ಎ.ಆಡಳಿತ ವೆಚ್ಚ | ೪೭.೮೮ | ೩೫.೯೧ | ೭೫.೦೦ |
| ೧೯ | ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ | ೧೨೭.೬೪ | ೯೫.೭೩ | ೭೫.೦೦ |
| ೨೦ | ಡಿ.ಪಿ.ಎ.ಪಿ ೫೦:೫೦ | ೨೭೯.೦೪ | ೨೦೯.೨೮ | ೭೫.೦೦ |
| ೨೧ | ಇಂದಿರಾ ಆವಾಜ್ ಯೋಜನೆ | ೩೯೪.೨೪ | ೨೯೮.೬೮ | ೭೫.೦೦ |
| ೨೨ | ಇಎಎಸ್ | ೯೮೪.೨೮ | ೭೩೮.೨೧ | ೭೫.೦೦ |
| ೨೩ | ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ | ೫.೯೪ | ೩.೬೨ | ೬೦.೯೪ |
| ೨೪ | ಗ್ರಾಮ ಪಂಚಾಯಿತಿಗಳಿಗೆ ಅನುದಾನ | ೬೧೪.೦೦ | ೧೩೧.೫೭ | ೨೧.೪೩ |
| ೨೫ | ಜಿಲ್ಲಾ ಪಂಚಾಯಿತಿ ಕಟ್ಟಡಗಳು | ೭.೪೨ | ೭.೪೨ | ೧೦೦.೦೦ |
| ೨೬ | ತಾಲ್ಲೂಕು ಪಂಚಾಯಿತಿಗಳಿಗೆ ಅಭಿವೃದ್ಧಿ ಅನುದಾನ | ೩೨.೬೫ | ೧೯.೯೯ | ೬೧.೨೩ |
| ೨೭ | ಗ್ರಾಮ ಪಂಚಾಯಿತಿಗಳಿಗೆ ಅಭಿವೃದ್ಧಿ ಅನುದಾನ | ೪೬೦.೫೦ | ೧೮೨.೪೪ | ೩೯.೬೨ |
| ೨೮ | ರಾಷ್ಟ್ರೀಯ ಗ್ರಾಮೀಣ ಇಂಧನ ಜಿಲ್ಲಾ ಕಾರ್ಯಕ್ರಮ | ೧.೧೧ | ೦.೦೭೧ | ೬೪೦ |
| ೨೯ | ಐ.ಆರ್.ಇ.ಪಿ. ಯೋಜನಾ ಅನುಷ್ಠಾನ | ೧೦.೦೨ | ೫.೫೬ | ೫೫.೪೯ |
| ೩೦ | ಸಣ್ಣ ನೀರಾವರಿ | ೩೨.೭೯ | ೨೨.೮೯ | ೬೯.೮೨ |

| ೧ | ೨ | ೩ | ೪ | ೫ |
|---|---|---|---|---|
| ೩೧ | ವಾಣಿಜ್ಯ ಮತ್ತು ಕೈಗಾರಿಕೆ | ೧೦.೧೮ | ೫.೪೯ | ೫೩.೯೫ |
| ೩೨ | ಕೈಮಗ್ಗ ಮತ್ತು ಜವಳಿ | ೧೩.೨೨ | ೮.೪೦ | ೬೩.೫೬ |
| ೩೩ | ರಸ್ತೆ ಮತ್ತು ಸೇತುವೆಗಳು | ೧೦೦.೬೩ | ೬೭.೮೧ | ೬೭.೩೯ |
| ೩೪ | ರೇಷ್ಮೆ | ೩೧.೨೭ | ೧೮.೩೮ | ೫೮.೭೮ |
| ೩೫ | ಜಿಲ್ಲಾ ಯೋಜನಾ ವಿಭಾಗ | ೨.೮೮ | ೦.೦೦ | ೦.೦೦ |
| ೩೬ | ಗಿರಿಜನ ಉಪಯೋಜನೆ | ೨೧.೩೧ | ೬.೩೧ | ೨೯.೬೨ |
| ೩೭ | ವಿಜ್ಞಾನ ಮತ್ತು ತಂತ್ರಜ್ಞಾನ | ೪.೦೦ | ೨.೦೦ | ೫೦.೦೦ |

ಮೂಲ: ಜಿಲ್ಲಾ ಪಂಚಾಯತ್, ಕೋಲಾರ

೨೦೦೩–೨೦೦೪ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೇತರ ಕಾರ್ಯಕ್ರಮಗಳ ಆರ್ಥಿಕ ಪ್ರಗತಿ ವಿವರವನ್ನು ಕೋಷ್ಟಕ ೧೨.೨ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೨: ಜಿಲ್ಲಾ ಪಂಚಾಯತ್ ಯೋಜನೇತರ ಕಾರ್ಯಕ್ರಮಗಳ**
**೨೦೦೩–೨೦೦೪ನೇ ಸಾಲಿನ ಆರ್ಥಿಕ ಪ್ರಗತಿ**

ಲಕ್ಷ ರೂ.ಗಳಲ್ಲಿ

| ಕ್ರ.ಸಂ. | ಇಲಾಖೆ/ ವಲಯ | ವಾರ್ಷಿಕ ಅನುದಾನ | ಮಾರ್ಚ್ ೨೦೦೩ರ ಅಂತ್ಯದಲ್ಲಿ ಖರ್ಚು | ಶೇಕಡ |
|---|---|---|---|---|
| ೧ | ೨ | ೩ | ೪ | ೫ |
| ೧ | ಲೋಕೋಪಯೋಗಿ ಕಾರ್ಯಕ್ರಮ | ೩೪೫.೦೧ | ೩೭೨.೩೮ | ೧೦೭.೯೩ |
| ೨ | ಸಾಮಾನ್ಯ ಶಿಕ್ಷಣ | ೧೨,೧೦೬.೮೪ | ೧೨,೧೪೮.೧೫ | ೧೦೦.೩೪ |
| ೩ | ಯುವಜನಸೇವೆ | ೧೪.೭೮ | ೧೦.೨೪ | ೬೯.೨೮ |
| ೪ | ಆರೋಗ್ಯ ಸೇವೆಗಳು | ೧,೨೬೦.೨೦ | ೧,೧೫೪.೬೬ | ೯೧.೬೩ |
| ೫ | ಕುಟುಂಬ ಕಲ್ಯಾಣ | ೨೫೬.೦೪ | ೨೧೩.೧೧ | ೮೩.೨೩ |
| ೬ | ಕುಡಿಯುವ ನೀರು | ೧೦.೦೬ | ೫.೬೮ | ೫೬.೪೬ |
| ೭ | ಸಮಾಜ ಕಲ್ಯಾಣ | ೯೬೭.೩೫ | ೮೪೨.೦೦ | ೮೭.೦೪ |
| ೮ | ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ | ೩೫೭.೧೩ | ೨೯೯.೭೮ | ೮೩.೯೪ |
| ೯ | ಮಹಿಳಾ ಮತ್ತು ಮಕ್ಕಳ ಕಲ್ಯಾಣ | ೨೦.೭೧ | ೧೯.೦೬ | ೯೨.೦೩ |
| ೧೦ | ಪೌಷ್ಟಿಕ ಆಹಾರ | ೩೩೭.೪೫ | ೩೧೪.೮೭ | ೯೩.೩೧ |
| ೧೧ | ವ್ಯವಸಾಯ | ೩೬೫.೦೩ | ೩೪೯.೮೯ | ೯೫.೮೫ |
| ೧೨ | ತೋಟಗಾರಿಕೆ | ೧೧೩.೪೪ | ೧೦೧.೩೩ | ೮೯.೩೨ |
| ೧೩ | ನೀರು ಮತ್ತು ಭೂಸಾರ ಸಂರಕ್ಷಣೆ | ೯೪.೬೫ | ೧೦೦.೫೯ | ೧೦೬.೦೬ |
| ೧೪ | ಪಶುಸಂಗೋಪನೆ | ೪೭೬೭೬ | ೪೭೬೪೨ | ೯೭೮೩ |
| ೧೫ | ಮೀನುಗಾರಿಕೆ | ೨೯.೫೩ | ೨೯.೯೪ | ೯೪.೩೨ |
| ೧೬ | ಸಣ್ಣ ನೀರಾವರಿ | ೧೪೧.೦೪ | ೮೪.೬೩ | ೬೦.೦೦ |
| ೧೭ | ರೇಷ್ಮೆ ಅಭಿವೃದ್ಧಿ | ೩೦೦.೨೯ | ೩೧೫.೪೬ | ೧೦೫.೦೫ |
| ೧೮ | ಕೈಮಗ್ಗ ಮತ್ತು ಜವಳಿ | ೨೬.೨೩ | ೨೪.೭೪ | ೯೪.೩೨ |

| ೧ | ೨ | ೩ | ೪ | ೫ |
|---|---|---|---|---|
| ೧೯ | ಕೈಗಾರಿಕೆ | ೧೦೩೧ | ೧೧೩೧ | ೧೦೯.೭೦ |
| ೨೦ | ರಸ್ತೆ ಮತ್ತು ಸೇತುವೆ | ೨೯೫.೯೩ | ೧೦೯.೮೭ | ೩೭.೧೩ |
| ೨೧ | ಯೋಜನೆ | ೧೬೧೧ | ೬೩೭ | ೩೯.೫೪ |
| ೨೨ | ಜಿ.ಪಂ. ತಾ.ಪಂ. ಮತ್ತು ಗ್ರಾ.ಪಂ. ಅನುದಾನ | ೪೯೧.೩೫ | ೪೬೨.೩೧ | ೯೪.೧೯ |
| **ಒಟ್ಟು** | | **೧೮೦೩೬೨೪** | **೧೭೪೪೨೯** | **೯೬.೭೧** |

ಮೂಲ: ವಾರ್ಷಿಕ ವರದಿ, ಜಿಲ್ಲಾ ಪಂಚಾಯತ್, ಕೋಲಾರ

**ಯೋಜನಾ ಕಾರ್ಯಕ್ರಮಗಳ ರಾಜ್ಯ ಹಾಗೂ ಕೇಂದ್ರ ಯೋಜನೆಗಳ ಬಜೆಟ್ ಗಾತ್ರ (೨೦೦೩–೦೪)**

**(ಲಕ್ಷ ರೂ.ಗಳಲ್ಲಿ)**

| | **ಯೋಜನೆ** | **ಯೋಜನೇತರ** | **ಒಟ್ಟು** |
|---|---|---|---|
| ರಾಜ್ಯ | ೩,೧೮೨.೩೬ | ೧೮,೦೩೬.೨೪ | ೨೧,೨೧೮.೬೦ |
| ಕೇಂದ್ರ | ೩,೧೫೫.೭೪ | – | ೩,೧೫೫.೭೪ |
| **ಒಟ್ಟು** | **೬,೩೩೮.೧೦** | **೧೮,೦೩೬.೨೪** | **೨೪,೩೭೪.೩೪** |

ಮೂಲ: ವಾರ್ಷಿಕ ವರದಿ, ಜಿಲ್ಲಾ ಪಂಚಾಯತ್, ಕೋಲಾರ

೨೦೦೩–೨೦೦೪ರ ಸಾಲಿನ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮಗಳ ಪಟ್ಟಿಯನ್ನು ಕೋಷ್ಟಕ ೧೨.೩ರಲ್ಲಿ ಕೊಟ್ಟಿದೆ.

**ಕೋಷ್ಟಕ ೧೨.೩:**

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ. | ವಿವರ | ವಾರ್ಷಿಕ ಅನುದಾನ | ಮಾರ್ಚ್ ೨೦೦೨ರ ಅಂತ್ಯದಲ್ಲಿ ಖರ್ಚು | ಶೇಕಡ |
|---|---|---|---|---|
| ೧ | ೨ | ೩ | ೪ | ೫ |
| ೧ | ಜಿ.ಗ್ರಾ.ಅ.ಪ್ರಾ.ರ. (ಡಿ.ಆರ್.ಡಿ.ಎ) ಆಡಳಿತ ವೆಚ್ಚ | ೪೭.೮೮ | ೬೨.೫೦ | ೧೩೦.೫೩ |
| ೨ | ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್.ಜಿ.ಎಸ್.ವೈ) | ೨೨೨.೮೮ | ೩೬೧.೭೩ | ೧೬೨.೨೯ |
| ೩ | ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ (ಡಿ.ಪಿ.ಎ.ಪಿ) | ೭೯೯.೫೦ | ೪೫೯.೫೯ | ೫೭.೪೮ |
| ೪ | ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ (ಐ.ಆರ್.ಇ.ಪಿ) | ೭೩೪ | ೫.೬೪ | ೭೬.೮೩ |
| ೫ | ಇಂದಿರಾ ಆವಾಜ್ ಯೋಜನೆ (ಐ.ಎ.ವೈ) | ೭೧೩.೪೦ | ೫೨೩.೮೪ | ೭೩.೪೨ |
| ೬ | ಎ) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ – ಎರಡನೇ ವಾಹಿನಿ | ೮೦೬.೩೩ | ೯೪೧.೧೪ | ೧೧೬.೭೧ |
| | ಬಿ) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ – ಮೊದಲನೆ ವಾಹಿನಿ | ೮೨೪.೩೬ | ೯೭೭.೬೦ | ೧೧೮.೫೮ |
| ೭ | ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ (ಎನ್.ಪಿ.ಐ.ಸಿ) | – | ೦.೭೨ | – |
| ೮ | ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ (ಎನ್.ಪಿ.ಬಿ.ಡಿ) | ೮.೦೦ | ೨.೯೮ | ೩೭.೨೫ |

ಮೂಲ: ವಾರ್ಷಿಕ ವರದಿ ಜಿಲ್ಲಾ ಪಂಚಾಯತ್, ಕೋಲಾರ

೨೦೦೨–೨೦೦೩ನೇ ಸಾಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖಾ ಪ್ರಗತಿ (ಜಿಲ್ಲಾ ವಲಯ ಯೋಜನೆ)ಯನ್ನು ಕೋಷ್ಟಕ ೧೨.೪ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೨.೪: ೨೦೦೨–೨೦೦೩ನೇ ಸಾಲಿನಲ್ಲಿ ಮಾರ್ಚ್–೨೦೦೩ರ ಮಾಹೆಯವರೆಗೆ ಸಾಧಿಸಿದ ಪ್ರಗತಿ ಜಿಲ್ಲಾ ವಲಯ (ಯೋಜನೆ)**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಕಾರ್ಯಕ್ರಮದ ಹೆಸರು | ೨೦೦೨–೨೦೦೩ನೇ ಸಾಲಿಗೆ ನಿಗದಿ ಪಡಿಸಿದ ಹಣ | ಜಿಲ್ಲಾಪಂಚಾಯತ್ ನಿಂದ ಬಿಡುಗಡೆ ಯಾದ ಹಣ ಮಾರ್ಚ್ ೨೦೦೩ರ ಅಂತ್ಯಕ್ಕೆ ಖರ್ಚು | ಮಾರ್ಚ್ ೨೦೦೩ರ ಅಂತ್ಯಕ್ಕೆ ಖರ್ಚು | ಭೌತಿಕ ಗುರಿ | ಭೌತಿಕ ಸಾಧನೆ |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ೧ | ನಿಲಯಗಳಿಗೆ ಪ್ರೋತ್ಸಾಹ ಧನ | ೦.೧೮ | ೦.೧೮ | ೦.೦೮ | ೯೦ | ೭೭ |
| ೨ | ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು | ೦.೨೪ | ೦.೨೪ | ೦.೮೦ | ೩ | ೩ |
| ೩ | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು | ೦.೪೩ | ೦.೪೩ | – | – | – |
| ೪ | ಮೆಟ್ರಿಕ್ ನಂತರ ವಿದ್ಯಾರ್ಥಿವೇತನ | ೨.೧೩ | ೩.೬೦ | ೨.೦೦ | ೭೧೦ | ೯೪ |
| ೫ | ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ | ೨.೮೪ | ೩.೬೦ | ೨.೫೮ | ೫೪೦ | ೩೮೦ |
| ೬ | ಹೆಚ್ಚುವರಿ ಊಟದ ವೆಚ್ಚ, ನೀಡಿಕೆ | ೧.೯೧ | ೧.೯೩ | ೨.೧೯ | ೩೬ | ೩೬ |
| ೭ | ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ | ೧೧.೫೧ | ೧೧.೬೫ | ೧೧.೬೫ | ೧೧ | ೧೧ |
| ೮ | ವಿದ್ಯಾರ್ಥಿನಿಲಯಗಳಲ್ಲಿ ಸಂಖ್ಯಾಬಲ ಹೆಚ್ಚಳ ಮತ್ತು ನಿರ್ಮಾಣ | ೩.೫೬ | ೩.೬೦ | ೧.೩೯ | ೪ | ೩ |
| ೯ | ವಿದ್ಯಾರ್ಥಿನಿಲಯಗಳ ಸುಧಾರಣೆ | ೩.೫೬ | ೩.೬೦ | ೩.೪೬ | ೬ | ೬ |
| ೧೦ | ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ | ೦.೩೬ | ೦.೩೬ | ೦.೨೯ | ೧ | ೧ |
| ೧೧ | ಹೊಸ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆ | ೦.೨೪ | ೦.೩೪ | ೦.೩೮ | ೧೦ | ೧೦ |
| ೧೨ | ವಕೀಲರಿಗೆ ಶಿಷ್ಯವೇತನ ನೀಡಿಕೆ | ೧.೧೯ | ೧.೧೯೯ | ೧.೨೦೨ | ೧೫ | ೧೫ |
| | ಒಟ್ಟು | ೨೭.೧೫ | ೨೯.೭೪ | ೨೪.೯೨೪ | ೪೧೦೬ | ೩೯೧೬ |

ಮೂಲ: ಜಿಲ್ಲಾ ಪಂಚಾಯತ್, ಕೋಲಾರ

**ನಗರ ಯೋಜನೆ:**

ರಾಜ್ಯದಲ್ಲಿ ನಗರ/ಪಟ್ಟಣಗಳ ಯೋಜಿತ ಬೆಳವಣಿಗೆಗಾಗಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ ಅವುಗಳನ್ನು ಜಾರಿಗೊಳಿಸುವುದು ಮತ್ತು ತಾಂತ್ರಿಕ ನೆರವು ನೀಡುವುದು ನಗರ ಯೋಜನಾ ಇಲಾಖೆ ಮುಖ್ಯ ಉದ್ದೇಶವಾಗಿದೆ. ೧೯೦೩ರ ಮೈಸೂರು ನಗರಾಭಿವೃದ್ಧಿ ಮಂಡಳಿಯ ಅಧಿನಿಯಮವು ನಗರ ಯೋಜನೆ ಮತ್ತು ಅಭಿವೃದ್ಧಿಗಾಗಿ ಸರ್ಕಾರವು ಸಿದ್ಧಪಡಿಸಿದ ಮೊಟ್ಟ ಮೊದಲ ಕಾಯ್ದೆಯಾಗಿತ್ತು. ನಗರ ಯೋಜನೆ ಇಲಾಖೆ ಅಸ್ತಿತ್ವಕ್ಕೆ ಬಂದ ಮೇಲೆ ನಗರ ಮತ್ತು ಪಟ್ಟಣ ಪ್ರದೇಶಗಳ ಅಭಿವೃದ್ಧಿ ಯೋಜನೆಗಳನ್ನು ಈ ಇಲಾಖೆ ಹಮ್ಮಿಕೊಳ್ಳುತ್ತಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ ೧೯೬೧

ಮತ್ತು ಕರ್ನಾಟಕ ಪ್ರಾಧಿಕಾರಗಳ ಅಧಿನಿಯಮ ೧೯೬೫ ಇವು ೧೯೬೫ರಲ್ಲಿ ಜಾರಿಗೊಂಡಿದ್ದು ಈ ಕಾಯ್ದೆ ಮತ್ತು ನಿಯಮಗಳಡಿ ಕರ್ನಾಟಕದಲ್ಲಿರುವ ಪಟ್ಟಣ/ನಗರ ಪ್ರದೇಶಗಳ, ಕೆಲವು ಪ್ರಮುಖ ಗ್ರಾಮಗಳ ಹಾಗೂ ಪ್ರೇಕ್ಷಣೀಯ ಸ್ಥಳಗಳ ಕ್ರಮಬದ್ಧವಾದ ಬೆಳವಣಿಗೆಗಾಗಿ ಅಭಿವೃದ್ಧಿ ನಕ್ಷೆಗಳನ್ನು ಮತ್ತು ವರದಿಯನ್ನು ತಯಾರಿಸಿ, ಭೂ ಉಪಯೋಗಗಳನ್ನು ನಿಯಂತ್ರಿಸುವುದು ಇಲಾಖೆಯ ಮುಖ್ಯ ಕಾರ್ಯ ಜವಾಬ್ದಾರಿಯಾಗಿದೆ. ಯೋಜನಾ ಬದ್ಧವಲ್ಲದ ಅಭಿವೃದ್ಧಿಗಳನ್ನು ನಿಯಂತ್ರಿಸುವುದು, ಹಾಲಿ ಇರುವ ಸೌಕರ್ಯಗಳನ್ನು ರಕ್ಷಿಸುವ ಅವಶ್ಯಕತೆಗನುಗುಣವಾಗಿ ಸೌಕರ್ಯಗಳನ್ನು ಒದಗಿಸುವುದು, ಯೋಜನಾಬದ್ಧವಾಗಿ ವಿವಿಧ ಭೂ ಉಪಯೋಗಗಳನ್ನು ಗುರ್ತಿಸಿ ಜೀವನವನ್ನು ಉತ್ತಮಪಡಿಸುವುದು ಹಾಗೂ ನಗರ ಯೋಜನಾ ಅಭಿವೃದ್ಧಿ ಕಾರ್ಯಗಳನ್ನು ನಿಯಂತ್ರಿಸಿ ಸರಿಯಾದ ಕ್ರಮವನ್ನು ಅನುಸರಿಸುವುದು ಇಲಾಖೆಯ ಇನ್ನಿತರ ಕಾರ್ಯಚಟುವಟಿಕೆಗಳಾಗಿವೆ. ನಗರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಯನ್ನು ಮೊದಲನೆಯ ಮಾಸ್ಟರ್ ಪ್ಲಾನ್ ಘಟಕವಾಗಿ ಕೋಲಾರ ಜಿಲ್ಲೆಯ ಕೆ.ಜಿ.ಎಫ್.ನಗರದಲ್ಲಿ ೧೯೬೪ರಲ್ಲಿ ಸ್ಥಾಪಿಸಲಾಯಿತು. ಎರಡನೆ ಘಟಕವಾಗಿ ಕೋಲಾರದಲ್ಲಿ ೧೯೮೧ರಲ್ಲಿ ಕಛೇರಿ ಸ್ಥಾಪನೆಗೊಂಡಿದೆ. ಕರ್ನಾಟಕ ರಾಜ್ಯದಲ್ಲಿ ಹೊಸ ಜಿಲ್ಲೆಗಳನ್ನು ರಚಿಸಿದ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಮೊದಲನೇ ಘಟಕದ ನಗರ ಸಹಾಯಕ ನಿರ್ದೇಶಕರ ಕಛೇರಿಯನ್ನು ೧೯೯೮ರಲ್ಲಿ ಚಾಮರಾಜನಗರಕ್ಕೆ ಸ್ಥಳಾಂತರಿಸಲಾಯಿತು. ಪ್ರಸ್ತುತ ಎರಡನೆ ಘಟಕ ಮಾತ್ರ ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಮಾಲೂರು ತಾಲೂಕು ಹೊರತುಪಡಿಸಿ ಉಳಿದೆಲ್ಲ ತಾಲೂಕುಗಳು ನಗರ ಯೋಜನಾ ಸಹಾಯಕ ನಿರ್ದೇಶಕರ ಆಡಳಿತ ವ್ಯಾಪ್ತಿಗೆ ಒಳಪಟ್ಟಿವೆ. ಮಾಲೂರು ತಾಲೂಕು ಕೋಲಾರ ಜಿಲ್ಲಾ ವ್ಯಾಪ್ತಿಯಲ್ಲಿದ್ದರೂ ಸಹ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿದೆ.

ಕರ್ನಾಟಕ–ರಾಜಸ್ವ ಇಲಾಖೆಯಿಂದ ವ್ಯವಸಾಯ ಜಮೀನುಗಳನ್ನು ಇತರೆ ಉಪಯೋಗಗಳಿಗೆ ಅನ್ಯಕ್ರಾಂತಗೊಳಿಸಲು ಅಭಿಪ್ರಾಯ ಕೋರಿದಾಗ ಇದು ತಾಂತ್ರಿಕ ಅಭಿಪ್ರಾಯ ನೀಡುತ್ತದೆ. ಕರ್ನಾಟಕ ಭೂ ಸುಧಾರಣೆ ಕಾಯ್ದೆ ೧೯೬೧ರ ಕಲಂ ೧೦೯ರಂತೆ ಸಂಘ ಸಂಸ್ಥೆಗಳಿಗೆ ಭೂಮಿ ಖರೀದಿಸಲು ಅನುಮತಿ ನೀಡುವ ಸಂಬಂಧ ರಾಜಸ್ವ ಇಲಾಖೆಯಿಂದ ಕೋರಿಕೆ ಬಂದಾಗ ತಾಂತ್ರಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ತಾಂತ್ರಿಕ ಅಭಿಪ್ರಾಯ ನೀಡುವುದು, ಸಾರ್ವಜನಿಕರು ಭೂ ರೂಪರೇಷೆಗಳನ್ನು ಅನುಮೋದಿಸಲು ಕೋರಿದಾಗ ನಿಯಮಾವಳಿಗಳಂತೆ ರೂಪರೇಷೆಗಳನ್ನು ತಯಾರಿಸಿ ಅನುಮೋದನೆ ನೀಡುವುದು, ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ ೧೯೮೭ರನ್ವಯ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ, ಸ್ಥೂಲಾಭಿವೃದ್ಧಿ ಯೋಜನೆಗೆ ವ್ಯಾಪಕಾಭಿವೃದ್ಧಿ ಯೋಜನೆಗಳನ್ನು ತಯಾರಿಸುವಲ್ಲಿ ಕೋಲಾರ ಹಾಗೂ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ತಾಂತ್ರಿಕ ವಿಷಯಗಳಲ್ಲಿ ನೆರವು ನೀಡುವುದು ಹಾಗೂ ಕಾಯ್ದೆಯನ್ನು ಕಾರ್ಯಗತಗೊಳಿಸುವಲ್ಲಿ ತಾಂತ್ರಿಕ ಸಲಹೆ ನೀಡುವುದು, ಮತ್ತು ಚಿಂತಾಮಣಿ ನಗರ ಯೋಜನಾ ಪ್ರಾಧಿಕಾರದ ಕೆಲಸಗಳನ್ನು ನಿಯಮಾನುಸಾರ ನಿರ್ವಹಿಸುವುದು, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಹಾಗೂ ಮುಳಬಾಗಿಲು ಪಟ್ಟಣಗಳ ಪುರಸಭಾ ಯೋಜನಾ ಪ್ರಾಧಿಕಾರಗಳಿಗೆ ತಾಂತ್ರಿಕ ಸಲಹೆ ನೀಡುವುದು ನಗರ ಯೋಜನೆ ಕಾರ್ಯಾಲಯದ ಕಛೇರಿಯ ಕಾರ್ಯ ಚಟುವಟಿಕೆಗಳಾಗಿವೆ.

### ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ ೧೯೯೧ರನ್ವಯ ೧೭–೬–೧೯೮೮ರಲ್ಲಿ ಕೋಲಾರದಲ್ಲಿ ಸ್ಥಾಪನೆಗೊಂಡಿತು. ಈ ಪ್ರಾಧಿಕಾರದ ಕ್ಷೇತ್ರ ವ್ಯಾಪ್ತಿಯು ೬೯.೯೫ ಚದರ ಕಿ.ಮೀ.ಗಳಿಗೆ ವ್ಯಾಪಿಸಿದೆ. ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಅಧ್ಯಕ್ಷರನ್ನು ನಾಮಕರಣ ಮಾಡಲಾಗುತ್ತದೆ. ಕೋಲಾರ ಕ್ಷೇತ್ರದ ಶಾಸಕರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಪ್ರಾಧಿಕಾರದ ಮುಖ್ಯಸ್ಥರು ಆಯುಕ್ತರು ಆಗಿದ್ದು ಕಾರ್ಯಪಾಲ ಅಭಿಯಂತರರು ಇಂಜಿನಿಯರಿಂಗ್ ಸದಸ್ಯರಾಗಿರುತ್ತದೆ. ಸಹಾಯಕ ನಿರ್ದೇಶಕರು ನಗರ ಯೋಜನೆ ಇವರು ನಗರ ಯೋಜನಾ ಸದಸ್ಯರಾಗಿರುತ್ತಾರೆ. ಆರಕ್ಷಕ ಅಧೀಕ್ಷಕರು, ಪೌರಾಯುಕ್ತರು, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರು ಇತರ ಸದಸ್ಯರಾಗಿರುತ್ತಾರೆ. ಅಧಿಕಾರೇತರ ಸದಸ್ಯರು ಐದು ಜನ ಇದ್ದು, ಅವರು ಪ್ರಾಧಿಕಾರದ ಸದಸ್ಯರು ಆಗಿರುತ್ತಾರೆ.

ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚುವುದು, ಭೂ ಪರಿವರ್ತನೆ ಮಾಡಲು ನಿರಕ್ಷೇಪಣಾ ಪತ್ರ ನೀಡುವುದು, ಹೊಸ ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ಹಾಗೂ ರೂಪರೇಷೆ ನಕ್ಷೆಗಳಿಗೆ ಅನುಮೋದನೆ ನೀಡುವುದು, ಇವು ಪ್ರಾಧಿಕಾರದ ಮುಖ್ಯ ಕಾರ್ಯಚಟುವಟಿಕೆಗಳಾಗಿವೆ.

ನಗರಾಭಿವೃದ್ಧಿ ಪ್ರಾಧಿಕಾರವು ಪರಿಶೋಧನಾ ಶುಲ್ಕ, ಉತ್ತಮತೆ ಶುಲ್ಕ, ಅಭಿವೃದ್ಧಿ ಶುಲ್ಕ, ದಂಡ ಮತ್ತು ತೆರಿಗೆ ಇತ್ಯಾದಿಗಳನ್ನು ವಿಧಿಸುವ ಮೂಲಕ ತನ್ನ ಆದಾಯವನ್ನು ಗಳಿಸುತ್ತದೆ.

**ಪ್ರಾಧಿಕಾರ ಕೈಗೊಂಡ ಅಭಿವೃದ್ಧಿ ಕಾರ್ಯಗಳು**

ಟಮಕ ಒಂದನೇ ಹಂತದ ಅಭಿವೃದ್ಧಿ ಯೋಜನೆ: ಈ ವಸತಿ ಯೋಜನೆಯಲ್ಲಿ ೧೨೧ ಎಕರೆ ೦೩ ಗುಂಟೆ ಜಮೀನನ್ನು ೫.೭೯ ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ೧೯೯೨ರಲ್ಲಿ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ. ೧೯೯೭ರಲ್ಲಿ ಇದನ್ನು ಅಭಿವೃದ್ಧಿಪಡಿಸಲು ಪರಿಷ್ಕೃತ ೬.೫೯೫ ಕೋಟಿ ರೂ ಮಂಜೂರಾತಿ ದೊರೆತಿದೆ. ಈ ಯೋಜನೆಯಲ್ಲಿ ರಸ್ತೆ ವಿದ್ಯುತ್ ಮತ್ತು ನೀರು ಸರಬರಾಜು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು, ಈವರೆಗೆ ಸುಮಾರು ಶೇ.೮೫ ರಷ್ಟು ಕೆಲಸ ಪೂರ್ಣಗೊಂಡಿದೆ.

**ಟಮಕ ಎರಡನೇ ಹಂತದ ವಸತಿ ಯೋಜನೆ**

ಈ ಯೋಜನೆಯಡಿ ಒಟ್ಟು ೬೫ ಎಕರೆ ೩೮ ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಕಟಣೆ ಹೊರಡಿಸಿದ್ದು, ಇಲ್ಲಿ ಒಟ್ಟು ೧,೧೦೮ ನಿವೇಶನಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಪ್ರಾಧಿಕಾರಕ್ಕಿದೆ.

ಪ್ರಾಧಿಕಾರವು ಈಗಾಗಲೇ ಅಭಿವೃದ್ಧಿಪಡಿಸಿರುವ ೧ನೇ ಹಂತದ ಅಭಿವೃದ್ಧಿ ಯೋಜನೆಯಲ್ಲಿ ೧೪೨೨ ನಿವೇಶನಗಳನ್ನು ವಿಂಗಡಿಸಿ ಇದುವರೆವಿಗೂ ೧೨೫೦ ನಿವೇಶನಗಳನ್ನು ಹಂಚಿ, ನಿವೇಶನದಾರರಿಗೆ ನೋಂದಣಿ ಮಾಡಿಕೊಡಲಾಗಿದೆ. ಈ ಯೋಜನೆಯಲ್ಲಿ ಶೇಕಡಾ ೨೦ ರಷ್ಟು ಅಂದರೆ ೨೮೫ ನಿವೇಶನಗಳನ್ನು ದುರ್ಬಲವರ್ಗದವರಿಗೆ ಹಂಚಲಾಗಿದೆ.

**ಪ್ರಾಧಿಕಾರದ ಕಳೆದ ಮೂರು ವರ್ಷಗಳ ಆದಾಯ ವೆಚ್ಚಗಳ ತ:ಖ್ತೆ : (ರೂ.ಗಳಲ್ಲಿ)**

| ವಿವರ | ೨೦೦೧-೦೨ | ೨೦೦೦೨-೦೩ | ೨೦೦೩-೦೪ |
|---|---|---|---|
| **ಆದಾಯ** | ೧೩,೫೬,೬೫,೦೦೦ | ೧೫,೧೬,೩೫,೦೫೪ | ೯೧,೬೯,೬೨೦ |
| **ಖರ್ಚು** | ೮,೮೦,೦೦,೦೦೦ | ೮,೯೨,೫೦,೦೦೦ | ೪೧,೨೩,೪೦೦ |
| **ಶಿಲ್ಕು** | ೪,೭೬,೬೫,೦೦೦ | ೬,೨೩,೮೫,೦೫೪ | ೫೦,೪೬,೨೨೦ |

**ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರ**

ನಗರದ ಯೋಜನಾಬದ್ಧ ಬೆಳವಣಿಗೆಯನ್ನು ನೋಡಿಕೊಳ್ಳಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ೧೯೬೧ರನ್ವಯ ೧೯೭೩ರಲ್ಲಿ ನಗರ ಯೋಜನಾ ಪ್ರಾಧಿಕಾರಗಳನ್ನು ರಚಿಸಲು ಅವಕಾಶವಿದ್ದು ಅದರಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ೧೯೮೭ರ ಅಧಿನಿಯಮದನ್ವಯ ಕೆಜಿಎಫ್ ನಗರಾಭಿವೃದ್ಧಿ ಪ್ರಾಧಿಕಾರವನ್ನು ೨-೬-೧೯೮೮ರಂದು ರಚಿಸಲಾಗಿದ್ದು, ೧೬-೭-೮೮ರಿಂದ ಅದು ಕಾರ್ಯರೂಪಕ್ಕೆ ಬಂದಿದೆ. ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು ೨೧೬ ಚ.ಕಿ.ಮೀ. ಆಗಿರುತ್ತದೆ. ೨೪-೧೧-೨೦೦೩ರವರೆಗೆ ಜಿಲ್ಲಾಧಿಕಾರಿಗಳು ಪ್ರಾಧಿಕಾರದ ಅಧ್ಯಕ್ಷರಾಗಿದ್ದರು, ಸರ್ಕಾರದ ಅಧಿಸೂಚನೆ ಮೇರೆಗೆ ೧೮-೧೨-೨೦೦೩ರಿಂದ ಬೇರೆ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ. ಸ್ಥಳೀಯ ಅಧಿಕಾರಿ ಸದಸ್ಯರನ್ನೊಳಗೊಂಡ ಸಮಿತಿಯೊಂದು ಪ್ರಾಧಿಕಾರದ ಆಡಳಿತ ವ್ಯವಹಾರ ನೋಡಿಕೊಳ್ಳುತ್ತದೆ. ಆಯುಕ್ತರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ನಗರ ಯೋಜನಾ ಸದಸ್ಯರು ಹಾಗೂ ಯೋಜನೆಗೆ ಸಂಬಂಧಿಸಿದ ತಾಂತ್ರಿಕ ಕೆಲಸ ನಿರ್ವಹಿಸಲು ನಗರ ಯೋಜನಾ ಇಲಾಖೆ, ಕೋಲಾರ ಇವರ ಕಚೇರಿಯಿಂದ ಹೆಚ್ಚುವರಿ ಕೆಲಸದ ಮೇಲೆ ಒಬ್ಬ ನಗರ ಯೋಜನಾ ಪರಿವೀಕ್ಷಕರು ಹಾಗೂ ೮ ಮಂದಿ ಆಡಳಿತ ಸಿಬ್ಬಂದಿ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಪ್ರಾಧಿಕಾರದ ಧ್ಯೇಯೋದ್ದೇಶಗಳು:** ಕೆಜಿಎಫ್ ನಗರಾಭಿವೃದ್ಧಿ ಪ್ರಾಧಿಕಾರದ ಮುಖ್ಯ ಉದ್ದೇಶವೆಂದರೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಲೇಔಟ್ (ವಸತಿ ಬಡಾವಣೆ)ಗಳನ್ನು ನಿರ್ಮಿಸುವುದು ಮತ್ತು ನಿವೇಶನದ ಅವಶ್ಯಕತೆ ಅನುಗುಣವಾಗಿ ಸಾಮಾನ್ಯ ಜನರಿಗೆ ನಿವೇಶನ ಹಂಚುವುದು ಆಗಿದೆ.

ಪ್ರಾಧಿಕಾರವು ಉರಿಗಾಂಪೇಟೆಯಲ್ಲಿ ಕಿರು ನೀರು ಸರಬರಾಜು ಯೋಜನೆಯನ್ನು ೧೭.೫೨ ಲಕ್ಷ ರೂ. ಅಂದಾಜಿನಲ್ಲಿ ಕೈಗೊಂಡು ನಾಲ್ಕು ಕೊಳವೆ ಬಾವಿ ಕೊರೆದು, ವಿದ್ಯುತ್ ಯಂತ್ರ ಅಳವಡಿಸಿ ೧೫೦೦ ಗ್ಯಾಲನ್ ಕುಡಿಯುವ ನೀರು ಪೂರೈಕೆ ಮಾಡಿದೆ.

ಬಂಗಾರಪೇಟೆ ತಾಲೂಕು ಪೊಟ್ಟಪಲ್ಲಿ ಗ್ರಾಮದಲ್ಲಿ ೬೦ ಎಕರೆ ೦೪ ಗುಂಟೆ ವಿಸ್ತೀರ್ಣದಲ್ಲಿ "ರಾಜೀವ್ ಗಾಂಧಿ ವಸತಿ ಬಡಾವಣೆ" ಅಭಿವೃದ್ಧಿಪಡಿಸಿ, ಒಟ್ಟು ೫೯೩ ನಿವೇಶನಗಳನ್ನು ನಿರ್ಮಿಸಿದೆ. ಇವರಲ್ಲಿ ೨೧೦ ನಿವೇಶನಗಳನ್ನು ಹಂಚಿಕೆ ಮಾಡಿದೆ. ಉಳಿದ ನಿವೇಶನಗಳನ್ನು ಹಂಚುವ ಪ್ರಕ್ರಿಯೆ ನಡೆದಿದೆ. ಬಂಗಾರಪೇಟೆಯ ಪುರಸಭೆ ವ್ಯಾಪ್ತಿಯ ಕಾರಹಳ್ಳಿ ಗ್ರಾಮದಲ್ಲಿ ಒಟ್ಟು ೧೦೩ ಎಕರೆ ೪ ಗುಂಟೆ ಜಮೀನಿನಲ್ಲಿ ೧,೧೯೬ ನಿವೇಶನಗಳನ್ನು ವಿಂಗಡಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಲು ಯೋಜನೆಯೊಂದನ್ನು ತಯಾರಿಸಿದ್ದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ ೧೯೮೭ ಪ್ರಕರಣ ೧೭ರಂತೆ ಕ್ರಮಕೈಗೊಳ್ಳಲಾಗಿದೆ.

ಪ್ರಾಧಿಕಾರವು ಜನರ ಸೌಕರ್ಯಕ್ಕಾಗಿ ೯ ಸೋಡಿಯಂ ದೀಪಗಳನ್ನು ಹಾಗೂ ೧೧೦ ಟ್ರೀಗಾರ್ಡ್ (ಗಿಡ ರಕ್ಷಕ) ಗಳನ್ನು ಒದಗಿಸಿದೆ. ೫ ಬಸ್ ಸೆಲ್ಟರ್‌ಗಳನ್ನು ನಿರ್ಮಾಣ ಮಾಡಿದೆ. ೩೬ ನಿವೇಶನಗಳನ್ನು ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಅರ್ಧಬೆಲೆಗೆ ಹಂಚುವ ಉದ್ದೇಶ ಪ್ರಾಧಿಕಾರಕ್ಕಿದೆ.

ಪ್ರಾಧಿಕಾರದ ೨೦೦೦-೨೦೦೧, ೨೦೦೧-೦೨ ಹಾಗೂ ೨೦೦೨-೦೩ನೇ ಸಾಲಿನ ಆದಾಯ, ವೆಚ್ಚದ ತಃಖ್ತೆಯನ್ನು ಈ ಕೆಳಗೆ ಕೊಟ್ಟಿದೆ. :

ರೂ.ಗಳಲ್ಲಿ

| ವರ್ಷ | ಆದಾಯ | ವೆಚ್ಚ |
|---|---|---|
| ೨೦೦೦-೦೧ | ೧೧,೬೮,೮೩೭ | ೧೮,೫೭,೨೦೦ |
| ೨೦೦೧-೦೨ | ೧೬,೦೪,೨೮೫ | ೯೮,೩೩,೨೩ |
| ೨೦೦೨-೦೩ | ೫೯,೫೯,೯೦೫ | ೪೪,೩೪,೩೨೦ |

ಪಿ.ಎಚ್.ಇ. ವಿಭಾಗ ನಿರ್ವಹಿಸುತ್ತಿದ್ದ ಈ ಕಾರ್ಯವನ್ನು ಜಿಲ್ಲಾ ಪಂಚಾಯತ್ ಕೋಲಾರ ತಾಂತ್ರಿಕ ವಿಭಾಗ ನಿರ್ವಹಿಸುತ್ತಿದೆ. ಜಿಲ್ಲೆಯನ್ನು ಎರಡು ವಿಭಾಗಗಳಾಗಿ ವಿಂಗಡಿಸಿ ಕೋಲಾರ ಮತ್ತು ಚಿಕ್ಕಬಳ್ಳಾಪುರ (೧೯೮೭) ತಾಂತ್ರಿಕ ವಿಭಾಗಗಳೆಂದು ಪುನರ್ ವಿಂಗಡಿಸಲಾಗಿದೆ. ಕೋಲಾರ ವಿಭಾಗವು ಜಿಲ್ಲಾ ಕೇಂದ್ರದ ವಿಭಾಗವಾಗಿದ್ದು ಇದರ ಕಾರ್ಯವ್ಯಾಪ್ತಿಯಲ್ಲಿ ಐದು ಉಪವಿಭಾಗಗಳು ಅಂದರೆ ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲೂಕುಗಳು ಸೇರಿವೆ. ಪ್ರತಿಯೊಂದು ತಾಲೂಕನ್ನು ಒಂದು ಉಪವಿಭಾಗವಾಗಿ ವಿಭಜಿಸಲಾಗಿದೆ. ಚಿಕ್ಕಬಳ್ಳಾಪುರ ವಿಭಾಗವು ಚಿಕ್ಕಬಳ್ಳಾಪುರ ಶಿಡ್ಲಘಟ್ಟ, ಗೌರಿಬಿದನೂರು, ಚಿಂತಾಮಣಿ, ಬಾಗೇಪಲ್ಲಿ ಹಾಗೂ ಗುಡಿಬಂಡೆ ಈ ಆರು ತಾಲೂಕುಗಳನ್ನು ಒಳಗೊಂಡಿದೆ. ಇವುಗಳನ್ನು ಉಪವಿಭಾಗಗಳು ಎಂದು ಕರೆಯಲಾಗಿದೆ.

ಕೋಲಾರ ವಿಭಾಗವು ಕುಡಿಯುವ ನೀರಿನ ಕಾರ್ಯಕ್ರಮದಡಿ ೨೦೦೨-೨೦೦೩ನೇ ಸಾಲಿನಲ್ಲಿ ೩೮೭.೪೮ ಲಕ್ಷ ರೂ. ಅನುದಾನದಲ್ಲಿ ೩೨೩.೦೧ ಲಕ್ಷ ರೂ. ವೆಚ್ಚ ಮಾಡಿದೆ. ಹೆಚ್ಚುವರಿ ಅನುದಾನವಾದ ೪೬.೫೦ ಲಕ್ಷ ರೂ.ಗಳು ಬಿಡುಗಡೆ ಆಗಿದ್ದು, ೨೦೦೩ ಮಾರ್ಚ್ ಅಂತ್ಯಕ್ಕೆ ೩೫.೪೦ ಲಕ್ಷ ರೂ. ವೆಚ್ಚವಾಗಿದೆ. ೧೯ ಕೊಳಾಯಿ ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ೪೧ ಕಿರು ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ೬೩ ಕೊಳವೆಬಾವಿಗಳನ್ನು ಕೊರೆಯಲಾಗಿದ್ದು, ಅವುಗಳಿಗೆ ಕೈಪಂಪುಗಳನ್ನು ಅಳವಡಿಸಲಾಗಿದೆ.

## ಕೋಷ್ಟಕ–೧೨.೫

ಕೋಲಾರ ನಗರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ ವ್ಯಾಪ್ತಿಯಲ್ಲಿ ಬರುವ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ನಗರಸಭೆ/ ಪುರಸಭೆ ಯೋಜನಾ ಪ್ರಾಧಿಕಾರಗಳ ಸಂಕ್ಷಿಪ್ತ ವಿವರ.

| ಕ್ರ. ಸಂ | ಸ್ಥಳೀಯ ಯೋಜನಾ ಪ್ರದೇಶದ ಹೆಸರು | ಸ್ಥಳೀಯ ಯೋಜನಾ ಪ್ರದೇಶದ ವಿವರ | ವಿಸ್ತೀರ್ಣ ಚ.ಕಿ.ಮೀ | ೧೯೯೧ರ ಜನ ಸಂಖ್ಯೆ | ೨೦೦೧ರ ಜನ ಸಂಖ್ಯೆ | ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿದ ದಿನಾಂಕ | ಕೆ.ಟಿ.ಸಿ.ಪಿ. ಕಾಯ್ದೆ ೧೯೬೧ರ ಪ್ರಕರಣ (೫) | ಕೆ.ಟಿ.ಸಿ.ಪಿ. ಕಾಯ್ದೆ ೧೯೬೧ರ ಪ್ರಕರಣ (೧೦) | ಸ್ಥೂಲಾಭಿವೃದ್ಧಿ ಯೋಜನೆ ತಾತ್ಕಾಲಿಕ ಅನುಮೋದನೆ | ಸ್ಥೂಲಾಭಿವೃದ್ಧಿ ಯೋಜನೆ ಅಂತಿಮ ಅನುಮೋದನೆ | ವ್ಯಾಪಕಾಭಿವೃದ್ಧಿ ಯೋಜನೆ ತಾತ್ಕಾಲಿಕ ಅನುಮೋದನೆ | ವ್ಯಾಪಕಾಭಿವೃದ್ಧಿ ಯೋಜನೆ ಅಂತಿಮ ಅನುಮೋದನೆ |
|---|---|---|---|---|---|---|---|---|---|---|---|---|
| ೧ | **ಕೋಲಾರ** | ನಗರಾಭಿವೃದ್ಧಿ ಪ್ರಾಧಿಕಾರ | ೬೯.೯೫ | ೮೩೨೮೭ | ೧೧೩೨೯೯ | ೨೮-೦೭-೧೯೭೭ | – | – | – | ೦೨-೧೨-೮೫ | ೨೮-೦೪-೯೨ | ೦೭-೦೩-೯೭ |
| ೨ | **ಕೆ.ಜಿ.ಎಫ್.** | ನಗರಾಭಿವೃದ್ಧಿ ಪ್ರಾಧಿಕಾರ | ೨೬.೦೦ | ೧೫೬೭೪೬ | ೧೫೬೯೬೧ | ೩೦-೦೭-೧೯೭೩ | – | – | – | ೧೪-೦೭-೮೨ | ೧೬-೦೨-೯೨ | ೦೨-೧೧-೯೬ |
| ೩ | **ಚಿಂತಾಮಣಿ** | ನಗರ ಯೋಜನಾ ಪ್ರಾಧಿಕಾರ | ೧೬.೯೮ | ೫೦೩೯೪ | ೬೫೪೫೬ | ೦೨-೦೩-೧೯೯೩ | – | – | ೨೪-೧೧-೯೭ | ೨೨-೦೭-೦೦ | – | – |
| ೪. | **ಚಿಕ್ಕಬಳ್ಳಾಪುರ** | ನಗರ ಸಭೆ ಮತ್ತು ಯೋಜನಾ ಪ್ರಾಧಿಕಾರ | ೮.೫೦ | ೪೭೨೨೧ | ೫೪೯೩೮ | ೦೨-೦೯-೧೯೯೭ | – | ೨೮-೦೮-೯೭ | ೨೮-೦೧-೯೮ | – | – | – |
| ೫ | **ಮುಳಬಾಗಿಲು** | ಪುರಸಭೆ ಮತ್ತು ಯೋಜನಾ ಪ್ರಾಧಿಕಾರ | ೮.೫೦ | ೩೫೫೧೯ | ೪೪೦೩೧ | ೦೨-೦೯-೧೯೯೭ | ೧೩-೦೩-೯೭ | ೦೨-೧೦-೯೭ | – | – | – | – |
| ೬ | **ಶಿಡ್ಲಘಟ್ಟ** | ಪುರಸಭೆ ಮತ್ತು ಯೋಜನಾ ಪ್ರಾಧಿಕಾರ | ೨.೦೩ | ೩೫೧೭೭ | ೪೧೧೦೫ | ೨೭-೦೫-೧೯೯೮ | – | ೨೨-೦೨-೦೧ | – | – | – | – |

ಮೂಲ: ಕೋಲಾರ ನಗರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗ್ರಾಮೀಣ ನೀರು ಸರಬರಾಜು

ಚಿಕ್ಕಬಳ್ಳಾಪುರ ವಿಭಾಗವು ೨೦೦೨–೨೦೦೩ರಲ್ಲಿ ಕುಡಿಯುವ ನೀರಿನ ಕಾರ್ಯಕ್ರಮಕ್ಕೆ ೨೯೬.೬೦ಲಕ್ಷ ರೂ. ಅನುದಾನ ಪಡೆದಿದ್ದು ಸದರಿ ಸಾಲಿನಲ್ಲಿ ೩೩೪.೩೭ ಲಕ್ಷ ರೂ. ವೆಚ್ಚ ಮಾಡಿದೆ. ಈ ಸಾಲಿನಲ್ಲಿ ೨೧ ಕೊಳಾಯಿನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ೪೩ ಕಿರು ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಿದೆ ಹಾಗೂ ೮೭ ಕೊಳವೆ ಬಾವಿಗಳನ್ನು ಕೊರೆದು ಕೈಪಂಪುಗಳನ್ನು ಜೋಡಿಸಿದೆ. ವಿಶೇಷ ಅನುದಾನದಡಿ ೧೪೫ ಕೊಳವೆಬಾವಿಗಳನ್ನು ಕೊರೆಯಲಾಗಿದೆ. ಇದಲ್ಲದೆ ಬಾಗೇಪಲ್ಲಿ ತಾಲೂಕಿನಲ್ಲಿ ೧೩ ಡಿಪ್ಲೋರೈಡೇಶನ್ ಘಟಕಗಳನ್ನು ಅಳವಡಿಸಿ ಶುದ್ಧ ಕುಡಿಯುವ ನೀರನ್ನು ೧೩ ಗ್ರಾಮಗಳಿಗೆ ಸರಬರಾಜು ಮಾಡಲಾಗಿದೆ. ೨೦೦೩–೦೪ರಲ್ಲಿ ಜಿಲ್ಲೆಯಲ್ಲಿ ೧೮ ಡಿಪ್ಲೋರೈಡೇಶನ್ ಘಟಕಗಳನ್ನು ಹಾಗೂ ಗೃಹಪಯೋಗಿ ಡಿ.ಎಫ್ ಫಿಲ್ಟರ್‌ನ್ನು ಅಳವಡಿಸಲಾಗಿದೆ.

**೨೦೦೩–೦೪ನೇ ಸಾಲಿನ ತಾಲೂಕುವಾರು ನೀರು ಸರಬರಾಜು ಯೋಜನೆಗಳ ವಿವರವನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ**

ಸಂಖ್ಯೆಗಳಲ್ಲಿ

| ಕ್ರ. ಸಂ. | ತಾಲೂಕು | ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ | ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆ | ಒಟ್ಟು |
|---|---|---|---|---|
| ೧ | ೨ | ೩ | ೪ | ೫ |
| ೧ | ಕೋಲಾರ | ೧ | ೪ | ೫ |
| ೨ | ಮಾಲೂರು | ೭ | ೮ | ೧೫ |
| ೩ | ಬಂಗಾರಪೇಟೆ | ೨ | ೨ | ೪ |
| ೪ | ಮುಳಬಾಗಿಲು | ೧ | ೨ | ೩ |
| ೫ | ಶ್ರೀನಿವಾಸಪುರ | ೧ | ೧ | ೨ |
| ೬ | ಚಿಕ್ಕಬಳ್ಳಾಪುರ | ೩ | ೪ | ೭ |
| ೭ | ಚಿಂತಾಮಣಿ | ೧ | ೨ | ೩ |
| ೮ | ಗೌರಿಬಿದನೂರು | ೩ | ೨ | ೫ |
| ೯ | ಬಾಗೇಪಲ್ಲಿ | ೧ | ೧ | ೨ |
| ೧೦ | ಗುಡಿಬಂಡೆ | ೧೨ | – | ೧೨ |
| ೧೧ | ಶಿಡ್ಲಘಟ್ಟ | ೧ | – | ೧ |
| | ಒಟ್ಟು | ೩೩ | ೨೬ | ೫೯ |

ಮೂಲ: ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗ, ಕೋಲಾರ, ಚಿಕ್ಕಬಳ್ಳಾಪುರ.

**ಪೂರ್ಣಗೊಂಡ ಕಿರು ನೀರು ಸರಬರಾಜು ಯೋಜನೆಗಳು**

ಸಂಖ್ಯೆಗಳಲ್ಲಿ

| ಕ್ರ.ಸಂ. | ತಾಲೂಕು | ರಾಜ್ಯ ಸಾಮಾನ್ಯ | ರಾಜ್ಯ ವಿಶೇಷ ಘಟಕ ಯೋಜನೆ | ಕೇಂದ್ರ ಸಾಮಾನ್ಯ | ಕೇಂದ್ರ ವಿಶೇಷ ಘಟಕ ಯೋಜನೆ | ಒಟ್ಟು |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ೧ | ಕೋಲಾರ | ೧ | ೦ | ೩ | ೩ | ೭ |
| ೨ | ಮಾಲೂರು | ೨ | ೦ | ೬ | ೧ | ೯ |
| ೩ | ಬಂಗಾರಪೇಟೆ | ೩ | ೨ | ೬ | ೧ | ೧೨ |
| ೪ | ಮುಳಬಾಗಿಲು | ೮ | ೨ | ೫ | ೧ | ೧೬ |
| ೫ | ಶ್ರೀನಿವಾಸಪುರ | ೧ | ೪ | ೬ | ೩ | ೧೪ |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ೬ | ಚಿಕ್ಕಬಳ್ಳಾಪುರ | ೨ | ೦ | ೪ | ೫ | ೧೧ |
| ೭ | ಚಿಂತಾಮಣಿ | ೦ | ೩ | ೪ | ೮ | ೧೫ |
| ೮ | ಗೌರಿಬಿದನೂರು | ೨ | ೪ | ೧೦ | ೫ | ೨೧ |
| ೯ | ಬಾಗೇಪಲ್ಲಿ | ೨ | ೦ | ೬ | ೬ | ೧೪ |
| ೧೦ | ಗುಡಿಬಂಡೆ | ೨ | ೦ | ೪ | ೦ | ೬ |
| ೧೧ | ಶಿಡ್ಲಘಟ್ಟ | – | – | – | – | – |
| | ಒಟ್ಟು | ೨೩ | ೧೯ | ೫೪ | ೩೨ | ೧೨೪ |

ಮೂಲ: ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗ, ಕೋಲಾರ, ಚಿಕ್ಕಬಳ್ಳಾಪುರ.

**ಪ್ರಸ್ತುತ ಆಳವಡಿಸಿದ ರಾಜ್ಯ ಹಾಗೂ ಕೇಂದ್ರಗಳ ವಿವಿಧ ಯೋಜನೆಯಡಿ ಕೊರೆಯಲಾದ ಹಾಗೂ ಕೈಪಂಪು ಕೊಳವೆಬಾವಿಗಳ ವಿವರ ಈ ಕೆಳಗಿನ ಪಟ್ಟಿಯಡಿ ನೀಡಿದೆ.**

ಸಂಖ್ಯೆಗಳಲ್ಲಿ

| ಕ್ರ.ಸಂ. | ತಾಲೂಕು | ರಾಜ್ಯ ಸಾಮಾನ್ಯ | ರಾಜ್ಯ ವಿಶೇಷ ಘಟಕ ಯೋಜನೆ | ಕೇಂದ್ರ ಸಾಮಾನ್ಯ | ಕೇಂದ್ರ ವಿಶೇಷ ಘಟಕ ಯೋಜನೆ | ಒಟ್ಟು |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ೧ | ಕೋಲಾರ | ೦೨ | ೦೩ | ೦೭ | ೦೩ | ೧೫ |
| ೨ | ಮಾಲೂರು | ೦೧ | ೦೨ | ೦೬ | ೦೨ | ೧೧ |
| ೩ | ಬಂಗಾರಪೇಟೆ | ೦೨ | ೦೩ | ೦೭ | ೦೩ | ೧೫ |
| ೪ | ಮುಳಬಾಗಿಲು | ೦೧ | ೦೩ | ೦೬ | ೦೨ | ೧೨ |
| ೫ | ಶ್ರೀನಿವಾಸಪುರ | ೦೧ | ೦೨ | ೦೫ | ೦೨ | ೧೦ |
| ೬ | ಚಿಕ್ಕಬಳ್ಳಾಪುರ | ೦೩ | ೦೨ | ೧೦ | ೦೩ | ೧೮ |
| ೭ | ಚಿಂತಾಮಣಿ | ೦೨ | – | ೦೮ | ೦೨ | ೧೨ |
| ೮ | ಗೌರಿಬಿದನೂರು | ೦೧ | ೦೫ | ೦೫ | ೦೪ | ೧೫ |
| ೯ | ಬಾಗೇಪಲ್ಲಿ | ೦೪ | ೦೨ | ೦೬ | ೦೧ | ೧೩ |
| ೧೦ | ಗುಡಿಬಂಡೆ | – | ೦೨ | ೦೫ | ೦೧ | ೦೮ |
| ೧೧ | ಶಿಡ್ಲಘಟ್ಟ | ೦೧ | ೦೩ | ೧೨ | ೫ | ೨೧ |
| | ಒಟ್ಟು | ೧೮ | ೨೭ | ೭೭ | ೨೮ | ೧೫೦ |

ಮೂಲ: ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗ, ಕೋಲಾರ, ಚಿಕ್ಕಬಳ್ಳಾಪುರ.

ರಾಜ್ಯ ವಲಯ ವಿಶೇಷ ಅನುದಾನ (ಎಂ.ಎನ್.ಪಿ) ದಡಿ ೧೪೫ ಕೊಳವೆಬಾವಿಗಳನ್ನು ಕೊರೆಯಲಾಗಿದ್ದು ಅವುಗಳ ತಾಲೂಕುವಾರು ಸಂಖ್ಯೆ ಹೀಗಿದೆ. ಚಿಕ್ಕಬಳ್ಳಾಪುರ–೨೭, ಚಿಂತಾಮಣಿ ೨೭, ಗೌರಿಬಿದನೂರು ೧೯, ಬಾಗೇಪಲ್ಲಿ ೨೭, ಗುಡಿಬಂಡೆ ೨೦ ಹಾಗೂ ಶಿಡ್ಲಘಟ್ಟ ೩೫.

**ಡ್ಯಾನಿಡಾ ನೆರವಿನ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ:–**

ಭಾರತ ಮತ್ತು ಡೆನ್ಮಾರ್ಕ್ ಸರ್ಕಾರಗಳು ೧೯೭೮ರಲ್ಲಿ ಕರ್ನಾಟಕ ರಾಜ್ಯದ ಮೂರು ಜಿಲ್ಲೆಗಳಾದ ಕೋಲಾರ, ಚಿತ್ರದುರ್ಗ ಮತ್ತು ವಿಜಾಪುರಗಳಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು

ಒಪ್ಪಂದ ಮಾಡಿಕೊಂಡು, ಅದರಂತೆ ಮೊದಲನೆಯ ಹಂತದ ಯೋಜನೆಗಳು ಮುಗಿದಿವೆ. ಕೋಲಾರ ಜಿಲ್ಲೆಯಲ್ಲಿ ಈ ಹಂತದಲ್ಲಿ ೩೪೮ ಯೋಜನೆಗಳು ಅನುಷ್ಠಾನಗೊಂಡಿವೆ. ಜಿಲ್ಲೆಯ ೩೦ ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಒಳಪಡುವ ೩೫೮ ಗ್ರಾಮಗಳು ಈ ಸೌಲಭ್ಯ ಪಡೆದಿವೆ. ಪ್ರಸಕ್ತ ಮೂರುವರೆ ವರ್ಷದ ಎರಡನೆ ಹಂತದ ಯೋಜನೆಗಳು ಡಿಸೆಂಬರ್ ೨೦೦೨ಕ್ಕೆ ಪ್ರಾರಂಭಗೊಂಡಿವೆ. ಹಾಗೂ ಪ್ರಗತಿ ಹಂತದಲ್ಲಿವೆ.

ಡ್ಯಾನಿಡಾ ಕುಡಿಯುವ ನೀರು ಹಾಗೂ ನೈರ್ಮಲ್ಯ ಯೋಜನೆಯ ನೀತಿಯಲ್ಲಿ ಗ್ರಾಮಪಂಚಾಯಿತಿ ಸದಸ್ಯರುಗಳಿಗೆ ಪ್ರೇರಣೆ ನೀಡಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಮಪಂಚಾಯಿತಿಗಳು ಕುಡಿಯುವ ನೀರು ಹಾಗೂ ನೈರ್ಮಲ್ಯ ಯೋಜನೆಗಳನ್ನು ಜನರ ಸಹಕಾರದೊಂದಿಗೆ ಅನುಷ್ಠಾನಗೊಳಿಸುವುದು ಹಾಗೂ ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿವೆ.

## ನಗರ ಸ್ಥಳೀಯ ಸಂಸ್ಥೆಗಳು

ರಾಜ್ಯದಲ್ಲಿನ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಗೆ ಏಕರೂಪದ ಆಯಾಮ ನೀಡುವ ಉದ್ದೇಶ ಹೊಂದಿದ ಸರ್ಕಾರವು ಭಾರತದ ಸಂವಿಧಾನಕ್ಕೆ ೭೪ನೇಯ ತಿದ್ದುಪಡಿ ತರುವ ಮೂಲಕ ಜನತೆಗೆ ಸ್ವಯಮಾಡಳಿತ ಅಧಿಕಾರವನ್ನು ಅತ್ಯಂತ ಕೆಳಹಂತದಿಂದಲೇ ನೀಡುವುದು ಪ್ರಾಥಮಿಕ ಗುರಿಯಾಗಿದೆ. ೧೯೬೪ರ ಕರ್ನಾಟಕ ಪುರಸಭೆಗಳ ಅಧಿನಿಯಮಕ್ಕೆ ೧೯೯೪ರ ೩೬ನೇ ಪರಿಚ್ಛೇದದಲ್ಲಿ ಸೂಕ್ತ ತಿದ್ದುಪಡಿ ತಂದಿದ್ದು, ಅದಕ್ಕನುಗುಣವಾಗಿ ಪುರಸಭೆ/ ನಗರಸಭೆಗಳ ರಚನೆ ಹಾಗೂ ಸ್ವರೂಪವು ಈ ಕೆಳಗಿನಂತಿದೆ.

ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳನ್ನು ದೊಡ್ಡ ನಗರ ಪ್ರದೇಶಗಳು, ಸಣ್ಣ ನಗರ ಪ್ರದೇಶ (ಪಟ್ಟಣ ಪ್ರದೇಶ)ಗಳು ಹಾಗೂ ಪರಿವರ್ತನಾಶೀಲ ಪ್ರದೇಶಗಳಾಗಿ ನಿರ್ದಿಷ್ಟಪಡಿಸಿದೆ. ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ ೧೯೭೬ರ ಪರಿಚ್ಛೇದ (೩)ರ ಅನ್ವಯ ಒಂದು ನಗರ ಸ್ಥಳೀಯ ಪ್ರದೇಶವನ್ನು ಈ ಕೆಳಕಂಡ ಅಂಶಗಳ ಆಧಾರದ ಮೇಲೆ ನಿರ್ದಿಷ್ಟಪಡಿಸಲಾಗುತ್ತದೆ.

೧) ಆ ಪ್ರದೇಶದ ಜನಸಂಖ್ಯೆ ಮೂರು ಲಕ್ಷಕ್ಕಿಂತ ಕಡಿಮೆ ಇರಬಾರದು.

೨) ಆ ಪ್ರದೇಶದ ಜನಸಾಂದ್ರತೆ ಒಂದು ಚದರ ಕಿ.ಮೀ.ಗೆ ೩೦೦೦ಕ್ಕಿಂತ ಕಡಿಮೆ ಇರಬಾರದು.

೩) ಅಂತಹ ಪ್ರದೇಶಗಳಲ್ಲಿ ಸ್ಥಳೀಯ ಆಡಳಿತಕ್ಕಾಗಿ ಹಿಂದಿನ ಜನಗಣತಿ ವರ್ಷದಲ್ಲಿ ದೊರಕಿದ್ದ ರಾಜಸ್ವವು ಆರು ಕೋಟಿ ರೂಪಾಯಿಗಳಿಗಿಂತ– ಕಡಿಮೆಯಾಗಿರಬಾರದು ಅಥವಾ ತಲಾಆದಾಯ ರೂ ೨೦೦ ರೂ ಕ್ಕಿಂತ ಕಡಿಮೆ ಆಗಿರಕೂಡದು.

ಈ ಎರಡು ಅಂಶಗಳಲ್ಲಿ ಯಾವುದು ಹೆಚ್ಚಾಗಿರುವುದೋ ಅದನ್ನು ಪರಿಗಣಿಸತಕ್ಕದ್ದು.

೪) ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡಾ ಪ್ರಯಾಣ ಕನಿಷ್ಠ ೫೦ಕ್ಕಿಂತ ಹೆಚ್ಚಾಗಿರಬೇಕು.

ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರದೊಂದಿಗೆ, ಸಮಾಲೋಚಿಸಿದ ತರುವಾಯ ಅಂತಹ ಪ್ರದೇಶವನ್ನು ನಗರಪಾಲಿಕೆ ಎಂದು ಕರೆಯಲಾಗುತ್ತದೆ.

ಮೇಲಿನಂತೆಯೇ ಯಾವುದೇ ಪ್ರದೇಶವನ್ನು ಸಣ್ಣ ನಗರ ಪ್ರದೇಶವೆಂದು ನಿರ್ದಿಷ್ಟಪಡಿಸುವಲ್ಲಿ ಅಲ್ಲಿನ

೧) ಜನಸಂಖ್ಯೆ ೨೦,೦೦೦ ಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಮೂರು ಲಕ್ಷವನ್ನು ಮೀರತಕ್ಕದ್ದಲ್ಲ.

೨) ಜನಸಾಂದ್ರತೆ ಒಂದು ಚದರ ಕಿ.ಮೀಗೆ ೧,೫೦೦ ಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

೩) ಹಿಂದಿನ ಜನಗಣತಿ ವರ್ಷದಲ್ಲಿ ತೆರಿಗೆ ಹಾಗೂ ತೆರಿಗೆಯೇತರ ಮೂಲಗಳಿಂದ ಸ್ಥಳೀಯ ಆಡಳಿತಕ್ಕೆ ಲಭ್ಯವಾದ ರಾಜಸ್ವವು ಒಂಭತ್ತು ಲಕ್ಷಕ್ಕಿಂತ ಕಡಿಮೆ ಇರಕೂಡದು, ಅಥವಾ ಆ ಪ್ರದೇಶದ ವಾರ್ಷಿಕ ತಲಾಆದಾಯವು ರೂ. ೪೫ ಕ್ಕಿಂತ ಕಡಿಮೆ ಇರಕೂಡದು. ಈ ಮೊತ್ತಗಳಲ್ಲಿ ಯಾವುದು ಗರಿಷ್ಠವೋ ಆ ಮೊತ್ತವನ್ನು ಪರಿಗಣಿಸಬೇಕು.

೪) ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗ ಅವಕಾಶಗಳು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ೫೦ ಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಅಂತಹ ಪ್ರದೇಶ ಸಣ್ಣ ನಗರ ಪ್ರದೇಶವೆಂದು ಘೋಷಿಸಲ್ಪಡುತ್ತದೆ.

ಅಂತಹ ಸಣ್ಣ ನಗರ ಪ್ರದೇಶದ ಜನಸಂಖ್ಯೆ ೫೦,೦೦೦ ಕ್ಕಿಂತ ಹೆಚ್ಚಾಗಿದ್ದಲ್ಲಿ ಅದನ್ನು ನಗರಸಭೆ ಎಂದೂ, ಜನಸಂಖ್ಯೆ ೨೦,೦೦೦ ಕ್ಕಿಂತ ಹೆಚ್ಚಾಗಿದ್ದು, ೫೦,೦೦೦ ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಸಣ್ಣ ನಗರ ಪ್ರದೇಶವನ್ನು ಪುರಸಭೆಗಳೆಂದು ಘೋಷಿಸುತ್ತಾರೆ.

ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪ರ ಪರಿಚ್ಛೇದ ೩೪೯ ರಲ್ಲಿ ಪರಿವರ್ತನಾಶೀಲ ಪ್ರದೇಶವನ್ನು ನಿರ್ದಿಷ್ಟಪಡಿಸುವ ಬಗ್ಗೆ ತಿಳಿಸಲಾಗಿದೆ. ಇದರ ಅನ್ವಯ ಯಾವುದೇ ಪ್ರದೇಶದ ಜನಸಂಖ್ಯೆಯು ೧೦,೦೦೦ ಕ್ಕಿಂತ ಹೆಚ್ಚಾಗಿದ್ದು, ೨೦,೦೦೦ ಕ್ಕಿಂತ ಕಡಿಮೆ ಇದ್ದಲ್ಲಿ ಹಾಗೂ ಆ ಪ್ರದೇಶದ ಜನಸಾಂದ್ರತೆಯು ಚದರ ಕಿ.ಮೀಗೆ ४೦೦ಕ್ಕಿಂತ ಕಡಿಮೆ ಇಲ್ಲದಿದ್ದಲ್ಲಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಪ್ರಮಾಣ ಶೇ. ೫೦ಕ್ಕಿಂತ ಕಡಿಮೆ ಇಲ್ಲದಿದ್ದಲ್ಲಿ ಅಂತಹ ಪ್ರದೇಶವನ್ನು ಪರಿವರ್ತನಾಶೀಲ ಪ್ರದೇಶವೆಂದೂ, ಇಂತಹ ಪರಿವರ್ತನಾಶೀಲ ಪ್ರದೇಶವನ್ನು ಪಟ್ಟಣಪಂಚಾಯಿತಿ ಎಂದೂ ಘೋಷಿಸುತ್ತಾರೆ. ಒಂದು ವೇಳೆ ಇಂತಹ ಪರಿವರ್ತನಾಶೀಲ ಪ್ರದೇಶವು ತಾಲೂಕು ಕೇಂದ್ರವಾಗಿದ್ದಲ್ಲಿ ಆ ಪ್ರದೇಶದ ಜನಸಂಖ್ಯೆ ೧೦,೦೦೦ಕ್ಕಿಂತ ಕಡಿಮೆ ಇದ್ದರೂ ಸಹ ಅಂತಹ ಪ್ರದೇಶವನ್ನು ಪರಿವರ್ತನಾಶೀಲ ಪ್ರದೇಶವೆಂದು ಪರಿಗಣಿಸಬಹುದಾಗಿದೆ.

**ಪೌರಸಭೆಗಳಿಗೆ ಚುನಾವಣೆ**

ಪೌರಸಭೆಗಳ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಚುನಾವಣಾ ಆಯುಕ್ತರು ಸಂವಿಧಾನದ ಪರಿಚ್ಛೇದ ೨೪೩ರ ಅನ್ವಯ ಪೌರಸಭೆಗಳಿಗೆ ಚುನಾವಣಾ ನಡೆಸುತ್ತಾರೆ. ರಾಜ್ಯ ಚುನಾವಣಾ ಆಯೋಗವು ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಒಳಪಡುವ ಎಲ್ಲ ಮತದಾರರ ಪಟ್ಟಿ ತಯಾರಿಸಿ, ಚುನಾವಣೆ ನಡೆಸುವ ಬಗ್ಗೆ ಕ್ರಮ ಕೈಗೊಳ್ಳುವುದು. ಚುನಾವಣೆಯನ್ನು ಪುರಸಭೆ/ ನಗರಸಭೆ ಅವಧಿ ಮುಕ್ತಾಯಗೊಳ್ಳುವ ಮುನ್ನವೇ ಪೂರ್ಣಗೊಳಿಸಬೇಕಾಗುತ್ತದೆ. ಪುರಸಭೆಯ ಅಧಿಕಾರಾವಧಿಯು ಅದರ ಪ್ರಥಮ ಸಭೆಗೆ ಗೊತ್ತುಪಡಿಸಿದ ದಿನಾಂಕದಿಂದ ಐದು ವರ್ಷಗಳ ಕಾಲ ಇರುತ್ತದೆ.

**ಸ್ಥಾನಗಳ ಮೀಸಲಾತಿ**

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಸ್ಥಾನಗಳ ಮೀಸಲಾತಿಗಾಗಿ ಅಧಿನಿಯಮಗಳ ಉಪಬಂಧಗಳನ್ನು ಕಲ್ಪಿಸಲಾಗಿದೆ. ಮಹಿಳೆಯರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಮೀಸಲಿಟ್ಟ ಸ್ಥಾನಗಳನ್ನು ಪುರಸಭೆಯ ವಿವಿಧ ವಾರ್ಡುಗಳಲ್ಲಿ ಸರದಿ ಪ್ರಕಾರ ಹಂಚಿಕೆ ಮಾಡಬಹುದಾಗಿದೆ. ಹೀಗೆ ವರ್ಗಾನುಸಾರ ಆಯ್ಕೆಗೊಂಡ ಜನರಿಗೆ ಪುರಸಭೆಗಳಲ್ಲಿನ ಅಧ್ಯಕ್ಷ ಹುದ್ದೆಗಳ ಮೀಸಲಾತಿಯನ್ನು ಸಹ ಮಾಡಲು ಉಪಬಂಧಗಳನ್ನು ಕಲ್ಪಿಸಲಾಗಿದೆ.

**ಪೌರಾಡಳಿತ ನಿರ್ದೇಶನಾಲಯ**

ಪೌರಾಡಳಿತ ನಿರ್ದೇಶನಾಯಲವು ೧೯೮೪ ರಿಂದ ಅಸ್ತಿತ್ವದಲ್ಲಿದೆ. ಇದು ಹಲವಾರು ಸ್ಥಳೀಯ ಸಂಸ್ಥೆಗಳನ್ನು ತನ್ನ ಅಧಿಕಾರ ವ್ಯಾಪ್ತಿಗೆ ಒಳಪಡಿಸಿಕೊಂಡಿದೆ. ಸಂವಿಧಾನದ ೭೪ನೇ ತಿದ್ದುಪಡಿಯನ್ವಯ ನಗರ/ ಪಟ್ಟಣದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಅಧಿಸೂಚಿತ ಪ್ರದೇಶ ಸಮಿತಿಗಳು ಎಂಬ ನಾಲ್ಕು ವಿಧದ ಸಭೆಯ ವ್ಯವಸ್ಥೆ ಕಲ್ಪಿಸಿದೆ. ನಗರ/ ಪಟ್ಟಣದ ಜನಸಂಖ್ಯಾ ಪ್ರಮಾಣಕ್ಕನುಸಾರವಾಗಿ ನಗರ ಸ್ಥಳೀಯ ಸಂಸ್ಥೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧) ಅಧಿಸೂಚಿತ ಪ್ರದೇಶ ಸಮಿತಿಗಳನ್ನು ವಿಶೇಷವಾಗಿ ಪ್ರಾಜೆಕ್ಟ್ ಪ್ರದೇಶ, ಕೈಗಾರಿಕಾ ಪ್ರದೇಶ, ಪ್ರವಾಸಿ ತಾಣ ಇರುವ ಪ್ರದೇಶಗಳಲ್ಲಿನ ಆಡಳಿತ ನೋಡಿಕೊಳ್ಳಲು ರಚಿಸಲಾಗಿದೆ.

೨) ೧೦,೦೦೦ ಹಾಗೂ ೨೫,೦೦೦ ದವರೆಗೆ ಜನಸಂಖ್ಯೆ ಹೊಂದಿರುವ ಪ್ರದೇಶಗಳನ್ನು ಪಟ್ಟಣ ಪುರಸಭೆಗಳು ಎಂದು ವರ್ಗೀಕರಿಸಿದೆ

೩) ೨೫,೦೦೦ ರಿಂದ ೫೦,೦೦೦ದ ಒಳಗೆ ಜನಸಂಖ್ಯೆ ಹೊಂದಿರುವ ಪ್ರದೇಶವನ್ನು ಪುರಸಭೆ ಎಂದೂ

೪) ೫೦,೦೦೦ ರಿಂದ ೩,೦೦,೦೦೦ರ ವರೆಗಿನ ಜನಸಂಖ್ಯೆ ಹೊಂದಿರುವ ಪ್ರದೇಶವನ್ನು ನಗರಸಭೆ ಕೌನ್ಸಿಲ್ ಎಂದು ವರ್ಗೀಕರಿಸಲಾಗಿದೆ.

**ಪುರಸಭೆಯ ಕರ್ತವ್ಯಗಳು:**

ಸಾಮಾನ್ಯವಾಗಿ ಸ್ಥಳೀಯ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ. ಅವು ಕ್ರಮವಾಗಿ,

೧) ರಸ್ತೆ ಹಾಗೂ ಬೀದಿ ದೀಪಗಳ ನಿರ್ವಹಣೆ, ನೈರ್ಮಲ್ಯ, ನೀರಿನ ಸರಬರಾಜು ಹಾಗೂ ನಿರ್ವಹಣೆ, ಜನನ, ಮರಣ ನೋಂದಣಿ, ಸಾಂಕ್ರಾಮಿಕಗಳಿಂದ ರಕ್ಷಣೆ ಹಾಗೂ ಕಟ್ಟಡಗಳನ್ನು ಸಕ್ರಮಗೊಳಿಸುವುದು.

೨) ಬಡಾವಣೆ ನಿರ್ಮಾಣ, ಉದ್ಯಾನ, ಶಾಲೆ, ಗ್ರಂಥಾಲಯ ಮತ್ತು ಆಸ್ಪತ್ರೆಗಳೇ ಮೊದಲಾದವುಗಳ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ವಿವೇಚನಾಧಿಕಾರಕ್ಕೊಳಪಟ್ಟ ಕಾರ್ಯಕ್ರಮ ಹಮ್ಮಿಕೊಳ್ಳುವುದು ಪ್ರಮುಖ ಕರ್ತವ್ಯಗಳೆನಿಸಿವೆ.

**ಪುರಸಭೆಗಳ ಸಂಪನ್ಮೂಲಗಳು**

ಪುರಸಭೆಗಳ ಅಧಿನಿಯಮ ವಿಭಾಗ ೯೪ರ ಅನ್ವಯ ಪುರಸಭೆಗಳ ನಿಧಿ ಮೂಲವನ್ನು ಈ ಕೆಳಗಿನ ವಿಧಾನದಿಂದ ಕ್ರೋಢಿಕರಿಸಿಕೊಳ್ಳಬಹುದಾಗಿದೆ.

೧) ಕಟ್ಟಡ ಹಾಗೂ ಭೂ ತೆರಿಗೆ,

೨) ಮೋಟಾರು ವಾಹನ ಹೊರತುಪಡಿಸಿ ಇತರ ವಾಹನಗಳ ಮೇಲೆ ಹಾಕಲಾಗುವ ತೆರಿಗೆ,

೩) ನೀರು ಸರಬರಾಜು ಮೇಲಿನ ತೆರಿಗೆ,

೪) ಬೀದಿ ದೀಪಗಳ ಮೇಲಿನ ತೆರಿಗೆ,

೫) ಚರಾಸ್ತಿ ನೋಂದಣಿ, ಬದಲಾವಣೆಗಳ ಮೇಲಿನ ಹೆಚ್ಚುವರಿ ಸಂಪನ್ಮೂಲ ತೆರಿಗೆ ಮತ್ತು

೬) ಜಾಹಿರಾತಿನ ಮೇಲಿನ ತೆರಿಗೆಗಳಾಗಿವೆ.

**ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದ ಅನುದಾನ**

ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಸ್ವಾಯತ್ತತೆಯನ್ನು ನೀಡಿ ಅವುಗಳ ಆಡಳಿತ ಜಾಲವನ್ನು ಹೆಚ್ಚು ಸುಭದ್ರಗೊಳಿಸಿ ಅವು ಪರಿಣಾಮಕಾರಿಯಾಗಿ ಕೆಲಸ ಮಾಡಲಿ ಎಂಬ ಉದ್ದೇಶದಿಂದ, ಸಂವಿಧಾನಕ್ಕೆ ೭೩ನೇಯ ಹಾಗೂ ೭೪ನೇ ತಿದ್ದುಪಡಿ ತರಲಾಗಿದೆ. ಈ ಮೊದಲಿದ್ದ ಸ್ಥಳೀಯ ಸಂಸ್ಥೆಗಳ ಆದಾಯ ಮೂಲಗಳಾದ ಆಕ್ಟ್ರಾಯ್, ಮನರಂಜನಾ ತೆರಿಗೆ, ಮೋಟಾರುವಾಹನ ತೆರಿಗೆ ಮೊದಲಾದ ಕೆಲವು ತೆರಿಗೆಗಳನ್ನು ಸರ್ಕಾರ ರದ್ದುಪಡಿಸಿದೆ. ಈ ಮೇಲಿನ ಆದಾಯ ಮೂಲಗಳ ಕೊರತೆಯನ್ನು

ಸರಿಪಡಿಸಲು ಸರ್ಕಾರ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಿಗೆ ಅನುದಾನ ನೀಡುವ ಬಗ್ಗೆ ಶಿಫಾರಸ್ಸು ಮಾಡಲು, ರಾಜ್ಯ ಹಣಕಾಸು ಆಯೋಗವನ್ನು ರಚಿಸಿತು. ರಾಜ್ಯ ಹಣಕಾಸು ಆಯೋಗದ ಅನುದಾನ ಸೂತ್ರವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ೧೯೯೭–೯೮ನೇ ಸಾಲಿನಿಂದ ಜಾರಿಗೆ ತಂದಿತು. ರಾಜ್ಯ ಸರ್ಕಾರವು ಆಯೋಗ ಶಿಫಾರಸ್ಸು ಮಾಡಿರುವಂತೆ ಸರ್ಕಾರಕ್ಕೆ ಪ್ರಾಪ್ತವಾಗುವ ಸಾಲೇತರ ಒಟ್ಟು ಆದಾಯದ (ಅಂದರೆ ನಾನ್ ಲೋನ್ ಓನ್ ಗ್ರಾಸ್ ರೆವಿನ್ಯೂ ರಸಿಟ್ಸ್) ಸ್ವೀಕೃತಿಯಲ್ಲಿ ಶೇಕಡಾ ೩೬ರಷ್ಟನ್ನು ನಗರ ಹಾಗೂ ಗ್ರಾಮೀಣ ಸಂಸ್ಥೆಗಳಿಗೆ ಹಂಚಿಕೆಯಾಗಬೇಕಿದ್ದು, ಅದರಲ್ಲಿ ಶೇಕಡಾ ೧೫ರಷ್ಟು ನಗರ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಉಳಿದದ್ದನ್ನು ಪಂಚಾಯಿತ್ ರಾಜ್ ಸಂಸ್ಥೆಗಳಿಗೆ ನೀಡಲಾಗುತ್ತದೆ. ಸ್ಥಳೀಯ ಸಂಸ್ಥೆಗಳ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಒಟ್ಟು ಹಂಚಿಕೆಯಲ್ಲಿ (೧೯೯೭–೯೮) ಶೇಕಡಾ ೧೧ ರಿಂದ ಪ್ರಾರಂಭಿಸಿ ಪ್ರಸ್ತುತ (೨೦೦೩–೦೪) ಶೇಕಡಾ ೧೫ ರಷ್ಟನ್ನು ಹೆಚ್ಚಿಸಲಾಗಿದೆ.

ಡಾ॥ ತಿಮ್ಮಯ್ಯನವರ ನೇತೃತ್ವದ ಹಣಕಾಸು ಆಯೋಗದ ವರದಿಯನ್ನು ಸರ್ಕಾರ ಅಂಗೀಕರಿಸಿದ್ದರೂ ಆಯೋಗವು ಶಿಫಾರಸ್ಸು ಮಾಡಿದ ಸಿದ್ಧಾಂತದ ಮೇರೆಗೆ ಮತ್ತು ನಿಗದಿಪಡಿಸಲಾದ ಪ್ರಮಾಣದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ. ಅನುದಾನದ ಬಹುಭಾಗ ಸಿಬ್ಬಂದಿ ವೇತನ ಪಾವತಿಗೆ ವಿನಿಯೋಗವಾಗುತ್ತಿದ್ದು, ಸಾರ್ವಜನಿಕ ಸೌಲಭ್ಯಗಳಾದ ಬೀದಿ/ದೀಪ, ನೀರು ಸರಬರಾಜು, ವಿದ್ಯುತ್ ಶುಲ್ಕ, ಒಳಚರಂಡಿ ವ್ಯವಸ್ಥೆ ಮುಂತಾದ ಸೇವೆಗಳಿಗೆ ಅನುದಾನದ ಮೊತ್ತದ ಕೊರತೆಯಾಗುತ್ತದೆ. ಹೀಗಾಗಿ ಆಯೋಗವು ಶಿಫಾರಸ್ಸು ಮಾಡಿರುವ ಪ್ರಮಾಣಕ್ಕನುಗುಣವಾಗಿ ಸರ್ಕಾರವು ಸೂಕ್ಷ್ಮವಾಗಿ ಅಂಟಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗವು ೧೯೯೭–೯೮ನೇ ಸಾಲಿನಿಂದ ೨೦೦೧–೦೨ನೇ ಸಾಲಿನವರೆಗೆ ಬಿಡುಗಡೆ ಮಾಡಿದ ಅನುದಾನದ ವಿವರವನ್ನು ಕೋಷ್ಟಕ ೧೨.೬ರಲ್ಲಿ ಕೊಟ್ಟಿದೆ.

ಕೋಷ್ಟಕ ೧೨.೬: ಕೋಲಾರ ಜಿಲ್ಲೆಗೆ ೧೯೯೭–೯೮ನೇ ಸಾಲಿನಿಂದ ೨೦೦೧–೦೨ನೇ ಸಾಲಿನವರೆಗೆ ರಾಜ್ಯ ಹಣಕಾಸು ಆಯೋಗವು ಬಿಡುಗಡೆ ಮಾಡಿದ ಅನುದಾನದ ವಿವರ

(ರೂ.ಗಳಲ್ಲಿ)

| ಕ್ರ.ಸಂ. | ಸ್ಥಳೀಯ ಸಂಸ್ಥೆಗಳು | ವರ್ಷ | | | |
|---|---|---|---|---|---|
| | | ೧೯೯೮–೯೯ | ೧೯೯೯–೨೦೦೦ | ೨೦೦೦–೨೦೦೧ | ೨೦೦೧–೨೦೦೨ |
| ೧ | ೨ | ೩ | ೪ | ೫ | ೬ |
| ೧ | ಬಾಗೇಪಲ್ಲಿ | ೨೦,೮೫,೦೦೦ | ೯,೮೪,೦೦೦ | ೯,೮೪,೦೦೦ | ೯,೮೪,೦೦೦ |
| ೨ | ಬಂಗಾರಪೇಟೆ | ೩೩,೬೭,೦೦೦ | ೩೩,೯೫,೮೯೭ | ೫೨,೭೭,೫೮೮ | ೪೫,೫೨,೫೮೮ |
| ೩ | ಚಿಕ್ಕಬಳ್ಳಾಪುರ | ೬೪,೪೦,೦೦೦ | ೭೯,೮೨,೬೧೫ | ೯೧,೯೮,೨೦೫ | ೧,೦೩,೬೦,೦೦೦ |
| ೪ | ಚಿಂತಾಮಣಿ | ೫೯,೮೮,೦೦೦ | ೮೧,೯೮,೭೮೪ | ೧,೪೨,೫೮,೧೩೬ | ೧,೨೪,೪೫,೬೩೬ |
| ೫ | ಗೌರಿಬಿದನೂರು | ೩೩,೪೧,೦೦೦ | ೩೯,೮೫,೬೬೨ | ೫೫,೬೮,೬೪೮ | ೪೮,೪೩,೬೪೮ |
| ೬ | ಗುಡಿಬಂಡೆ | ೨೭,೮೨,೦೦೦ | ೧೪,೨೩,೭೩೪ | ೨೨,೯೮,೯೩೬ | ೨೨,೩೮,೯೩೬ |
| ೭ | ಕೋಲಾರ | ೧,೦೦,೦೪,೦೦೦ | ೧,೧೩,೮೨,೦೦೦ | ೨,೨೬,೭೫,೦೦೦ | ೧,೯೮,೬೨,೫೦೦ |
| ೮ | ಮಾಲೂರು | ೨೬,೮೧,೦೦೦ | ೩೦,೧೬,೭೫೮ | ೪೩,೫೭,೦೩೨ | ೩೬,೩೨,೮೨೦ |
| ೯ | ಮುಳಬಾಗಿಲು | ೩೪,೯೯,೦೦೦ | ೩೯,೧೨,೭೬೧ | ೬೦,೮೫,೦೪೪ | ೭೩,೬೦,೦೪೪ |
| ೧೦ | ರಾಬರ್ಟ್‌ಸನ್ ಪೇಟೆ | ೯೧,೭೦,೦೦೦ | ೧,೩೦,೧೨,೫೦೦ | ೧,೭೨,೦೫,೦೦೦ | ೧,೫೮,೯೨,೫೦೦ |
| ೧೧ | ಶ್ರೀನಿವಾಸಪುರ | ೩೫,೬೯,೦೦೦ | ೨೨,೫೫,೩೪೦ | ೧೯,೧೮,೦೮೬ | ೬೫,೪೫,೧೩೮ |
| ೧೨ | ಶಿಡ್ಲಘಟ್ಟ | ೩೭,೯೯,೦೦೦ | ೩೬,೦೮,೦೪೬ | ೪೪,೫೪,೧೮೪ | ೩೪,೧೦,೮೧೨ |
| | ಒಟ್ಟು: | ೫,೬೬,೭೫,೦೦೦ | ೬,೩೧,೫೮,೯೭೭ | ೯,೪೨,೭೯,೮೫೯ | ೯,೨೧,೨೮,೬೨೨ |

ಮೂಲ: ನಗರಾಭಿವೃದ್ಧಿ ಇಲಾಖೆ

ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ೨೦೦೩–೦೪ರಲ್ಲಿ ಆಗಸ್ಟ್–೨೦೦೩ರವರೆಗೆ ಕೋಲಾರ ಜಿಲ್ಲೆಯಲ್ಲಿ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದ್ದಿತು.

ರೂ.ಗಳಲ್ಲಿ

| ಕ್ರ.ಸಂ. | ಸ್ಥಳೀಯ ಸಂಸ್ಥೆ ಹೆಸರು | ವರ್ಷ ೨೦೦೩–೦೪ |
|---|---|---|
| ೧. | ಬಂಗಾರಪೇಟೆ | ೩,೩೬,೯೮೭ |
| ೨. | ಗೌರಿಬಿದನೂರು | ೨,೮೫,೨೯೨ |
| ೩. | ಮಾಲೂರು | ೩,೧೧,೩೨೨ |
| ೪. | ಮುಳಬಾಗಿಲು | ೩,೭೨,೭೪೪ |
| ೫. | ಶಿಡ್ಲಘಟ್ಟ | ೩,೫೫,೦೦೦ |

ಪ್ರಸ್ತುತ ಎರಡನೆ ರಾಜ್ಯ ಹಣಕಾಸು ಆಯೋಗ ರಚನೆಯಾಗಿದ್ದು, ಹೊಸ ಶಿಫಾರಸ್ಸುಗಳಿಗೆ ಅನುಗುಣವಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುವುದು.

### ನಗರಸಭೆ–ಕೋಲಾರ

ಕೋಲಾರ ಮುನಿಸಿಪಲ್ ಕಮಿಟಿಯು ಪ್ರಥಮವಾಗಿ ೧೮೬೪–೬೫ರಲ್ಲಿ ರೂಪಗೊಂಡಿತು. ಆಗ ಇದು ಸಣ್ಣ ಪಟ್ಟಣವಾಗಿದ್ದ ಕಾರಣ, ಮುನಿಸಿಪಲ್ ನಿಯಮಾವಳಿಯನ್ನು ಕಂದಾಯ ಇಲಾಖೆ ಜಾರಿಗೊಳಿಸುತ್ತಿತ್ತು. ಮುನಿಸಿಪಲ್ ಕಮಿಟಿಯ ಅಧಿಕಾರೇತರ ಸದಸ್ಯರು ಪ್ರಭಾವಶಾಲಿ ಹಾಗೂ ಪ್ರತಿಷ್ಠಿತ ವ್ಯಕ್ತಿಗಳಾಗಿರುತ್ತಿದ್ದರು. ಸರ್ಕಾರದ ವಿವಿಧ ಇಲಾಖೆಗಳಿಂದ ನೇಮಕಗೊಂಡ (ಒಟ್ಟು ಸದಸ್ಯರಲ್ಲಿ ೧/೩ ಭಾಗದಷ್ಟು ಸದಸ್ಯರು) ಆರು ಜನ ಸದಸ್ಯರಿದ್ದರು. ನಂತರದಲ್ಲಿ ಇದು ೧೯೨೬ರಲ್ಲಿ ಪುರಸಭೆಯಾಗಿ, ೧೯೮೬ರಲ್ಲಿ ನಗರಸಭೆಯಾಗಿ ಪರಿವರ್ತನೆಯಾಯಿತು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ ೨೦೦೦–೦೧ರಲ್ಲಿ ಚುನಾವಣೆಗಳು ನಡೆದು ೩೧ ಜನ ಸದಸ್ಯರು ಆಯ್ಕೆಗೊಂಡರು ಹಾಗೂ ಐದು ಜನ ನಾಮ ನಿರ್ದೇಶಿತ ಸದಸ್ಯರು ಇದ್ದು, ಚುನಾಯಿತ ಸದಸ್ಯರ ಸಂಖ್ಯೆ ಮೀಸಲು ಸ್ಥಾನದೊಂದಿಗೆ ಈ ಕೆಳಗಿನಂತಿದೆ.

| ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | | ಸಾಮಾನ್ಯ ವರ್ಗ | | ಒಟ್ಟು |
|---|---|---|---|---|---|---|
| ಗಂ. | ಹೆ. | ಗಂ. | ಹೆ. | ಗಂ. | ಹೆ. | |
| ೨ | ೧ | ೬ | ೪ | ೧೨ | ೬ | ೩೧ |

ಕೋಲಾರ ನಗರ ಜನಸಂಖ್ಯೆ (೨೦೦೧ ಗಣತಿ) ೧,೧೩,೯೦೭ ಇದ್ದು ಪ್ರಸ್ತುತ ನಗರಸಭೆಯ ವ್ಯಾಪ್ತಿಯು ೧೨ ಚ.ಕಿ.ಮೀ. ಇದೆ. ಇದನ್ನು ೩೧ ವಾರ್ಡ್‌ಗಳಾಗಿ ವಿಭಜಿಸಲಾಗಿದೆ. ನಗರದಲ್ಲಿ ೧೧,೮೭೮ ಮನೆಗಳು ಹಾಗೂ ೩,೬೭೬ ನಿವೇಶನಗಳು ಇವೆ. ನಗರಸಭೆ ವ್ಯಾಪ್ತಿಗೆ ಈ ಕೆಳಗಿನ ಕಂದಾಯ ಗ್ರಾಮಗಳು (ಆವರಣದಲ್ಲಿ ಮನೆಗಳ ಸಂಖ್ಯೆ ಕೊಟ್ಟಿದೆ) ಸೇರಿವೆ. ೧) ಅರವಳ್ಳಿ (೭೩೯), ೨) ಹಾರೋಹಳ್ಳಿ (೧,೩೦೫), ವಿನೋಬ ನಗರ (೪೧೭), ಟಮಕ (೨೩೯), ಕೀಲುಕೋಟೆ (೧೫೮), ವಿಭೂತಿಪುರ (೩೨೧), ತಿಪ್ಪಸಂದ್ರ (೧೫೮೨), ಪೇಟೆ ಚಾಮನಹಳ್ಳಿ ೧,೮೮೩ ಹಾಗೂ ಕೋಗಿಲಹಳ್ಳಿ (೩೦೯).

**ನೀರು ಸರಬರಾಜು:** ಹಿಂದಿನಿಂದಲೂ ಕೆರೆ ಮತ್ತು ಬಾವಿಗಳಿಂದ ನಗರಕ್ಕೆ ನೀರು ಸರಬರಾಜುಗೊಳ್ಳುತ್ತಿತ್ತು. ಈ ಮೊದಲು ಸುರಕ್ಷಿತ ನೀರು ಸರಬರಾಜಿನ ಹೊಣೆಯನ್ನು ಲೋಕೋಪಯೋಗಿ ಇಲಾಖೆಯು ವಹಿಸಿಕೊಂಡಿತ್ತು. ಪ್ರಸ್ತುತ, ನಗರಸಭೆಯಿಂದ ನೀರು ಸರಬರಾಜುಗೊಳ್ಳುತ್ತಿದೆ. ಒಟ್ಟು ಏಳು ಓವರ್ ಹೆಡ್ ಟ್ಯಾಂಕುಗಳು ನಿರ್ಮಾಣಗೊಂಡಿದ್ದು, ಒಂದು ಲಕ್ಷ ಗ್ಯಾಲನ್ ಸಾಮರ್ಥ್ಯದ ನಾಲ್ಕು ಟ್ಯಾಂಕ್‌ಗಳು ಹಾಗೂ ೩೦,೦೦೦ ಗ್ಯಾಲನ್, ೭೫,೦೦೦೦ ಗ್ಯಾಲನ್, ಎರಡು ಲಕ್ಷ ಗ್ಯಾಲನ್‌ದ ಒಂದೊಂದು ಟ್ಯಾಂಕ್‌ಗಳು ಒಟ್ಟು ಏಳು ಇರುತ್ತವೆ. ೨೦೦೨–೦೩ರಲ್ಲಿ ನಗರದಲ್ಲಿ, ೬೦೦ ಸಾರ್ವಜನಿಕ ನಲ್ಲಿಗಳು ೫,೫೬೫

ಗೃಹಬಳಕೆ ಹಾಗೂ ೫೮೮ ಗೃಹೇತರ ಬಳಕೆ ಸಂಪರ್ಕಗಳು ಇದ್ದವು. ನಗರಸಭೆಯು ದಿನನಿತ್ಯ ೮೦ ಲಕ್ಷ ಲೀಟರ್ ನೀರು ಸರಬರಾಜು ಮಾಡುತ್ತಿದೆ. ೨೦೦೨-೦೩ ನೇ ಸಾಲಿನಲ್ಲಿ ಪ್ರತಿದಿನ ತಲಾವಾರು ನೀರು ಸರಬರಾಜು ಪ್ರಮಾಣ ೧೧೦ ಲೀಟರ್ ಆಗಿದೆ. ರೂ. ೧೮,೬೭,೨೩೭ಗಳು ನೀರಿನ ತೆರಿಗೆ ರೂಪದಲ್ಲಿ ಹಣಸಂದಾಯವಾಗಿದ್ದು ಅದೇ ಸಾಲಿನಲ್ಲಿ ನೀರು ಸರಬರಾಜಿಗಾಗಿ ಮಾಡಿದ ವೆಚ್ಚವು ರೂ. ೪೮,೪೯,೭೫೧ ಆಗಿರುತ್ತದೆ.

## ಜನಾರೋಗ್ಯ ಮತ್ತು ನೈರ್ಮಲ್ಯ

ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮುಂಜಾಗ್ರತಾ ಕ್ರಮವಾಗಿ ಕ್ರಿಮಿನಾಶಕಗಳ ಸಿಂಪಡಣೆ ಹಾಗೂ ಜನನ ಮರಣ ದಾಖಲಾತಿಗಳ ಉಸ್ತುವಾರಿಯನ್ನು ಹಿರಿಯ ಆರೋಗ್ಯ ನಿರೀಕ್ಷಕರು ನೋಡಿಕೊಳ್ಳುತ್ತಾರೆ.

ನಗರದಲ್ಲಿ ೩.೫ ಕಿ.ಮೀ. ಒಳಚರಂಡಿ ಹಾಗೂ ೬೫ ಚ.ಕಿ.ಮೀ. ತೆರೆದ ಚರಂಡಿಗಳು ಇವೆ. ಒಳಚರಂಡಿಗೆ ಆದ ವೆಚ್ಚವು ೨೦೦೦-೦೧, ೨೦೦೧-೨೦೦೨ ಹಾಗೂ ೨೦೦೨-೦೩ ವರ್ಷಗಳಲ್ಲಿ ಕ್ರಮವಾಗಿ ರೂ.೨,೪೪,೫೬೭, ರೂ.೧,೬೫,೯೩೨ ಹಾಗೂ ರೂ ೨,೭೨,೦೭೭ ಆಗಿರುತ್ತದೆ. ನಗರಸಭೆಯು ನಗರದ ನೈರ್ಮಲ್ಯ ಕಾಪಾಡಲು ೭೬ ಜನ ಕಾಯಂ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಂಡಿರುತ್ತದೆ.

## ಇತರ ಸೌಲಭ್ಯಗಳು

ನಗರಸಭೆಯು ಏಳು ಉದ್ಯಾನವನಗಳನ್ನು ಹಾಗೂ ಎರಡು ಆಟದ ಮೈದಾನಗಳನ್ನು ನಿರ್ಮಿಸಿ ಅವುಗಳ ನಿರ್ವಹಣೆ ನೋಡಿಕೊಳ್ಳುತ್ತಿದೆ. ೨೦೦೦-೦೧, ೨೦೦೧-೦೨ ಹಾಗೂ ೨೦೦೨-೦೩ರಲ್ಲಿ ಇದಕ್ಕಾಗಿ ನಗರಸಭೆಯು ಮಾಡಿದ ವೆಚ್ಚವು ಕ್ರಮವಾಗಿ ರೂ.೬,೦೧,೦೫೩, ರೂ. ೧,೪೦,೭೬೫ ಹಾಗೂ ರೂ. ೧೧,೦೫,೬೮೮ ಗಳಾಗಿರುತ್ತದೆ. ನಗರಸಭೆಯ ಸುಪರ್ದಿಯಲ್ಲಿ ೫ ಕಿ.ಮೀ. ಸಿಮೆಂಟ್ ಕಾಂಕ್ರೀಟ್ ರಸ್ತೆ, ೨೦ ಕಿ.ಮೀ. ಮಣ್ಣು ರಸ್ತೆ, ೬೦ ಕಿ.ಮೀ ಡಾಂಬರ ರಸ್ತೆ, ೭೧ ಕಿ.ಮೀ ಜಲ್ಲಿ ಕಲ್ಲು ರಸ್ತೆ ಹೀಗೆ ಒಟ್ಟು ೧೫೬ ಕಿ.ಮೀ. ರಸ್ತೆ ಇದೆ. ಕರ್ನಾಟಕ ವಿದ್ಯುತ್ ಮಂಡಲಿ ವಿದ್ಯುತ್ ಒದಗಿಸುತ್ತಿದೆ. ನಗರವು ೨೦೦೧-೦೨ನೇ ಸಾಲಿನಲ್ಲಿ ಒಟ್ಟು ೩,೯೫೦ ಬೀದಿ ದೀಪಗಳನ್ನು ಹೊಂದಿತ್ತು.

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳ ಸಮಗ್ರ ಅಭಿವೃದ್ಧಿ ಯೋಜನೆ (ಐ.ಡಿ.ಎಸ್ಎಮ್‌ಟಿ) ೧೯೯೦-೯೧ರಲ್ಲಿ ಪ್ರಾರಂಭಗೊಂಡಿದ್ದು ಆ ವರ್ಷ ಬಿಡುಗಡೆ ಮಾಡಿದ ಹಣ ೩೬ ಲಕ್ಷ ರೂ.ಗಳಾಗಿದೆ. ನಂತರ ೧೯೯೫-೯೬ರಲ್ಲಿ ಬಿಡುಗಡೆಯಾದ ಹಣ ೫೬ ಲಕ್ಷ ರೂ.ಗಳಾಗಿದ್ದು ಯೋಜನೆಗೆ ಖರ್ಚು ಮಾಡಿದ ಒಟ್ಟು ಖರ್ಚು ೪೯ ಲಕ್ಷ ರೂ.ಗಳಾಗಿದೆ. ಸುವರ್ಣ ಜಯಂತಿ ರೋಜ್‌ಗಾರ್ ಯೋಜನೆ (ಎಸ್‌ಜೆಎಸ್‌ಆರ್‌ವೈ)ಯಡಿ ೨೦೦೨-೦೩ ರಲ್ಲಿ ಬಿಡುಗಡೆಯಾದ ಹಣ ರೂ.೬,೪೦,೪೨೫ ಹಾಗೂ ಮಾಡಿದ ಖರ್ಚು ರೂ. ೫,೫೦,೯೨೫ ಆಗಿದ್ದು, ಫಲಾನುಭವಿಗಳ ಸಂಖ್ಯೆ ೭೭ ಆಗಿದ್ದಿತು.

**ನಗರಸಭೆಯ ೨೦೦೨-೦೩ನೇ ಸಾಲಿನ ಶೇ.೧೮ರ ಯೋಜನೆಯ ಖರ್ಚಿನ ವಿವರಗಳು: ರೂ.ಗಳಲ್ಲಿ**

| ಕ್ರ.ಸಂ. | ಕಾಮಗಾರಿ ವಿವರ | ಖರ್ಚಾದ ಮೊತ್ತ |
|---|---|---|
| ೧ | ಹೊಸದಾಗಿ ಕಲ್ಲುಕಟ್ಟಡ ಚರಂಡಿ ನಿರ್ಮಾಣ ಮತ್ತು ರಿಪೇರಿ | ೪,೪೦,೧೩೮.೦೦ |
| ೨ | ಹಾಸುಗಲ್ಲು ಕಾಮಗಾರಿ | ೧,೯೭,೯೭೫.೦೦ |
| ೩ | ಅಂಬೇಡ್ಕರ್ ಜಯಂತಿ ವಂತಿಕೆ | ೧೦,೦೦೦.೦೦ |
| ೪ | ನೀರು ಸರಬರಾಜು ಪೈಪ್ ಲೈನ್ ಕಾಮಗಾರಿಗಳು | ೫೭,೧೬೭.೦೦ |
| ೫ | ದೀರ್ಘಕಾಲ ಕಾಯಿಲೆಯಿಂದ ನರಳುವವರಿಗೆ ಸಹಾಯ ಧನ | ೧೦,೦೦೦.೦೦ |
| ೬ | ಮನೆ ನಿರ್ಮಾಣಕ್ಕೆ ಸಹಾಯ ಧನ | ೪೫,೦೦೦.೦೦ |
| ೭ | ಕ್ರೀಡಾ ವಂತಿಕೆ | ೨,೫೦೦.೦೦ |
| | **ಒಟ್ಟು** | **೭,೬೨,೭೮೦.೦೦** |

**ನಗರ ಸಭೆಯ ಇತ್ತೀಚಿನ ನಾಲ್ಕು ವರ್ಷಗಳ ಆದಾಯ ವೆಚ್ಚಗಳ ತ:ಖ್ತೆ**

(ರೂ.ಗಳಲ್ಲಿ)

| ವಿವರಗಳು | ೧೯೯೯-೨೦೦೦ | ೨೦೦೦-೨೦೦೧ | ೨೦೦೦೧-೨೦೦೨ | ೨೦೦೨-೨೦೦೩ |
|---|---|---|---|---|
| ಜಮಾ (ಆದಾಯ) | ೧೯೩೩೮೦೦೦ | ೩೪೬೬೭೯೬ | ೨೧೩೪೧೨೧೧ | ೧೯೩೩೪೬೬೨ |
| ಖರ್ಚು | ೧೦೬೬೧೩೦೦೦ | ೩೧೦೪೬೮೪೧ | ೧೬೯೯೬೩೮೦ | ೧೮೦೪೯೬೫೮ |

ಸ್ವರ್ಣ ಜಯಂತಿ ರೋಜ್ಗಾರ್ ಯೋಜನೆ (ಎಸ್‌ಜೆಎಸ್‌ಆರ್‌ವೈ) ೧೯೯೭-೯೮ರಲ್ಲಿ ಪ್ರಾರಂಭಗೊಂಡಿದ್ದು ಇಲ್ಲಿಯವರೆಗೆ ಆದ ಪ್ರಗತಿ ಈ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ.

**ಕೋಷ್ಟಕ ೧೨.೬: ಸ್ವರ್ಣ ಜಯಂತಿ ರೋಜ್ಗಾರ್ ಯೋಜನೆಯಡಿ ೧೯೯೭-೯೮ರಿಂದ ಇಲ್ಲಿ ೨೦೦೨-೦೩ರವರೆಗೆ ಆದ ಪ್ರಗತಿ ವಿವರ.**

| ಕ್ರ.ಸಂ. | ಉಪ ಯೋಜನೆ ಹೆಸರು | ಬಿಡುಗಡೆ ಆದ ಹಣ ರೂ.ಗಳಲ್ಲಿ | ಖರ್ಚಾದ ರೂ.ಗಳಲ್ಲಿ ಹಣ | ಫಲಾನುಭವಿಗಳು ಕಾಮಗಾರಿಗಳು |
|---|---|---|---|---|
| ೧ | ಸಣ್ಣ ಉದ್ದಿಮೆ | ೩,೫೨,೯೨೯ | ೩,೨೮,೪೨೫ | ೭೭ |
| ೨ | ಡ್ವಾಕ್ವಾ (ಆಘಂಅಗಂ) | ೨,೮೭,೫೦೦ | ೨,೧೨,೫೦೦ | ೩ |
| ೩ | ತರಬೇತಿ ಕಾರ್ಯಕ್ರಮ | ೨,೫೫,೦೦೦ | ೨,೦೫,೦೦೦ | ೧೨ |
| ೪ | ನಗರ ಕೂಲಿ ಉದ್ಯೋಗ | ೧೨,೩೩,೭೨೮ | ೧೦,೦೦,೦೦೦ | ೨೧ ಕಾಮಗಾರಿಗಳು |
| ೫ | ಸಾಮಾಜಿಕ ಸೇವೆಗಳು | ೪,೦೫,೦೦೦ | ೪,೦೫,೦೦೦ | ಕಟ್ಟಡ ನಿರ್ಮಾಣ ಕಾಮಗಾರಿ |

ಮೂಲ: ಕೋಲಾರ ನಗರಸಭೆ

ಕಳೆದ ೨೦೦೦-೦೧, ೨೦೦೧-೨೦೦೨, ಹಾಗೂ ೨೦೦೨-೦೩ರಲ್ಲಿ ನಗರಸಭೆಯು ಬೀದಿ ದೀಪಗಳಿಗಾಗಿ ಮಾಡಿದ ವೆಚ್ಚವು ಕ್ರಮವಾಗಿ ರೂ.೩,೩೩,೭೧೧, ರೂ.೬,೮೦,೦೬೧ ಹಾಗೂ ರೂ.೧೪,೯೯,೮೭೮ ಆಗಿದೆ. ನಗರದಲ್ಲಿ ೧೨ ಕೊಳಚೆ ಪ್ರದೇಶಗಳಲ್ಲಿ ೩,೨೪೩ ಗುಡಿಸಲುಗಳು ಇದ್ದು, ಅಲ್ಲಿ ವಾಸಿಸುವರ ಸಂಖ್ಯೆ ೧೬,೯೯೦ ಆಗಿರುತ್ತದೆ. ಕೊಳಚೆ ಪ್ರದೇಶವು ೯೭.೩೬ ಎಕರೆ ವಿಸ್ತೀರ್ಣ ಹೊಂದಿದೆ.

**ಹಣಕಾಸು:** ಆಕ್ಟ್ರಾಯ್ ರದ್ದಾದ ನಂತರದಲ್ಲಿ ಇತ್ತೀಚೆಗೆ ೨೦೦೦-೦೧, ೨೦೦೧-೦೨ ಹಾಗೂ ೨೦೦೨-೦೩ರಲ್ಲಿ ನಗರಸಭೆಗೆ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಸರ್ಕಾರ ನೀಡಿದ ಎಸ್.ಎಫ್.ಸಿ ಅನುದಾನವು ಕ್ರಮವಾಗಿ ರೂ.೧,೮೨,೦೦,೦೦೦; ರೂ.೧,೬೫,೭೨,೭೩೮ ಹಾಗೂ ರೂ.೧,೨೦,೭೪೦,೧೮ ಆಗಿದೆ. ನಗರಸಭೆಯು ಪ್ರತೀವರ್ಷ ತನ್ನ ಮುಂಗಡಪತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ಮೀಸಲು ಇಟ್ಟ (ಶೇ.೧೮) ಹಣ ಹಾಗೂ ಖರ್ಚು ಮಾಡಿದ ಹಣವು ೨೦೦೦-೦೧, ೨೦೦೧-೦೨ ಹಾಗೂ ೨೦೦೨-೦೩ ವರ್ಷಗಳಲ್ಲಿ ಕಾಯ್ದಿರಿಸಿದ ಹಣವು ಕ್ರಮವಾಗಿ ರೂ. ೨,೫೦,೦೦೦, ರೂ.೨೫,೦೦,೦೦೦ ಹಾಗೂ ರೂ.೨೫,೦೦,೦೦೦ ಆಗಿದೆ. ಅದರಂತೆ ಖರ್ಚು ಮಾಡಲಾದ ಮೊತ್ತವು ಕ್ರಮವಾಗಿ ರೂ.೧,೬೦,೨೧೨, ರೂ.೩,೧೭,೭೨೮ ಹಾಗೂ ರೂ.೭,೬೨,೭೮೦ ಆಗಿದೆ. ನಗರಸಭೆ ೨೫೨ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದು ಅವುಗಳಿಂದ ೨೦೦೦-೦೧, ೨೦೦೧-೦೨ ಹಾಗೂ ೨೦೦೨-೦೩ ಈ ಮೂರು ವರ್ಷಗಳಲ್ಲಿ ದೊರೆತ ಆದಾಯವು ಕ್ರಮವಾಗಿ ರೂ.೨,೫೮,೧೪೦ ರೂ.೪,೮೧,೩೮೦ ಹಾಗೂ ರೂ.೯,೫೦,೩೯೨ ಆಗಿರುತ್ತದೆ.

ಜನಾರೋಗ್ಯ ಹಾಗೂ ನೈರ್ಮಲ್ಯಕ್ಕಾಗಿ ನಗರಸಭೆ ೨೦೦೧-೦೨ ಹಾಗೂ ೨೦೦೨-೦೩ರಲ್ಲಿ ಮಾಡಿದ ವೆಚ್ಚವು ರೂ.೧೫,೨೭,೦೭೮ ಹಾಗೂ ರೂ.೧೭,೯೮,೦೫೯ ಆಗಿದೆ. ಇದೇ ಅವಧಿಯಲ್ಲಿ ನೀರು ಸರುಬರಾಜಿಗಾಗಿ ನಗರಸಭೆ ಮಾಡಿದ ವೆಚ್ಚ ರೂ.೫೦,೩೪,೪೩೭ ಹಾಗೂ ರೂ.೪೮,೪೯,೭೫೧ ಆಗಿರುತ್ತದೆ. ಸಾಮಾನ್ಯ ಆಡಳಿತಕ್ಕಾಗಿ ನಗರಸಭೆ ಮಾಡಿದ ವೆಚ್ಚವು ಕ್ರಮವಾಗಿ ರೂ.೧,೬೫,೧೦,೦೦೦ ಹಾಗೂ ರೂ.೯೪,೩೫,೦೯೫ ಆಗಿರುತ್ತದೆ.

### ನಗರಸಭೆ, ರಾಬರ್ಟ್‌ಸನ್‌ಪೇಟೆ (ಕೆ.ಜಿ.ಎಫ್)

ರಾಬರ್ಟ್‌ಸನ್‌ಪೇಟೆಯು ಮೊಟ್ಟಮೊದಲ ಬಾರಿಗೆ ಪುರಸಭೆಯಾಗಿ ೧೯೬೪ರಲ್ಲಿ ಸ್ಥಾಪನೆಯಾಯಿತು. ಆಗಿನ ಪುರಸಭೆಯ ಸದಸ್ಯರ ಸಂಖ್ಯೆ ೨೩ ಆಗಿದ್ದಿತು. ೨೦೦೧ರ ಜನಗಣತಿಯಂತೆ ನಗರದ ಜನಸಂಖ್ಯೆಯು ೧,೫೭,೦೮೪ ಆಗಿದೆ. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ ೨೦೦೧-೨೦೦೨ರಲ್ಲಿ ಚುನಾವಣೆಗಳು ನಡೆದು ೩೫ ಸದಸ್ಯರು ಚುನಾಯಿತರಾದರು. ಸದಸ್ಯರ ಮೀಸಲಾತಿ ಹಂಚಿಕೆ – ಪರಿಶಿಷ್ಟ ಜಾತಿ ೧೬, ಸಾಮಾನ್ಯ-೧೯ ಒಟ್ಟು ೩೫ ಅದರಲ್ಲಿ ಗಂಡಸರು ೨೨ ಹಾಗೂ ಮಹಿಳೆಯರು ೧೩. ಪುರಸಭೆಯು ನಗರಸಭೆಯಾಗಿ ೧೯೮೩ರಲ್ಲಿ ಪರಿವರ್ತನೆಯಾಯಿತು. ನಗರಸಭೆಯ ವ್ಯಾಪ್ತಿಯು ೫೮.೧೨ ಚ.ಕಿಮೀ. ಇದ್ದು ಮನೆಗಳ ಸಂಖ್ಯೆ ೧೦,೪೦೮ ಆಗಿತ್ತು. ನಗರಸಭೆಯನ್ನು ೬ ವಿಭಾಗ (ಡಿವಿಜನ್)ಗಳಾಗಿ ವಿಂಗಡಿಸಿದ್ದು, ಒಟ್ಟು ೩೫ ವಾರ್ಡ್‌ಗಳು ಇವೆ. ೨೦೦೧-೨೦೦೨ರಲ್ಲಿದ್ದಂತೆ ತಲಾ ಸರಾಸರಿ ಕರ ಭಾರ ರೂ.೩೧೫ (ವಾರ್ಷಿಕ) ಆಗಿದ್ದಿತು. ರಾಬರ್ಟ್‌ಸನ್‌ಪೇಟೆಯು ಪ್ರಥಮವಾಗಿ ೧೯೯೯ರಲ್ಲಿ ನಗರಯೋಜನೆ ವ್ಯಾಪ್ತಿಗೆ ಒಳಪಟ್ಟಿತು.

**ನೀರು ಸರಬರಾಜು:** ಮೊದಲಿನಿಂದಲೂ ನಗರಕ್ಕೆ ಬೇತಮಂಗಲದ ಕೆರೆ ಹಾಗೂ ಇತರೆ ಕೊಳವೆಬಾವಿಗಳಿಂದ ನೀರು ಸರಬರಾಜು ಆಗುತ್ತಿದ್ದು ಈಗ ಕೆರೆ ಒಣಗಿ ಹೋದ ಕಾರಣ ಕೊಳವೆಬಾವಿಗಳಿಂದ ನೀರು ಪೂರೈಕೆ ಆಗುತ್ತಿದೆ. ಪ್ರಸ್ತುತ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ನೀರು ಪೂರೈಕೆ ಜವಾಬ್ದಾರಿ ಹೊಂದಿರುತ್ತವೆ. ನಗರಸಭೆಗೆ ನೀರು ಸರಬರಾಜು ಹೊಣೆ ಇರುವುದಿಲ್ಲ.

### ಜನಾರೋಗ್ಯ ಮತ್ತು ನೈರ್ಮಲ್ಯ

ನಗರಸಭೆಯು ಸಾಂಕ್ರಾಮಿಕರೋಗಗಳ ನಿಯಂತ್ರಣಕ್ಕೆ ಕ್ರಿಮಿನಾಶಕ ಸಿಂಪಡಣೆಯಂತಹ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಹಾಗೂ ಜನನ ಮರಣ ದಾಖಲಾತಿ ಮಾಡಿಕೊಳ್ಳಲು ಒಬ್ಬ ಹಿರಿಯ ಆರೋಗ್ಯ ನಿರೀಕ್ಷಕರನ್ನು ನೇಮಕ ಮಾಡಿಕೊಂಡಿರುತ್ತದೆ. ನಗರ ನೈರ್ಮಲ್ಯ ಕಾಪಾಡಲು ನಗರಸಭೆ ೧೧೮ ಜನ ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇದಲ್ಲದೆ ೧೦ ಜನ ಸ್ಯಾನಿಟರಿ ಮೇಸ್ತ್ರಿಗಳು ಸಹ ನೇಮಕಗೊಂಡಿರುವರು. ಬೆಂಕಿ ಆಕಸ್ಮಿಕಗಳನ್ನು ಎದುರಿಸಲು ಒಂದು ಅಗ್ನಿಶಾಮಕದಳದ ವ್ಯವಸ್ಥೆಯನ್ನು ಸಹ ನಗರಸಭೆ ಹೊಂದಿರುತ್ತದೆ.

### ಇತರ ಸೌಲಭ್ಯಗಳು

ಸಾರ್ವಜನಿಕ ಸೌಕರ್ಯಕ್ಕಾಗಿ ನಗರಸಭೆ ೧೯೬೪ರಿಂದ ೬ ಎಕರೆ ಪ್ರದೇಶದಲ್ಲಿ ಉದ್ಯಾನವನಗಳನ್ನು ನಿರ್ಮಿಸಿ, ನಿರ್ವಹಿಸುತ್ತಿವೆ. ನಗರಸಭೆಯ ಪ್ರದೇಶ ವ್ಯಾಪ್ತಿಗೆ ಒಳಪಡುವ ವಿವಿಧ ರಸ್ತೆಗಳು ಈ ರೀತಿ ಇವೆ. ಟಾರ್ ರಸ್ತೆಯ ೫೮ ಕಿ.ಮೀ. ಜಲ್ಲಿ ರಸ್ತೆ-೫೬ ಕಿ.ಮೀ. ಮತ್ತು ಸಿಮೆಂಟ್ ರಸ್ತೆ-೧೮.೬೦ ಕಿ.ಮೀ. ಇವೆ ೧೯೦೩ರಷ್ಟು ಹಿಂದೆಯೇ ನಗರಕ್ಕೆ ವಿದ್ಯುತ್ ದೀಪಗಳ ಸೌಲಭ್ಯ ದೊರಕಿದ್ದಿತು. ಪ್ರಸ್ತುತ (೨೦೦೧-೨೦೦೨ರಲ್ಲಿ) ೧,೫೦೫ ಸೋಡಿಯಂ ಹಾಗೂ ೨,೬೧೩ ಕೊಳವೆ ದೀಪಗಳನ್ನೊಳಗೊಂಡಂತೆ ಒಟ್ಟು ೪,೯೫೪ ವಿದ್ಯುದ್ದೀಪಗಳನ್ನು ಅಳವಡಿಸಲಾಗಿದೆ.

ನಗರಸಭೆ ವ್ಯಾಪ್ತಿಯಲ್ಲಿ ೩.೧೧ ಚದರ ಕಿ.ಮೀ. ವಿಸ್ತೀರ್ಣದ ಪ್ರದೇಶದಲ್ಲಿ ಒಟ್ಟು ೭ ಕೊಳಚೆ ಪ್ರದೇಶಗಳಿವೆ. ಇಲ್ಲಿ ವಾಸಿಸುವವರ ಸಂಖ್ಯೆಯು ೭,೧೦೦ ಆಗಿದೆ.

### ಹಣಕಾಸು

ಆಕ್ಟ್ರಾಯ್ ರದ್ದಾಗುವ ಮೊದಲ ಮೂರು ವರ್ಷಗಳಲ್ಲಿ ಅಂದರೆ ೧೯೭೬ರಿಂದ ೧೯೭೯ರವರೆಗೆ ನಗರಸಭೆಗೆ ದೊರೆತ ಆಕ್ಟ್ರಾಯ್ ಆದಾಯವು ಕ್ರಮವಾಗಿ ರೂ.೭,೭೧,೫೩೫ ರೂ.೮,೮೨,೯೩೭ ಹಾಗೂ ರೂ.೯,೯೪,೮೧೭ ಆಗಿದ್ದಿತು. ಇತ್ತೀಚೆಗೆ ಅಂದರೆ ೧೯೯೯-೨೦೦೦, ೨೦೦೦-೨೦೦೧ ಹಾಗೂ ೨೦೦೧-೨೦೦೨ರಲ್ಲಿ ಸರ್ಕಾರವು ಆಕ್ಟ್ರಾಯ್ ಬದಲಾಗಿ ನೀಡಿದ ಎಸ್‌ಎಫ್‌ಸಿ ಅನುದಾನವು ಕ್ರಮವಾಗಿ ರೂ.೧,೧೩,೩೫,೦೦೦, ರೂ.೧,೬೬,೧೭,೦೬೫ ಹಾಗೂ ರೂ.೧,೫೩,೮೦,೦೦೦

ಆಗಿರುತ್ತದೆ. ನಗರಸಭೆಯು ತನ್ನ ವಾರ್ಷಿಕ ಮುಂಗಡ ಪತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಗಾಗಿ ಮೀಸಲಿಟ್ಟ ಹಣವು ೧೯೯೯–೨೦೦೦, ೨೦೦೦–೦೧, ೨೦೦೧–೦೨ನೇ ಸಾಲಿನಲ್ಲಿ ಕ್ರಮವಾಗಿ ರೂ.೧೧,೦೬,೦೦೦, ರೂ.೧೪,೨೨,೦೦೦ ಹಾಗೂ ರೂ.೧೯,೭೦,೦೦೦ ಆಗಿದ್ದು, ಅದು ಖರ್ಚು ಮಾಡಿದ ಹಣವು ಕ್ರಮವಾಗಿ ರೂ.೬,೨೦,೩೮೭ ರೂ.೨,೨೦,೯೯೮ ಮತ್ತು ರೂ.೧೨,೫೨೫,೪೯ ಆಗಿರುತ್ತದೆ.

ನಗರಸಭೆ ಮಾರುಕಟ್ಟೆಗಳು, ವಸತಿಗೃಹಗಳು ಹಾಗೂ ದನದ ದೊಡ್ಡಿಗಳನ್ನು ೧೯೫೬–೫೭ರಲ್ಲಿ ನಿರ್ಮಿಸಿದೆ. ೧೯೬೩–೬೪ರಲ್ಲಿ ಪುರಸಭೆ ಕಾರ್ಯಾಲಯ ಕಟ್ಟಡ ನಿರ್ಮಾಣಗೊಂಡಿದೆ.

ನಗರಸಭೆಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಒಟ್ಟು ಮೊತ್ತದ ಶೇಕಡಾ ಪ್ರಮಾಣ (ಆದಾಯಕ್ಕನುಗುಣವಾಗಿ) ೧೯೯೮–೯೯ ಹಾಗೂ ೨೦೦೧–೨೦೦೨ ಸಾಲಿನಲ್ಲಿ ಈ ಕೆಳಗಿನಂತಿದೆ.

ಶೇಕಡಾ ಪ್ರಮಾಣ

| ಕ್ರ.ಸಂ. | ವಿವರ | ೧೯೯೮–೯೯ | ೨೦೦೧–೦೨ |
|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧೧ | ೧೫ |
| ೨ | ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ | ೧೬ | ೨೦ |
| ೩ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೩೪ | ೩೬ |
| ೪ | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೩ | ೪ |
| ೫ | ಸಿಬ್ಬಂದಿ ಪ್ರಭಾರ | ೩೪ | ೩೬ |
| ೬ | ಇತರೆ | ೧೨ | ೧೬ |

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಾಗಿ ರೂ.೨೬,೨೮,೫೦೦, ಮಾರುಕಟ್ಟೆ ಮತ್ತು ಮಂಡಿ ನಿರ್ಮಾಣಕ್ಕಾಗಿ ರೂ.೬,೫೦,೦೦೦ ಹಾಗೂ ದಿನವಹಿ ಮಾರುಕಟ್ಟೆ ನಿರ್ಮಾಣಕ್ಕಾಗಿ ರೂ.೫೮,೨೧,೫೦೦ಗಳ ಕಾಮಗಾರಿಗಳನ್ನು ಕೈಗೊಂಡಿದೆ.

**ಕೋಷ್ಟಕ ೧೨.೬(ಅ):**
**ಸ್ವರ್ಣಜಯಂತಿ ರೋಜ್ಗಾರ್ ಯೋಜನೆಯಡಿ ೧೯೯೯–೨೦೦೦ನೇ ಸಾಲಿನಲ್ಲಿ ಆದ ಪ್ರಗತಿ ವಿವರ**

| ಕ್ರ.ಸಂ. | ಉಪಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ ರೂ.ಗಳು | ಖರ್ಚಾದ ಅನುದಾನ ರೂ.ಗಳು | ಉಳಿಕೆ ರೂ. | ಫಲಾನುಭವಿಗಳ/ ಕಾಮಗಾರಿಗಳ ಸಂಖ್ಯೆ |
|---|---|---|---|---|---|
| ೧ | ಸಣ್ಣ ಉದ್ದಿಮೆ | ೧,೫೦,೦೦೦ | – | ೧,೫೦,೦೦೦ | ಈ ಸಾಲಿನಲ್ಲಿ ಬ್ಯಾಂಕ್‌ನಿಂದ ಫಲಾನುಭವಿಗಳಿಗೆ ಸಾಲದ ಸೌಲಭ್ಯ ಮಂಜೂರಾಗಿರುವುದಿಲ್ಲ |
| ೨ | ಡ್ವಾಕ್ರಾ | ೧,೨೫,೦೦೦ | – | ೧,೨೫,೦೦೦ | – ,, – |
| ೩ | ತರಬೇತಿ ಕಾರ್ಯಕ್ರಮ | ೨೫,೦೦೦ | ೨೫,೦೦೦ | – | ೧೨ |
| ೪ | ನಗರಕೂಲಿ ಉದ್ಯೋಗ | ೨,೫೦,೦೦೦ | ೨,೫೦,೦೦೦ | – | ೨ ಕಾಮಗಾರಿ |
| ೫ | ಸಾಮಾಜಿಕ ಸೇವೆಗಳು | ೮೦,೦೦೦ | ೮೦,೦೦೦ | – | ೪ ಚಟುವಟಿಕೆ ೨೦೦ ಜನ ಫಲಾನುಭವಿಗಳು |
| | ಒಟ್ಟು | ೬,೩೦,೦೦೦ | ೩,೫೫,೦೦೦ | ೨,೭೫,೦೦೦ | |

ಮೂಲ: ನಗರಸಭೆ ರಾಬರ್ಟ್‌ಸನ್ ಪೇಟೆ

**ಕೋಷ್ಕ ೧೨.೭ (ಬ):**
**ಸ್ವರ್ಣ ಜಯಂತಿ ರೋಜ್ಗಾರ್ ಯೋಜನೆಯಡಿ ೨೦೦೦–೨೦೦೧ನೇ ಸಾಲಿನಲ್ಲಿ ಆದ ಪ್ರಗತಿ ವಿವರ**

| ಕ್ರ.ಸಂ. | ಉಪಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ ರೂ.ಗಳು | ಖರ್ಚಾದ ಅನುದಾನ ರೂ.ಗಳು | ಉಳಿಕೆ ರೂ. | ಫಲಾನುಭವಿಗಳ/ ಕಾಮಗಾರಿಗಳ ಸಂಖ್ಯೆ |
|---|---|---|---|---|---|
| ೧ | ಸಣ್ಣ ಉದ್ದಿಮೆ | ೧,೧೨೫೦೦ | ೨೮,೦೫೦ | ೮೪,೪೫೦ | ೧೫ |
| ೨ | ಡ್ವಾಕ್ವಾ | – | – | – | – |
| ೩ | ತರಬೇತಿ ಕಾರ್ಯಕ್ರಮ | ೧,೦೦,೦೦೦ | ೧,೦೦,೦೦೦ | – | ೫೦ |
| ೪ | ನಗರಕೂಲಿ ಉದ್ಯೋಗ | ೫,೦೦,೦೦೦ | ೫,೦೦,೦೦೦ | – | ೭ ಕಾಮಗಾರಿ |
| ೫ | ಸಾಮಾಜಿಕ ಸೇವೆಗಳು | ೪೪,೮೦೦ | ೪೪,೮೦೦ | – | ೧ ಚಟುವಟಿಕೆ |
| | **ಒಟ್ಟು** | **೭೫೭,೩೦೦** | **೬೭೨,೮೫೦** | **೮೪,೪೫೦** | **೧೫೦ ಫಲಾನುಭವಿಗಳು** |

ಮೂಲ: ನಗರಸಭೆ ರಾಬರ್ಟಸನ್ ಪೇಟೆ

**ಕೋಷ್ಟಕ ೧೨.೭ (ಕ): ಸ್ವರ್ಣಜಯಂತಿ ರೋಜ್ಗಾರ್ ಯೋಜನೆಯಡಿ ೨೦೦೧–೨೦೦೨ನೇ ಸಾಲಿನಲ್ಲಿ ಆದ ಪ್ರಗತಿ**

| ಕ್ರ.ಸಂ. | ಉಪಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ ರೂ.ಗಳು | ಖರ್ಚಾದ ಅನುದಾನ ರೂ.ಗಳು | ಉಳಿಕೆ ರೂ. | ಫಲಾನುಭವಿಗಳ/ ಕಾಮಗಾರಿಗಳ ಸಂಖ್ಯೆ |
|---|---|---|---|---|---|
| ೧ | ಸಣ್ಣ ಉದ್ದಿಮೆ | – | ೫೦,೨೫೦ | – | ೨೦ ಫಲಾನುಭವಿಗಳು |
| ೨ | ಡ್ವಾಕ್ವಾ | – | – | – | – |
| ೩ | ತರಬೇತಿ ಕಾರ್ಯಕ್ರಮ | ೧,೩೦,೦೦೦ | ೧,೩೦,೦೦೦ | – | ೫೦ ಜನ ಫಲಾನುಭವಿಗಳು |
| ೪ | ನಗರಕೂಲಿ ಉದ್ಯೋಗ | ೧,೩೭,೪೩೨ | ೧,೩೭,೪೩೨ | – | ೧ ಕಾಮಗಾರಿ |
| ೫ | ಸಾಮಾಜಿಕ ಸೇವೆಗಳು | ೪೧,೩೬೪ | ೪೧,೩೬೪ | – | ೨ ಚಟುವಟಿಕೆ ೧೦೦ ಜನ ಫಲಾನುಭವಿಗಳು |
| | **ಒಟ್ಟು** | **೩,೦೮,೭೯೬** | **೩,೫೯,೦೪೬** | – | |

ಮೂಲ: ನಗರಸಭೆ ರಾಬರ್ಟಸನ್ ಪೇಟೆ

**ನಗರಸಭೆಯ ೧೯೯೭–೯೮ ರಿಂದ ೨೦೦೧–೦೨ರವರೆಗಿನ ಐದು ವರ್ಷಗಳ ಜಮಾ – ಖರ್ಚಿನ ವಿವರ**

ರೂ.ಗಳಲ್ಲಿ

| ವಿವರಗಳು | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ | ೨೦೦೦–೨೦೦೧ | ೨೦೦೧–೨೦೦೨ |
|---|---|---|---|---|---|
| ಆರಂಭ ಶಿಲ್ಕು | ೧೫,೩೨,೩೪೫ | ೨೭,೩೬,೬೬೨ | ೩೩,೦೬,೧೩೬ | ೫೫,೫೫,೩೫೬ | ೧,೦೮,೭೭,೫೮೧ |
| ಜಮಾ | ೧,೭೫,೦೭,೭೯೦ | ೨,೩೨,೯೫,೩೭೦ | ೨,೫೯,೪೯,೭೩೫ | ೫,೬೫,೭೨,೩೪೪ | ೩,೮೮,೩೩,೩೬೪ |
| ಒಟ್ಟು | ೧,೯೦,೪೦,೧೩೫ | ೨,೬೦,೩೨,೦೩೨ | ೨,೯೨,೫೫,೮೭೧ | ೬,೨೧,೨೭,೭೦೦ | ೪,೯೭,೧೦,೯೪೫ |
| ಖರ್ಚು | ೧,೬೩,೦೩,೪೭೩ | ೨,೨೭,೨೫,೮೯೬ | ೨,೩೭,೦೬,೫೧೫ | ೫,೧೨,೫೦,೧೧೯ | ೪,೦೫,೨೩,೩೦೦ |
| ಅಖೈರು ಶಿಲ್ಕು | ೨೭,೩೬,೬೬೨ | ೩೩,೦೬,೧೩೬ | ೫೫,೫೫,೩೫೬ | ೧,೦೮,೭೭,೫೮೧ | ೯೧,೮೭,೬೪೫ |

ಮೂಲ: ನಗರಸಭೆ ರಾಬರ್ಟಸನ್ ಪೇಟೆ

೨೦೦೧–೦೨ರಲ್ಲಿ ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿ ಬಿಡುಗಡೆಯಾದ ಅನುದಾನವು ರೂ. ೨೬,೨೪,೭೯೭ ಆಗಿದ್ದು ವೆಚ್ಚವು ರೂ. ೨೪,೧೦,೩೨೧ ಆಗಿದೆ. ಯೋಜನೆಯಿಂದ ೭೮೬ ಜನರಿಗೆ ಕೆಲಸ ದೊರಕಿಸಿ ಕೊಡಲಾಗಿದೆ.

**ನಗರಸಭೆ ಚಿಂತಾಮಣಿ**

ಚಿಂತಾಮಣಿ ನಗರಸಭೆಯು ೧೯೩೫ರಲ್ಲಿ ಪುರಸಭೆಯಾಗಿ ರಚನೆಗೊಂಡಿತ್ತು. ಪ್ರಾರಂಭದಲ್ಲಿ ಅದರ ಚುನಾಯಿತ ಸದಸ್ಯರ ಸಂಖ್ಯೆ ೧೯ ಆಗಿದ್ದಿತು. ಪುರಸಭಾ ಕಾಯ್ದೆ ೧೯೫೧ರನ್ವಯ ಈ ಪುರಸಭೆಯ ಸದಸ್ಯರ ಸಂಖ್ಯೆ ೨೦ಕ್ಕೆ ಏರಿಸಲ್ಪಟ್ಟಿತು. ಪುರಸಭೆ ನಾಲ್ಕು ವಿಭಾಗಗಳಾಗಿದ್ದು, ಈ ವಿಭಾಗಗಳು ಕ್ರಮವಾಗಿ ಚಿಂತಾಮಣಿ ಕಸಬಾ, ನಕ್ಕುಂಡಿ, ವೆಂಕಟಗಿರಿಕೋಟೆ, ಮೂಲಪಲ್ಲಿ ಮತ್ತು ಸೋನಸೆಟ್ಟಿಹಳ್ಳಿಗಳಾಗಿತ್ತು. ಆಗಿನ ಪುರಸಭೆಯ ವಿಸ್ತೀರ್ಣವು ೪.೩ ಚದರ ಮೈಲಿ ಆಗಿತ್ತು. ೧೯೬೭ರ ಸಾಲಿನಲ್ಲಿ ಇದು ನಗರಸಭೆಯಾಗಿ ಪರಿವರ್ತನೆಯಾಯಿತು. ಸಂವಿಧಾನದ ೭೪ನೇಯ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ ಅಂದರೆ ೨೦೦೧ರಲ್ಲಿ ಚುನಾವಣೆ ನಡೆದು ನಗರಸಭೆಗೆ ೩೧ ಸದಸ್ಯರು ಚುನಾಯಿಸಲ್ಪಟ್ಟರು. ಮೀಸಲು ಸ್ಥಾನಗಳೊಂದಿಗೆ ವಿಂಗಡನೆಗೊಂಡ ಸದಸ್ಯರ ಸಂಖ್ಯೆ, ಪರಿಶಿಷ್ಟ ಜಾತಿ–೩, ಪರಿಶಿಷ್ಟ ವರ್ಗ–೧, ಇತರರು–೨೭, ಮಹಿಳೆಯರು–೧೩, ಮಹಿಳೆಯರು ಪರಿಶಿಷ್ಟ ಜಾತಿ–೧, ಪರಿಶಿಷ್ಟ ವರ್ಗ–೧.

೨೦೦೧–೨೦೦೨ನೇ ಸಾಲಿನಲ್ಲಿ ಇದ್ದಂತೆ–ನಗರಸಭೆ ವಿಸ್ತೀರ್ಣ–೧೨.೫ ಚ.ಕಿ.ಮೀ. ಆಗಿದ್ದು ನಗರದಲ್ಲಿಯ ಮನೆಗಳ ಸಂಖ್ಯೆ ೧೨,೧೪೧, ನಗರಸಭೆಯನ್ನು ೩೧ ವಾರ್ಡ್‌ಗಳಾಗಿ ವಿಂಗಡನೆ ಮಾಡಿದೆ. ತೆರಿಗೆ ಪಾವತಿಸುವವರ ಸಂಖ್ಯೆಯು ೧೬,೦೦೦ ಹಾಗೂ ತಲಾ ಆದಾಯ–೧,೦೭೦ ರೂ. ಆಗಿರುತ್ತದೆ. ಪ್ರಥಮವಾಗಿ ೧೯೭೦ರಲ್ಲಿ ನಗರ ಯೋಜನೆ ಪ್ರಾರಂಭಗೊಂಡಿತು. ಗೃಹನಿರ್ಮಾಣ ಮಂಡಳಿಯಿಂದ ನಿರ್ಮಾಣಗೊಂಡಿದ್ದ ಸರ್ಕಾರಿ ನೌಕರರ ಬಡಾವಣೆಗೆ ನೀರು, ವಿದ್ಯುತ್ ಮುಂತಾದ ಪೌರ ಸೌಲಭ್ಯಗಳನ್ನು ನಗರಸಭೆಯು ಒದಗಿಸಿದೆ.

**ನೀರು ಸರಬರಾಜು:** ಕನ್ನಂಪಲ್ಲಿ ಕೆರೆ, ಅಂಬಾಜಿದುರ್ಗದ ಡ್ಯಾಮ್ ಹಾಗೂ ಕೊಳವೆ ಬಾವಿಗಳು ನಗರಕ್ಕೆ ನೀರು ಒದಗಿಸುವ ಮೂಲಗಳಾಗಿವೆ. ಪುರಸಭೆಗೆ ಸುರಕ್ಷಿತ ಕುಡಿಯುವ ನೀರು ಒದಗಿಸುವ ಯೋಜನೆ ಹೊಣೆಯನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಿಸುತ್ತಿದೆ. ನೀರು ಸರಬರಾಜು ಯೋಜನೆಗೆ ಮಾಡಲಾದ ವೆಚ್ಚವು ೪೩೧ ಲಕ್ಷ ರೂ.ಗಳು. ೧೯೯೮–೯೯ರಲ್ಲಿ ವಡ್ಡಹಳ್ಳಿ ರಸ್ತೆಯಡಿ ಪಂಪಿಂಗ್ ಸ್ಟೇಶನ್ ನಿರ್ಮಿಸಿದ್ದು ಅದಕ್ಕೆ ತಗುಲಿದ ವೆಚ್ಚ ೩.೫ ಲಕ್ಷ ರೂ.ಗಳಾಗಿದೆ. ೧೯೯೮–೯೯ರಲ್ಲಿ ೫೦ ಲಕ್ಷ ರೂ.ವೆಚ್ಚದಲ್ಲಿ ೨ ಓವರ್ ಹೆಡ್ ಟ್ಯಾಂಕುಗಳನ್ನು ಕಟ್ಟಿಸಿದ್ದು, ಅವುಗಳ ಸಾಮರ್ಥ್ಯ ೧೦ ಲಕ್ಷ ಲೀಟರ್ ಆಗಿದೆ. ಪ್ರಸ್ತುತ ನಗರಕ್ಕೆ ಸರಬರಾಜುಗೊಳ್ಳುತ್ತಿರುವ ಒಟ್ಟು ನೀರಿನ ಪ್ರಮಾಣ ೩೨ ಲಕ್ಷ ಲೀಟರ್ ಆಗಿದೆ. ನೀರಿನ ತಲಾವಾರು ಹಂಚಿಕೆ ೪೦ (ಎಲ್.ಪಿ.ಸಿ.ಡಿ) ಲೀಟರ್ ಆಗಿರುತ್ತದೆ. ಯೋಜನೆಗಾಗಿ ೨೦೦೧–೨೦೦೨ನೇ ಸಾಲಿನಲ್ಲಿ ಮಾಡಿದ ವೆಚ್ಚ ೧೩.೩ ಲಕ್ಷ ರೂ.ಗಳು ಹಾಗೂ ನೀರಿನ ತೆರಿಗೆ ರೂಪದಲ್ಲಿ ಸಂದಾಯವಾದ ಹಣ, ರೂ.೧೨,೦೨,೯೮೬ ಗಳು. ೧೯೭೦ರಲ್ಲಿ ನಗರದಲ್ಲಿ ೨,೧೬೮ ಸಾರ್ವಜನಿಕ ನಲ್ಲಿಗಳು ಹಾಗೂ ೫,೧೪೯ ಖಾಸಗಿ ನಲ್ಲಿಗಳು ಇದ್ದವು.

ಜನಾರೋಗ್ಯ ಮತ್ತು ನೈರ್ಮಲ್ಯ: ನಗರ ನೈರ್ಮಲ್ಯ ಕಾಪಾಡಲು ನಗರಸಭೆಯು ೪೭ ಖಾಯಂ ನೌಕರರನ್ನು, ೨೮ ಜನ ತಾತ್ಕಾಲಿಕ, ಹೀಗೆ ಒಟ್ಟು ೭೫ ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಒಳಚರಂಡಿ ನಿರ್ಮಾಣಕ್ಕಾಗಿ ೪೫.೮ ಲಕ್ಷ ರೂ.ಗಳ ಯೋಜನೆಯನ್ನು ರೂಪಿಸಿದ್ದು ೧೯೮೫ರಲ್ಲಿ ಕೆಲಸ ಪ್ರಾರಂಭಿಸಿ ೧೯೮೭ರಲ್ಲಿ ಪೂರ್ಣಗೊಳಿಸಲಾಗಿದೆ. ಯೋಜನೆಗಾಗಿ ನಗರಸಭೆಯು ೧೧.೪೫ಲಕ್ಷ ರೂ. ಸರ್ಕಾರದ ಸಾಲ, ಹಾಗೂ ಜೀವ ವಿಮಾ ನಿಗಮದ ಸಾಲ ೨೨.೯ ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ. ಕಳೆದ ಮೂರು ವರ್ಷಗಳಿಂದ ಹೊರ ಚರಂಡಿ ನಿರ್ಮಾಣಕ್ಕಾಗಿ ರೂ.೬,೩೫,೧೫೦ ಗಳನ್ನು ನಗರಸಭೆ ವೆಚ್ಚ ಮಾಡಿದೆ. ಜನನ ಮರಣ ದಾಖಲೆ ಹಾಗೂ ಸಾಂಕ್ರಾಮಿಕಗಳ ನಿಯಂತ್ರಣಗಳ ಮೇಲ್ವಿಚಾರಣೆಯನ್ನು ಆರೋಗ್ಯ ಪರಿವೀಕ್ಷಕರು ನೋಡಿಕೊಳ್ಳುತ್ತಾರೆ.

**ಇತರ ಸೌಲಭ್ಯಗಳು:** ನಗರಸಭೆಯು ೧೩೮' x ೩೮೫' ಆಳತೆಯ ಒಂದು ಉದ್ಯಾನದ ಉಸ್ತುವಾರಿಯನ್ನು ಮತ್ತು ಒಂದು ಬಾಲವಾಡಿಯನ್ನು ನಡೆಸುತ್ತಿದೆ. ೧೯೩೩ರಲ್ಲಿ ನಗರವು ಪ್ರಪ್ರಥಮ ಬಾರಿಗೆ ವಿದ್ಯುತ್ ಸಂಪರ್ಕ ಪಡೆಯಿತು. ೨೦೦೧–೨೦೦೨ರಲ್ಲಿ ನಗರದಲ್ಲಿ ೩,೭೪ ಬೀದಿ ದೀಪಗಳು ೧೬,೩೬೩ ಮನೆ ಸಂಪರ್ಕಗಳು ಹಾಗೂ ೪೬ ವಾಣಿಜ್ಯ ಸಂಪರ್ಕಗಳಿದ್ದವು. ನಗರಸಭೆ ವ್ಯಾಪ್ತಿಯಲ್ಲಿ ಒಳಪಡುವ ಟಾರ್, ಮಣ್ಣು ಹಾಗೂ ಸಿಮೆಂಟ್ ಹಾಗೂ ಮೆಟಲ್ ರಸ್ತೆಗಳು ಕ್ರಮವಾಗಿ ೨೦.೫ ಕಿ.ಮೀ., ೪೦ ಕಿ.ಮೀ., ೭ ಕಿ.ಮೀ. ಹಾಗೂ ೨೫ ಕಿ.ಮೀ.ಗಳಾಗಿವೆ. ನಗರಸಭೆಯು ವ್ಯಾಪ್ತಿಯಲ್ಲಿ ಸೇರಿರುವ ಕೊಳಚೆ ಪ್ರದೇಶಗಳ ಸಂಖ್ಯೆ–೧೬ ಹಾಗೂ ಜನ ವಸತಿಯುಳ್ಳ ಗುಡಿಸಲುಗಳ ಸಂಖ್ಯೆ ೩೦೦೦ ಆಗಿವೆ. ಒಟ್ಟು ೩೮.೦೮ ಎಕರೆ ಕೊಳಚೆಪ್ರದೇಶವಿದ್ದು ಅದು ೮,೫೫೦ ಜನ ಸಂಖ್ಯೆ ಹೊಂದಿದೆ. ೪೦ ಲಕ್ಷ ರೂ.ಗಳಲ್ಲಿ ೧೦ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಲಾಗಿದೆ.

**ಹಣಕಾಸು:** ಆಕ್ಟ್ರಾಯ್ ರದ್ದಾಗುವ ಪೂರ್ವದ ಮೂರು ವರ್ಷಗಳ (ಅಂದರೆ ೧೯೭೬–೭೭, ೧೯೭೭–೭೮, ೧೯೭೮–೭೯) ಈ ಸಾಲುಗಳ ಆದಾಯ ಕ್ರಮವಾಗಿ ರೂ.೮,೯೫,೬೧೦, ರೂ.೯,೪೮,೬೯೦ ಮತ್ತು ರೂ.೧೦,೩೮,೯೮೦ ಆಗಿದ್ದಿತು. ಆಕ್ಟ್ರಾಯ ರದ್ದಾದ ಮೇಲೆ ಇತ್ತೀಚಿನ ಮೂರು ವರ್ಷಗಳಾದ ೧೯೯೯–೨೦೦೦, ೨೦೦೦–೨೦೦೧, ೨೦೦೧–೨೦೦೨ ಈ ಸಾಲುಗಳಲ್ಲಿ ಅಕ್ಟ್ರಾಯ್‌ಗೆ ಬದಲಾಗಿ ಒಟ್ಟಾಗಿ ರಾಜ್ಯ ಹಣಕಾಸು ಆಯೋಗದ ಅನುದಾನ ಹಾಗೂ ಸರ್ಕಾರದ ವಿವಿಧ ಅನುದಾನ, ಸಾಲಗಳು ಹಾಗೂ ಸಹಾಯಧನ ಮೊತ್ತ ಕ್ರಮವಾಗಿ ರೂ.೯೨,೬೫,೭೦೦, ರೂ.೧೨,೮೦,೧೫೯ ಹಾಗೂ ರೂ.೧,೨೪,೦೦,೦೦೦ ಆಗಿರುತ್ತದೆ. ನಗರಸಭೆ ತನ್ನ ಮುಂಗಡ ಪತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗಾಗಿ ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣವು ೧೯೯೯–೨೦೦೦, ೨೦೦೦–೨೦೦೧, ೨೦೦೧–೨೦೦೨, ಸಾಲುಗಳಲ್ಲಿ ಕ್ರಮವಾಗಿ ರೂ.೨,೦೦,೦೦೦; ೪,೩೩೧ ಹಾಗೂ ೫,೧೮,೦೦೦ ಆಗಿರುತ್ತದೆ.

೧೯೯೮–೯೯ ಹಾಗೂ ೨೦೦೧–೦೨ನೇ ಸಾಲುಗಳಲ್ಲಿ ನಗರಸಭೆಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

(ರೂ.ಗಳಲ್ಲಿ)

| ಕ್ರ.ಸಂ. | ವಿವಿಧ ಬಾಬ್ತುಗಳು | ವರ್ಷ | |
|---|---|---|---|
| | | ೧೯೯೮–೯೯ | ೨೦೦೧–೦೨ |
| ೧ | **ಜನಾರೋಗ್ಯ ಮತ್ತು ನೈರ್ಮಲ್ಯ** | ೨,೩೯,೬೭೭ | ೩,೪೯,೬೫೫ |
| ೨ | **ನಗರಸಭೆ ವತಿಯಿಂದ ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ** | ೯,೮೫,೦೬೨ | ೩೫,೫೦,೩೫೮ |
| ೩ | **ನೀರು ಸರಬರಾಜು** | ೯,೮೦,೩೫೨ | ೩೦,೫೦,೩೫೮ |
| ೪ | **ರಸ್ತೆ ಮತ್ತು ದೀಪ ನಿರ್ವಹಣೆ** | ೩,೧೧,೪೦೫ | ೮,೩೮,೧೯೮ |
| ೫ | **ಚರಂಡಿ ಮತ್ತು ಸಾಂಕ್ರಾಮಿಕ ರೋಗ** | ೧,೪೨,೦೫೪ | ೨,೨೧,೫೨೭ |
| ೬ | **ಸಿಬ್ಬಂದಿ ಪ್ರಭಾರ** | ೭೬,೧೪,೫೫೮ | ೧,೦೦,೩೬,೬೬೪ |
| ೭ | **ಇತರೆ** | ೬,೨೬,೪೫೪ | ೭,೦೧,೩೬೮ |

ಮೂಲ: ನಗರಸಭೆ, ಚಿಂತಾಮಣಿ

ನಗರಸಭೆಯು ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳಿಗಾಗಿ ರೂ.೨೭,೨೮,೫೦೦, ಮಾರುಕಟ್ಟೆ ಮತ್ತು ಮಂಡಿ ನಿರ್ಮಾಣಕ್ಕಾಗಿ ರೂ.೬,೫೦,೦೦೦ ಹಾಗೂ ದಿನವಹಿ ಮಾರುಕಟ್ಟೆ ನಿರ್ಮಾಣಕ್ಕಾಗಿ ರೂ.೫೮,೨೧,೫೦೦ಗಳ ಕಾಮಗಾರಿಗಳನ್ನು ಕೈಗೊಂಡಿದೆ.

**ನಗರಸಭೆ, ಚಿಕ್ಕಬಳ್ಳಾಪುರ**

ಚಿಕ್ಕಬಳ್ಳಾಪುರ ಪುರಸಭೆ ಪ್ರಥಮ ಬಾರಿಗೆ ೧೯೨೫ರಲ್ಲಿ ಸ್ಥಾಪನೆಗೊಂಡಿತು. ಪುರಸಭೆ ಕಾಯ್ದೆ ೧೯೫೧ರ ಪ್ರಕಾರ ಪುರಸಭೆ ರಚನೆಗೊಂಡು ೨೦ ಚುನಾಯಿತ ಸದಸ್ಯರನ್ನು ಹೊಂದಿತ್ತು. ನಗರಸಭೆಯು ರಚನೆಗೊಂಡಾಗ ೪.೫೦ ಚದುರ ಮೈಲಿ ವಿಸ್ತೀರ್ಣ ಹೊಂದಿದ್ದು, ೨೩,೦೨೫ (೧೯೬೧ ಜನಗಣತಿಯಂತೆ) ಜನಸಂಖ್ಯೆ ಇದ್ದಿತು. ಪಟ್ಟಣವನ್ನು ೬ ವಾರ್ಡ್‌ಗಳಾಗಿ ವಿಭಜಿಸಲಾಗಿತ್ತು. ೨೦೦೧ರ ಜನಗಣತಿಯಂತೆ ನಗರದ ಜನಸಂಖ್ಯೆಯು ೫೪,೯೬೮ ಆಗಿದೆ. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ (೨೦೦೦–೦೧) ಪುರಸಭೆ ಕಾನೂನಿನ್ವಯ ಚುನಾವಣೆಗಳು ೨೦೦೧ರಲ್ಲಿ ನಡೆದು ೩೧ ಜನ ಸದಸ್ಯರು ಚುನಾಯಿಸಲ್ಪಟ್ಟರು. ಮೀಸಲಾತಿ ಅನ್ವಯ ಚುನಾಯಿತ ಸದಸ್ಯರ ಹಂಚಿಕೆ ಹೀಗಿದೆ. ಪರಿಶಿಷ್ಟ ಜಾತಿ (ಜಿ)–೨, ಪರಿಶಿಷ್ಟ ಜಾತಿ (ಎಲ್)–೨ ಪರಿಶಿಷ್ಟ ಪಂಗಡ (ಎಲ್) ೧ ಜನರಲ್ (ಜಿ)–೧೦; ಜನರಲ್ (ಎಲ್) ೬, ಬಿ.ಸಿ.ಎಂ. (ಎ)–೫, ಬಿ.ಸಿ.ಎಂ. (ಬ) (ಜ) –೧; ಬಿಸಿಎಂ (ಬಿ) (ಎಲ್)–೧, ಬಿಸಿಎಂ (ಎಲ್)–೩.

ಪುರಸಭೆಯು ೧೯೯೫ರಲ್ಲಿ ನಗರಸಭೆಯಾಗಿ ಪರಿವರ್ತನೆಗೊಂಡಿತು. ೨೦೦೧–೦೨ರಲ್ಲಿ ನಗರಸಭೆಯ ವಿಸ್ತೀರ್ಣವು ೧೬.೨೦ ಚದರ ಕಿ.ಮೀ. ಆಗಿದ್ದು ೧೦,೮೧೩ ಖಾತೆಗಳನ್ನು ಹೊಂದಿದೆ. ಹೆಚ್.ಎಸ್.ಗಾರ್ಡನ್, ಗಂಗನಮಿದ್ದೆ, ನಿಮ್ಮಕಲಕುಂಟೆ ಕಂದಾಯ ಗ್ರಾಮಗಳು ಈ ನಗರ ಸಭೆ ವ್ಯಾಪ್ತಿಗೆ ಸೇರಿಕೊಳ್ಳುತ್ತವೆ. ನಗರಸಭೆ ಏಳು ವಿಭಾಗಗಳನ್ನು ಹೊಂದಿದ್ದು ೩೧ ವಾರ್ಡ್‌ಗಳು ಇವೆ. ೨೦೦೦–೨೦೦೧ರಲ್ಲಿ ತೆರಿಗೆ ಸಂದಾಯ, ತಲಾ ಸರಾಸರಿ ಕರಭಾರ ರೂ.೩೯ ಹಾಗೂ ೨೦೦೧–೦೨ರಲ್ಲಿ ಇದು ರೂ.೪೧ ಆಗಿರುತ್ತದೆ. ನಗರ ಯೋಜನೆ ೧೯೯೬ರಲ್ಲಿ ಪ್ರಾರಂಭಗೊಂಡಿದ್ದು ಐ.ಪಿ.ಎಸ್. ಎಂ.ಟಿ ಯೋಜನೆ ರೀತ್ಯ ಬಡಾವಣೆ ನಿರ್ಮಾಣಗೊಂಡಿದೆ. ಬಡಾವಣೆಯು ೫೯೧ ಖಾಲಿ ನಿವೇಶನಗಳನ್ನು ಹೊಂದಿದೆ. ಬಡಾವಣೆಗಳ ರಚನೆಗಾಗಿ ನಗರಸಭೆ ೫೦ ಲಕ್ಷ ರೂ.ಗಳನ್ನು ಖರ್ಚು ಮಾಡಿದೆ. ಐ.ಡಿ.ಎಸ್.ಎಂ.ಗೆ ಕೇಂದ್ರ ಸರ್ಕಾರವು ೩೭.೬೨ ಲಕ್ಷ ರೂ.ಗಳನ್ನು ಸಾಲವಾಗಿ ನೀಡಿದೆ.

**ನೀರು ಸರಬರಾಜು**

ನಗರಕ್ಕೆ ಮೊದಲಿನಿಂದಲೂ ಕೆರೆ ಹಾಗೂ ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿತ್ತು. ಪುರಸಭೆ ಪ್ರಾರಂಭಗೊಂಡಾಗಿನಿಂದ ೧೯೫೨ರಿಂದ ಸುರಕ್ಷಿತ ನೀರು ಸರಬರಾಜು ಯೋಜನೆ ರೂಪಗೊಂಡಿದೆ. ಯೋಜನೆಯು ೧೯೬೨ರಲ್ಲಿ ಪೂರ್ಣಗೊಂಡಿದ್ದು ೧೯೫೨ರಲ್ಲಿ ಕಂದವಾರ ಪಂಪ್‌ಹೌಸ್ ಕಟ್ಟಲಾಗಿದೆ. ಹಾಗೂ ೧೯೬೨ರಲ್ಲಿ ಜಕ್ಕಲಮಡಗು ಪಂಪ್‌ಹೌಸ್ ಕಾರ್ಯಾರಂಭ ಮಾಡಿದೆ. ನಗರದಲ್ಲಿ ಏಳು ಓವರ್ ಹೆಡ್ ಜಲಸಂಗ್ರಾಹಕಗಳನ್ನು ನಿರ್ಮಿಸಿದ್ದು, ಅವುಗಳ ಒಟ್ಟು ಸಾಮರ್ಥ್ಯ ಏಳು ಲಕ್ಷ ಗ್ಯಾಲನ್‌ಗಳಾಗಿದೆ.

೨೦೦೧–೨೦೦೨ರಲ್ಲಿ ಎರಡನೇ ಹಂತದ ನೀರು ಸರಬರಾಜು ಅಭಿವೃದ್ಧಿ ಯೋಜನೆಯು ೧೯೮.೫೪ ಲಕ್ಷ ರೂ.ಗಳ ವೆಚ್ಚದಲ್ಲಿ ಕಾರ್ಯಗತಗೊಳ್ಳುತ್ತಿದೆ. ೧೯೯೭ ಅಂತ್ಯಕ್ಕೆ ೧,೮೯೦ ಸಾರ್ವಜನಿಕ ನಲ್ಲಿಗಳು ಹಾಗೂ ೫,೬೨೪ ಖಾಸಗಿ ನಲ್ಲಿಗಳು ಇದ್ದವು. ೨೦೦೩–೦೪ರಲ್ಲಿ ಖಾಸಗಿ ನಲ್ಲಿಗಳ ಸಂಖ್ಯೆ ೫,೪೮೧ ಆಗಿದೆ. ನಗರಸಭೆ ದಿನನಿತ್ಯ ೧೧,೧೨,೩೦೦೦ ಲೀಟರ್ ನೀರು ಸರಬರಾಜು ಮಾಡುತ್ತಿದ್ದು ಪ್ರತಿ ವ್ಯಕ್ತಿಗೆ ದಿನನಿತ್ಯ ೨೦.೨೫ (ಎಲ್ ಪಿಸಿಡಿ) ನೀರು ಸರಬರಾಜುಗೊಳ್ಳುತ್ತಿದೆ. ನೀರು ಸರಬರಾಜು ಕಾರ್ಯಕ್ಕೆ ತಗಲುವ ವಾರ್ಷಿಕ ವೆಚ್ಚವು ೩೧,೩೬,೪೫೬ ರೂ.ಗಳು ಹಾಗೂ ನೀರಿನ ತೆರಿಗೆ ರೂಪದಲ್ಲಿ ಸಂದಾಯವಾಗುವ ಹಣವು (೨೦೦೨–೦೩)ರಲ್ಲಿ ೩೦,೩೬,೯೬೦ ರೂ. ಆಗಿರುತ್ತದೆ.

**ಇತರೆ ಸೌಲಭ್ಯಗಳು**

ಜನಾರೋಗ್ಯ ಹಾಗೂ ನೈರ್ಮಲ್ಯ ವ್ಯವಸ್ಥೆ ಅಡಿ ನಗರಸಭೆ ೫೪ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಸಾಂಕ್ರಾಮಿಕ ರೋಗಗಳ ತಡೆಯಲ್ಲಿ ಮುಂಜಾಗ್ರತಾ ಕ್ರಮಗಳಾದ ಕ್ರಿಮಿನಾಶಕಗಳ ಸಿಂಪಡಣೆ, ರೋಗ ನಿರೋಧಕ ಮದ್ದು ನೀಡುವಿಕೆ ಮುಂತಾದವುಗಳನ್ನು ಕೈಗೊಳ್ಳುತ್ತಿದೆ. ಆರೋಗ್ಯ ನಿರೀಕ್ಷಕರು ಜನನ ಮರಣ ದಾಖಲೆಗಳ ಉಸ್ತುವಾರಿ ನೋಡಿಕೊಳ್ಳುವರಲ್ಲದೆ

ಸಾಂಕ್ರಾಮಿಕ ನಿಯಂತ್ರಣಾ ಕ್ರಮ ಕೈಗೊಳ್ಳುವರು. ಶೈಕ್ಷಣಿಕ ಸೇವೆ ಅಡಿ, ನಗರಸಭೆ ಒಂದು ಸಂಜೆ ಕಾಲೇಜು ಹಾಗೂ ಒಂದು ಶಿಶುವಿಹಾರ ನಡೆಸುತ್ತಿದೆ.

ನಗರವು ೩೦ ಕಿ.ಮೀ. ಟಾರ್ ರಸ್ತೆ ೧೭ ಕಿ.ಮೀ. ಜಲ್ಲಿ ರಸ್ತೆ ೧೦ ಕಿಮೀ. ವಾಹನ ಚಲಿಸಬಲ್ಲ ಮಣ್ಣಿನ ರಸ್ತೆ ಹಾಗೂ ೫ ಕಿ.ಮೀ. ಕಾಲ್ದಾರಿಗಳನ್ನು ಹೊಂದಿದೆ. ೧೯೯೯ರಲ್ಲಿ ೫ ಕಿ.ಮೀ. ಟಾರ್ ರಸ್ತೆ ೧೨ ಕಿ.ಮೀ. ಜಲ್ಲಿ ರಸ್ತೆ ೧೦ ಕಿ.ಮೀ. ಮಣ್ಣು ರಸ್ತೆ ಹಾಗೂ ಕಾಲ್ದಾರಿ ೮ ಕಿ.ಮೀ. ಇದ್ದಿತು. ಪ್ರಸ್ತುತ ಒಟ್ಟು ೬೨ ಕಿ.ಮೀ. ರಸ್ತೆಯನ್ನು ನಗರಸಭೆ ಹೊಂದಿದೆ.

ಪ್ರಥಮ ಬಾರಿಗೆ ೧೯೦೩ರಲ್ಲಿ ನಗರಕ್ಕೆ ಮೈಸೂರು ಪವರ್ ಕಾರ್ಪೋರೇಶನ್‌ದಿಂದ ವಿದ್ಯುತ್ ಪೂರೈಕೆಯಾಯಿತು. ೨೦೦೧-೨೦೦೨ರಲ್ಲಿ ೧೨,೬೦೪ ಮನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸಿದೆ. ವಾಣಿಜ್ಯ ಸಂಪರ್ಕಗಳ ಸಂಖ್ಯೆ ೧,೨೮೦ ಆಗಿದೆ ಹಾಗೂ ಬೀದಿ ದೀಪಗಳ ಸಂಖ್ಯೆ ೫,೦೪೮ ಆಗಿದ್ದಿತು.

ಪ್ರಸ್ತುತ, ನಗರ ಸಭೆಯ ವ್ಯಾಪ್ತಿಯಲ್ಲಿ ೮ ಕೊಳಚೆ ಪ್ರದೇಶಗಳಿದ್ದು ಅಲ್ಲಿರುವ ಗುಡಿಸಲುಗಳ ಸಂಖ್ಯೆ ೧,೨೯೦ ಹಾಗೂ ಈ ಪ್ರದೇಶಗಳಲ್ಲಿ ವಾಸಿಸುವ ಜನರ ಸಂಖ್ಯೆ ೬,೯೫೦ ಆಗಿದೆ.

**ಹಣಕಾಸು**

ಆಕ್ಟ್ರಾಯ್ ರದ್ದಾದ ನಂತರ ನಗರಸಭೆಗೆ ೧೯೯೯-೨೦೦೦ ರಿಂದ ೨೦೦೧-೨೦೦೨ ಈ ಮೂರು ವರ್ಷಗಳಲ್ಲಿ ಪ್ರತಿವರ್ಷ ಅನುಕ್ರಮವಾಗಿ, ರೂ.೧,೯೯,೪೩,೦೫೧, ರೂ.೯೨,೯೫,೨೮೬ ಹಾಗೂ ರೂ.೧,೦೮,೭೩,೭೬೪ ಎಫ್.ಎಸ್.ಸಿ ಅನುದಾನ ದೊರೆತಿದೆ.

ಪ್ರತಿ ವರ್ಷ ನಗರಸಭೆಯು ತನ್ನ ಮುಂಗಡಪತ್ರದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳಿಗಾಗಿ ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣ ೧೯೯೯-೨೦೦೦ದಿಂದ ೨೦೦೧-೦೨ರವರೆಗೆ ಕೆಳಗಿನಂತಿದೆ.

(ರೂ.ಗಳಲ್ಲಿ)

| ವರ್ಷ | ಕಾಯ್ದಿರಿಸಿದ್ದು | ಖರ್ಚು ಮಾಡಿದ್ದು |
|---|---|---|
| ೧೯೯೯-೨೦೦೦ | ೧೧,೦೦,೦೦೦ | ೪,೧೮,೭೫೩ |
| ೨೦೦೦-೨೦೦೧ | ೧,೦೦,೦೦೦ | ೨,೧೪,೦೭೨ |
| ೨೦೦೧-೨೦೦೨ | ೧೧,೦೦,೦೦೦ | ೧,೪೩,೬೦೪ |

೧೯೯೮-೯೯ ರಿಂದ ೨೦೦೧-೦೨ರವರೆಗೆ ನಗರಸಭೆಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಹಣದ (ಆದಾಯಕ್ಕನುಗುಣವಾಗಿ) ಶೇಕಡಾ ಪ್ರಮಾಣವು ಈ ಕೆಳಗಿನಂತಿದೆ.

ಶೇಕಡಾ ಪ್ರಮಾಣ

| ಖರ್ಚು ಮಾಡಿದ ಬಾಬ್ತುಗಳು | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ |
|---|---|---|---|---|
| ಜನಾರೋಗ್ಯ ಮತ್ತು ನೈರ್ಮಲ್ಯ | ೧೨ | ೧೧ | ೧೧ | ೧೧ |
| ಸಾರ್ವಜನಿಕ ಕಾಮಗಾರಿಗಳು | ೮ | ೧೦ | ೧೩ | ೧೨ |
| ನೀರು ಸರಬರಾಜು | ೧೦ | ೧೧ | ೧೦ | ೯ |
| ರಸ್ತೆ ಮತ್ತು ದೀಪ ನಿರ್ವಹಣೆ | ೮ | ೬ | ೭ | ೬ |
| ಚರಂಡಿ ಮತ್ತು ಸಾಂಕ್ರಾಮಿಕಗಳು | ೮ | ೫ | ೫ | ೭ |
| ಸಿಬ್ಬಂದಿ ಪ್ರಭಾರ | ೫೦ | ೫೧ | ೫೦ | ೪೫ |
| ಇತರೆ | ೪ | ೬ | ೪ | ೧೦ |

ನಗರಸಭೆಗೆ ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳ ಸಮಗ್ರ ಅಭಿವೃದ್ಧಿ ಯೋಜನೆ ಮಂಜೂರು ಆಗಿದ್ದು ೧೯೮೩ರ ಯೋಜನೆಯ ಅಂದಾಜು ಮೊತ್ತ ೧) ಭೂ ಸ್ವಾಧೀನ ರೂ. ೭.೩೬ ಲಕ್ಷ ಭೂ ಅಭಿವೃದ್ಧಿ ರೂ.೫ ಲಕ್ಷ ಹಾಗೂ ಅಂಗಡಿ ಸಂಕೀರ್ಣ ರೂ.೧೨.೫೦ ಲಕ್ಷ ರೂ.ಗಳಾಗಿದೆ. ಇದರ ಅಡಿಯಲ್ಲಿ ೩೫.೨೯ ಎಕರೆ ಭೂ ಸ್ವಾಧೀನಪಡಿಸಿಕೊಂಡಿದ್ದು ಲೇಔಟ್‌ಗಳನ್ನು ನಿರ್ಮಿಸಲಾಗಿದ್ದು, ಅವುಗಳಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಯಾಗಿದೆ. ಸ್ವರ್ಣ ಜಯಂತಿ ಶಹರಿ ರೋಜ್ಗಾರ್ ಯೋಜನೆಯಡಿ ಪಡೆದ ಅನುದಾನದಲ್ಲಿ ಕೇಂದ್ರದ ಪಾಲು ೩೭.೬೨ ಲಕ್ಷ ರೂ.ಗಳು ಹಾಗೂ ರಾಜ್ಯದ ಪಾಲು ೩೭.೬೨ ಲಕ್ಷ ರೂ.ಗಳು ಆಗಿದ್ದು, ಒಟ್ಟು ವೆಚ್ಚ ೭೫.೨೪ ಲಕ್ಷ ರೂ.ಗಳಾಗಿದೆ.

**೨೦೦೧-೦೨ ರಿಂದ ೨೦೦೩-೦೪ರವರೆಗಿನ ಮೂರು ವರ್ಷಗಳ ನಗರ ಸಭೆಯ ಆದಾಯ ಹಾಗೂ ವೆಚ್ಚಗಳ ಪಟ್ಟಿ.**

(ರೂ.ಗಳಲ್ಲಿ)

| ವಿವರಗಳು | ೨೦೦೧-೨೦೦೨ | ೨೦೦೨-೦೩ | ೨೦೦೩-೦೪ |
|---|---|---|---|
| **ಪ್ರಾರಂಭಿಕ ಶಿಲ್ಕು** | ೧,೦೧,೧೭,೨೩೬ | ೭೬,೯೮,೪೬೩ | ೭೫,೫೨,೩೩೧ |
| **ಒಟ್ಟು ಆದಾಯ** | ೨,೫೯,೧೧,೮೮೫ | ೨,೦೯,೩೩,೯೫೯ | ೪,೭೯,೮೯,೫೦೦ |
| **ಒಟ್ಟು ಖರ್ಚು** | ೨,೮೩,೩೦,೬೫೮ | ೨,೧೦,೮೦,೦೯೧ | ೪೮,೬೩,೮೦,೦೦ |
| **ಅಖೈರು ಶಿಲ್ಕು** | ೭೬,೯೮,೪೬೩ | ೭೫,೫೨,೩೩೧ | ೬೯,೦೩,೮೩೧ |

**ಪುರಸಭೆ, ಮಾಲೂರು**

ಪುರಸಭೆ ಮಾಲೂರು ೧೯೩೭ರಲ್ಲಿ ಸ್ಥಾಪನೆಗೊಂಡಿದೆ. ಆಗಿನ ಚುನಾಯಿತ ಸದಸ್ಯರ ಸಂಖ್ಯೆ ೧೫ ಆಗಿದ್ದಿತು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ ೨೦೦೧-೦೨ರಲ್ಲಿ ಚುನಾವಣೆ ನಡೆದು, ೨೩ ಸದಸ್ಯರು ಚುನಾಯಿತರಾದರು. ಮೀಸಲಾತಿ ಸ್ಥಾನಗಳೊಂದಿಗೆ ಸದಸ್ಯರ ಹಂಚಿಕೆ ಈ ಕೆಳಗಿನಂತಿದೆ.

| ಸಾಮಾನ್ಯ ವರ್ಗ | | ಪರಿಶಿಷ್ಟ ಜಾತಿ | | ಒಟ್ಟು |
|---|---|---|---|---|
| ಗಂ. | ಹೆಂ. | ಗಂ. | ಹೆಂ. | |
| ೧೨ | ೭ | ೨ | ೨ | ೨೩ |

ನಾಮಕರಣಗೊಂಡ ಸದಸ್ಯರ ಸಂಖ್ಯೆ-೫ ಆಗಿದ್ದಿತು. ಪುರಸಭೆಯನ್ನು ೨೩ ವಾರ್ಡ್‌ಗಳಾಗಿ ವಿಭಾಗಿಸಿದ್ದು ಪುರಸಭೆಯು ೨೦೦೧-೦೨ರಲ್ಲಿ ೭.೧೨ ಚ.ಕಿ.ಮೀ. ವಿಸ್ತೀರ್ಣ ಹೊಂದಿತ್ತು. ಜನಸಂಖ್ಯೆ (೨೦೦೧ ಗಣತಿಯಂತೆ) ೨೭,೮೧೫ ಆಗಿದೆ.

**ನೀರು ಸರಬರಾಜು:** ಪಟ್ಟಣಕ್ಕೆ ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಬಸ್ ನಿಲ್ದಾಣದ ಬಳಿ ಎರಡು ೫೫ ಸಾವಿರ ಲೀಟರ್ ಸಾಮರ್ಥ್ಯವುಳ್ಳ ಟ್ಯಾಂಕುಗಳು ಹಾಗೂ ಮಾರುತಿ ಬಡಾವಣೆಯಲ್ಲಿ ಒಂದು ೪೫ ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್‌ನ್ನು ನಿರ್ಮಿಸಲಾಗಿದೆ. ಪಟ್ಟಣಕ್ಕೆ ದಿನನಿತ್ಯ ಸರಾಸರಿ ೧೦ ಲಕ್ಷ ಲೀಟರ್ ನೀರು ಸರಬರಾಜುಗೊಳ್ಳುತ್ತಿದೆ. ಪ್ರತಿದಿನ ತಲಾವಾರು ೩೦ ಲೀಟರ್ ನೀರು (ಎಲ್.ಪಿ.ಸಿ.ಡಿ) ಸರಬರಾಜುಗೊಳ್ಳುತ್ತಿದೆ. ೩,೩೨೬ ಮನೆಗಳಿಗೆ ನೀರನ್ನು ಪೂರೈಸಲಾಗಿದೆ. ೨೦೦೦-೦೧, ೨೦೦೧-೦೨, ೨೦೦೨-೦೩ರ ಸಾಲಿನಲ್ಲಿ ಪುರಸಭೆಗೆ ನೀರಿನ ತೆರಿಗೆ ಮೂಲಕ ಸಂದಾಯವಾದ ಮೊತ್ತವು ಕ್ರಮವಾಗಿ ರೂ.೪೪,೯೩೩, ರೂ.೪,೦೮,೮೮೩ ಹಾಗೂ ರೂ.೭,೫೯,೯೨೪ ಆಗಿದ್ದಿತು ಹಾಗೂ ನೀರು ಸರಬರಾಜುಗಾಗಿ ಮಾಡಿದ ವೆಚ್ಚವು ಕ್ರಮವಾಗಿ ರೂ.೧,೨೧,೨೭೫, ರೂ.೮,೨೦,೫೩೧ ಹಾಗೂ ರೂ.೧೯,೫೯,೯೨೪ ಗಳಾಗಿದೆ. ಪಟ್ಟಣದಲ್ಲಿ ಇರುವ ಖಾಸಗಿ ನಲ್ಲಿಗಳ ಸಂಖ್ಯೆ ೨,೬೧೪ ಹಾಗೂ ಸಾರ್ವಜನಿಕ ನಲ್ಲಿಗಳ ಸಂಖ್ಯೆಯು ೨೫೦ ಆಗಿರುತ್ತದೆ.

**ಜನಾರೋಗ್ಯ ಮತ್ತು ನೈರ್ಮಲ್ಯ**

ಮಾಲೂರು ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿದ್ದರೂ ಸಹ ಮುಂಜಾಗ್ರತಾ ಕ್ರಮವಾಗಿ ಕ್ರಿಮಿನಾಶಕಗಳನ್ನು ಸಿಂಪಡಿಸಲಾಗುತ್ತದೆ. ಹಿರಿಯ ಆರೋಗ್ಯ ನಿರೀಕ್ಷಕರು ಈ ಜವಾಬ್ದಾರಿ ಹೊಂದಿದ್ದು ಜನನ ಮರಣ ದಾಖಲಾತಿಗಳನ್ನು ಸಹ ನಿರ್ವಹಿಸುವರು. ಪಟ್ಟಣಕ್ಕೆ ಒಳಚರಂಡಿ ಯೋಜನೆ ಇರುವುದಿಲ್ಲ. ಎಲ್ ಮಾದರಿಯ ಹೊರ ಚರಂಡಿ ೪,೦೦೦ ಮೀ. ಹಾಗೂ ಯು ಮಾದರಿಯ ೭,೦೦೦ ಮೀಟರ್ ಚರಂಡಿಯನ್ನು ಪುರಸಭೆ ಹೊಂದಿದೆ. ಇದಕ್ಕಾಗಿ ಪುರಸಭೆ ೨೦೦೦–೦೧, ೨೦೦೧–೦೨ ಹಾಗೂ ೨೦೦೨–೦೩ ಸಾಲಿನಲ್ಲಿ ಮಾಡಿದ ವೆಚ್ಚವು ೯,೬೪,೦೪೩ ರೂ.೧,೭೦,೮೭೩ ಹಾಗೂ ರೂ.೫,೩೯,೯೫೧ ಆಗಿದೆ. ಪುರಸಭೆಯು ಪಟ್ಟಣದ ನೈರ್ಮಲ್ಯ ಕಾಪಾಡಲು ೩೦ ಜನ ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ.

**ಇತರ ಸೌಲಭ್ಯಗಳು**

ಪುರಸಭೆಯು ಸಾರ್ವಜನಿಕರ ಸೌಕರ್ಯಕ್ಕಾಗಿ ೩ ಉದ್ಯಾನಗಳನ್ನು ನಿರ್ಮಿಸಿ, ಅವನ್ನು ನಿರ್ವಹಿಸುತ್ತಿದೆ. ಪ್ರಸ್ತುತ ಪುರಸಭೆಯ ಕ್ಷೇತ್ರವ್ಯಾಪ್ತಿಗೆ ಒಳಪಡುವ ಟಾರ್ ರಸ್ತೆ ಉದ್ದ ೬ ಕಿ.ಮೀ., ಜಲ್ಲಿ ಕಲ್ಲಿನ ರಸ್ತೆ ೩ ಕಿ.ಮೀ., ಕಾಂಕ್ರೀಟ್ ರಸ್ತೆ, ೨ ಕಿ.ಮೀ. ಹಾಗೂ ಮಣ್ಣು ರಸ್ತೆ ೩ ಕಿ.ಮೀ. ಆಗಿದೆ.

೧೯೫೧ರಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯಿಂದ ಪಟ್ಟಣವು ವಿದ್ಯುತ್ ಸಂಪರ್ಕ ಪಡೆಯಿತು. ನಗರದಲ್ಲಿ ೩,೧೦೦ ಬೀದಿ ದೀಪಗಳು ಇವೆ. ೭,೪೩೦ ಮನೆಗಳು ವಿದ್ಯುತ್ ಸಂಪರ್ಕ ಪಡೆದಿವೆ ಹಾಗೂ ೧೯೦ ವಾಣಿಜ್ಯ ಸಂಪರ್ಕಗಳು ಇವೆ.

ಪುರಸಭೆಯ ವ್ಯಾಪ್ತಿಯಲ್ಲಿ ೪ ಕೊಳಚೆ ಪ್ರದೇಶಗಳಿದ್ದು ಅವುಗಳಲ್ಲಿ ೨೯೫ ಗುಡಿಸಲುಗಳಿವೆ. ಇವು ಒಂದು ಚದರ ಕಿ.ಮೀ. ವ್ಯಾಪ್ತಿ ಹೊಂದಿದ್ದು, ೧,೩೪೦ ಜನರು ಇಲ್ಲಿ ವಾಸಿಸುತ್ತಿದ್ದಾರೆ.

**ಹಣಕಾಸು**

ಆಕ್ಟ್ರಾಯ್ ರದ್ದಾದ ನಂತರ ಇತ್ತೀಚಿನ ಮೂರು ವರ್ಷಗಳಲ್ಲಿ ಅಂದರೆ ೨೦೦೦–೦೧, ೨೦೦೧–೦೨, ಮತ್ತು ೨೦೦೨–೦೩ಗಳಲ್ಲಿ ಸರ್ಕಾರ ಆಕ್ಟ್ರಾಯ್‌ಗೆ ಬದಲಾಗಿ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಮೇರೆಗೆ ನೀಡಿದ ಅನುದಾನವು ಕ್ರಮವಾಗಿ ರೂ.೩೬,೦೭,೦೩೨, ರೂ.೨೧,೦೪,೧೦೨ ಹಾಗೂ ರೂ.೨೮,೮೮,೦೬೮ ಆಗಿದ್ದಿತು. ಇದಲ್ಲದೆ ಸರ್ಕಾರ ೨೦೦೦–೦೧ರಲ್ಲಿ ೭.೫ ಲಕ್ಷ ರೂ.ಗಳ ಅಭಿವೃದ್ಧಿ ಅನುದಾನವನ್ನು ಸಹ ಪುರಸಭೆಗೆ ನೀಡಿದೆ.

ಪುರಸಭೆಯು ಪ್ರತಿ ವರ್ಷ ತನ್ನ ಮುಂಗಡಪತ್ರದಲ್ಲಿ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗಾಗಿ ಮೀಸಲಿಟ್ಟ (ಶೇ.೧೮) ಹಣ ಹಾಗೂ ಖರ್ಚು ಮಾಡಿದ ಹಣ ಕಳೆದ ಮೂರು ವರ್ಷಗಳಲ್ಲಿ ಈ ಕೆಳಗಿನಂತಿದೆ.

(ರೂ.ಗಳಲ್ಲಿ)

| ವರ್ಷ | ಕಾಯ್ದಿರಿಸಿದ ಹಣ | ಖರ್ಚು ಮಾಡಿದ ಹಣ |
|---|---|---|
| ೨೦೦೦–೦೧ | ೫,೫೭,೦೬೫ | ೫೬,೦೦೭ |
| ೨೦೦೧–೦೨ | ೩,೦೮,೨೫೩ | ೨೨,೪೧೨ |
| ೨೦೦೨–೦೩ | ೩,೭೧,೭೦೦ | ೨,೮೫,೧೫೫ |

ಪುರಸಭೆಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಹಣದ (ಒಟ್ಟು ಆದಾಯಕ್ಕನುಗುಣವಾಗಿ) ಶೇಕಡಾ ಪ್ರಮಾಣವು ೧೯೯೯–೨೦೦೦, ೨೦೦೧–೦೨ ಹಾಗೂ ೨೦೦೨–೦೩ ನೇ ಸಾಲುಗಳ ವಿವರ ಈ ಮುಂದಿನಂತಿದೆ.

(ಶೇಕಡಾವಾರು)

| ಕ್ರ.ಸಂ. | ವಿವರ | ೧೯೯೯-೨೦೦೦ | ೨೦೦೧-೦೨ | ೨೦೦೨-೦೩ |
|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೨.೬೪ | ೬.೨೪ | ೧೩.೫೦ |
| ೨ | ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ | ೭.೨೧ | ೨.೯೯ | ೬.೧೩ |
| ೩ | ನೀರು ಸರಬರಾಜು | ೩.೬೯ | ೫.೧೨ | ೨.೭೨ |
| ೪ | ರಸ್ತೆ ಮತ್ತು ದೀಪ ನಿರ್ವಹಣೆ | ೧.೦೨ | ೧.೨೩ | ೧.೫೮ |
| ೫ | ಇತರೆ | ೨.೪೯ | ೨.೭೧ | ೪.೦೦ |
| | ಉಳಿದ ಹಣ ಸಿಬ್ಬಂದಿ ಪ್ರಭಾರಕ್ಕೆ ವೆಚ್ಚವಾಗಿದೆ. | | | |

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಪುರಸಭೆ ೧೯೯೩-೯೪ರಲ್ಲಿ ಸೇರ್ಪಡೆ ಆಗಿದ್ದು, ಯೋಜನೆಯ ಮೊತ್ತವು ೧೨೩.೬೦ ಲಕ್ಷ ರೂ.ಗಳಿದೆ. ಈ ಹಣದಲ್ಲಿ ಪುರಸಭೆಯು ೫೬.೬೦ ಲಕ್ಷ ರೂ.ಗಳನ್ನು ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಮತ್ತು ಚರಂಡಿ ಹಾಗೂ ರಸ್ತೆಗಳಿಗಾಗಿ ೫.೩೫ ಲಕ್ಷ ರೂ. ವೆಚ್ಚ ಮಾಡಿದೆ.

**ಪುರಸಭೆಯ ಐದು ವರ್ಷಗಳ ಜಮಾ-ಖರ್ಚಿನ ವಿವರ**

(ರೂ.ಗಳಲ್ಲಿ)

| ವಿವರಗಳು | ೧೯೯೮-೯೯ | ೧೯೯೯-೨೦೦೦ | ೨೦೦೦-೨೦೦೧ | ೨೦೦೧-೨೦೦೨ | ೨೦೦೨-೨೦೦೩ |
|---|---|---|---|---|---|
| **ಆರಂಭ ಶಿಲ್ಕು** | ೧೫,೯೩,೮೩೭ | ೨೨,೬೧,೬೦೮ | ೫,೯೬,೪೮೮ | ೧೧,೪೯,೮೮೭ | ೨೧,೬೪,೪೦೭ |
| **ಜಮಾ** | ೯೪,೦೧,೫೨೭ | ೭೩,೪೩,೫೯೩ | ೯೧,೭೦,೭೩೫ | ೧೧,೩೩,೫೫,೦೮೮ | ೭೭,೮೦,೨೯೯ |
| **ಒಟ್ಟು** | ೧,೦೭,೯೫,೩೬೪ | ೯೬,೦೫,೦೦೧ | ೯೭,೬೭,೨೨೩ | ೧,೨೪,೮೪,೯೭೫ | ೯೯,೪೪,೬೪೬ |
| **ಖರ್ಚು** | ೮೫,೩೩,೭೫೬ | ೯೦,೦೮,೫೧೩ | ೮೬,೧೭,೩೩೬ | ೧,೦೩,೨೦,೫೬೮ | ೮೮,೦೨,೮೭೭ |
| **ಅಖೈರ್ ಶಿಲ್ಕು** | ೨೨,೬೧,೬೦೮ | ೫,೯೬,೪೮೮ | ೧೧,೪೯,೮೮೭ | ೨೧,೬೪,೪೦೭ | ೧೧,೪೧,೭೬೯ |

ಮೂಲ: ಪುರಸಭೆ ಮಾಲೂರು

ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ (ಎಸ್.ಜೆ.ಎಸ್.ಆರ್.ವೈ) ಅನ್ವಯ ಬಿಡುಗಡೆಯಾದ ಮೊತ್ತ ಮತ್ತು ಖರ್ಚು ಮಾಡಿದ ಹಣ ಹಾಗೂ ಫಲಾನುಭವಿಗಳ ವಿವರವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರ.ಸಂ. | ಉಪಯೋಜನೆಯ ಹೆಸರು | ಬಿಡುಗಡೆಯಾದ ಮೊತ್ತ ರೂ.ಗಳಲ್ಲಿ | ಖರ್ಚಾದ ಮೊತ್ತ ರೂ.ಗಳಲ್ಲಿ | ಫಲಾನುಭವಿಗಳ ಸಂಖ್ಯೆ | ಉಳಿಕೆ ರೂ. |
|---|---|---|---|---|---|
| ೧ | ಸಣ್ಣ ಉದ್ದಿಮೆ | | | | |
| ೨ | ಡ್ವಾಕ್ವಾ | ೨,೨೫,೦೦೦ | ೨,೨೫,೦೦೦ | ೩೭ | – |
| ೩ | ತರಬೇತಿ ಕಾರ್ಯಕ್ರಮ | ೩,೪೭,೮೯೯ | ೩,೪೭,೩೫೦ | ೧೫೮ | ೨೯೯ |
| ೪ | ನಗರಕೂಲಿಉದ್ಯೋಗ | ೭,೬೭,೪೯೯ | ೭,೬೭,೨೧೩ | – | ೨೭೬ |
| ೫ | ಸಾಮಾಜಿಕ ಸೇವೆಗಳು | ೧,೨೮,೮೬೮ | ೧,೨೮,೮೬೮ | ೫೫೮ | – |
| ೬ | ಬಾಲಿಕಾ ಸಮೃದ್ಧಿ ಯೋಜನೆ | ೬,೨೫೦೦ | ೬,೨೫೦೦ | ೧೨೫ | – |
| ೭ | ನಿರಂತರ ಉಳಿತಾಯ ಗುಂಪು | ೧೦,೦೦,೦೦೦ | ೧೦,೦೦,೦೦೦ | ೧೦೦ | – |
| ೮ | ಎಲ್‌ಅಂಡ್ ಒ.ಇ ಯೋಜನೆ | ೫,೧೧,೯೬೪ | ೩,೭೭,೬೩೭ | – | ೧,೩೪,೩೨೭ |
| | **ಒಟ್ಟು** | **೨೩,೭೦,೩೮೪** | **೨೨,೩೫,೫೬೮** | **೧೦೯** | **೧,೩೪,೮೧೬** |

ಮೂಲ: ಪುರಸಭೆ ಮಾಲೂರು

**ಪುರಸಭೆ ಶಿಡ್ಲಘಟ್ಟ**

ಶಿಡ್ಲಘಟ್ಟ ಪುರಸಭೆಯು ೧೯೪೮ರಲ್ಲಿ ಸ್ಥಾಪನೆಗೊಂಡಿದ್ದು, ಅಂದಿನ ಪುರಸಭೆಯ ಚುನಾಯಿತ ಸದಸ್ಯರ ಸಂಖ್ಯೆ ೧೯ ಹಾಗೂ ನಾಮಕರಣಗೊಂಡ ಸದಸ್ಯರ ಸಂಖ್ಯೆ ೨ ಆಗಿದ್ದಿತು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ ೨೦೦೧–೦೨ರಲ್ಲಿ ಚುನಾವಣೆ ನಡೆದು ೨೩ ಸದಸ್ಯರು ಚುನಾಯಿತರಾದರು. ಚುನಾಯಿತ ಸದಸ್ಯರ ಸಂಖ್ಯೆ ಮೀಸಲು ಸ್ಥಾನಗಳೊಂದಿಗಿನ ಹಂಚಿಕೆ ಈ ಕೆಳಗಿನಂತಿದೆ.

| ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಸಾಮಾನ್ಯ ವರ್ಗ | | ಪರಿಶಿಷ್ಟ ಪಂಗಡ ಮಹಿಳೆ | ಒಟ್ಟು |
|---|---|---|---|---|---|---|---|
| ಗಂ. | ಹೆ. | ಗಂ. | ಹೆ | ಗಂ. | ಹೆ. | | |
| ೫ | ೩ | ೧ | ೧ | ೮ | ೪ | ೧ | ೨೩ |

ಪ್ರಸ್ತುತ, (೨೦೦೧–೦೨)ರಲ್ಲಿ ಪುರಸಭೆ ವಿಸ್ತೀರ್ಣವು ೧೦ ಚದರ ಕಿ.ಮೀ. ಇದ್ದು ಮನೆಗಳ ಸಂಖ್ಯೆ ೫೦೦೦ ಆಗಿದೆ. ಪುರಸಭೆಯನ್ನು ೨೩ ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ನಗರದ ಜನಸಂಖ್ಯೆ ೪೧,೯೪೮ (೨೦೦೧ ಜನಗಣತಿಯಂತೆ) ಇದ್ದು ತಲಾ ಸರಾಸರಿ ಕರಭಾರವು ೩೨ ರೂ.ಗಳು ಆಗಿರುತ್ತದೆ. ದಿನಾಂಕ ೨೭–೫–೧೯೯೮ರಲ್ಲಿ ನಗರ ಯೋಜನೆ ಪ್ರಾರಂಭಗೊಂಡಿತು. ಹೊಸ ಬಡಾವಣೆಗಳ ನಿರ್ಮಾಣ ಹಾಗೂ ಇನ್ನಿತರ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಿದೆ.

| ಕ್ರ.ಸಂ. | ಬಡಾವಣೆಗಳ ಹೆಸರು | ಜನಸಂಖ್ಯೆ | ಮನೆಗಳ ಸಂಖ್ಯೆ |
|---|---|---|---|
| ೧ | ಸಿ ಆರ್ ಲೇಔಟ್ | ೩೦೦ | ೨೫ |
| ೨ | ಸರೀ ಮುನ್ನಿಸಾ ಲೇಔಟ್ | ೫೦೦ | ೫೦ |
| ೩ | ಪಿ.ನಾರಾಯಣಸ್ವಾಮಿ ಲೇಔಟ್ | ೫೦೦ | ೩೦ |
| ೪ | ಬಿ.ತಿಮ್ಮಯ್ಯ ಲೇಔಟ್ | ೩೫೦ | ೩೫ |
| ೫ | ಪುರಸಭಾ ಬಡಾವಣೆ ೧ ಮತ್ತು ೨ | ೫೦೦ | ೪೦ |
| ೬ | ಸೀತಾರಾಮಯ್ಯ ಲೇಔಟ್ | ೫೦೦ | ೫೦ |

ಪಟ್ಟಣದಲ್ಲಿ, ೧೯೮೭ರಲ್ಲಿ ಗೃಹಮಂಡಳಿಯ ಬಡಾವಣೆ ನಿರ್ಮಾಣಗೊಂಡಿದ್ದು, ೨,೧೭,೮೦೦ ಚ. ಅಡಿ ವಿಸ್ತೀರ್ಣದಲ್ಲಿ ೧೦೦ ಮನೆಗಳನ್ನು ಕಟ್ಟಲಾಗಿದೆ. ಈ ಬಡಾವಣೆಗೆ ಪೌರಸಭೆಯಿಂದ ಬೀದಿ ದೀಪ, ರಸ್ತೆ ಚರಂಡಿವ್ಯವಸ್ಥೆ, ನೀರಿನ ಸರಬರಾಜು ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ.

**ನೀರು ಸರಬರಾಜು:** ಬಹಳ ಹಿಂದಿನಿಂದಲೂ ಪಟ್ಟಣಕ್ಕೆ ಸೇದುವ ಬಾವಿಗಳಿಂದ ನೀರು ಸರಬರಾಜು ಆಗುತ್ತಿತ್ತು. ಈಗ ಕೊಳವೆಬಾವಿಗಳಿಂದ ನೀರು ಸರಬರಾಜುಗೊಳ್ಳುತ್ತಿದೆ. ೧೯೭೦ರಲ್ಲಿ ಪುರಸಭೆಯು ಸುರಕ್ಷಿತ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಿತು. ೨೦೦೦–೨೦೦೧ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯು ೩.೩೩ ಲಕ್ಷ ರೂ. ವೆಚ್ಚದಲ್ಲಿ ಒಂದು ಓವರ್ ಹೆಡ್ ಟ್ಯಾಂಕ್ ನಿರ್ಮಿಸಿದೆ ಮತ್ತು ೧೬ ಕಿ.ಮೀ. ಉದ್ದದ ನೀರಿನ ಕೊಳವೆ ಸಂಪರ್ಕ ಕಲ್ಪಿಸಿದೆ. ೧೩ ಕೊಳವೆ ಬಾವಿಗಳನ್ನು ಕೊರೆದು ವಿದ್ಯುತ್ ಚಾಲಿತ ಮೋಟಾರುಗಳನ್ನು ಅಳವಡಿಸಿದೆ ಮತ್ತು ೨.೫ ಲಕ್ಷ ಲೀ., ೩.೭೫ ಲಕ್ಷ ಲೀ., ೧೦ ಲಕ್ಷ ಲೀ., ಹಾಗೂ ೫ ಲಕ್ಷ ಲೀಟರ್ ಹೀಗೆ ನಾಲ್ಕು ಓವರ್ ಹೆಡ್ ಟ್ಯಾಂಕುಗಳನ್ನು ೩.೩೩ ಲಕ್ಷ ರೂ.ಗಳಲ್ಲಿ ನಿರ್ಮಿಸಲಾಗಿದೆ. ಜೀವವಿಮಾ ನಿಗಮದಿಂದ ರೂ.೫,೩೦,೦೦೦ಗಳ ಹಣ ಸಹಾಯವು ಪುರಸಭೆಗೆ ನೀರು ಸರಬರಾಜುಗಾಗಿ ೧೯೭೩–೭೪ರಲ್ಲಿ ದೊರೆತಿದೆ. ನಗರದಲ್ಲಿ ೩೦೦ ಸಾರ್ವಜನಿಕ ನಲ್ಲಿಗಳು ಹಾಗೂ ೩,೦೦೦ ಖಾಸಗಿ ನಲ್ಲಿಗಳು ಇವೆ. ದಿನಕ್ಕೆ ೧೦ ಲಕ್ಷ ಲೀ. ನೀರು ಸರಬರಾಜುಗೊಳ್ಳುತ್ತಿದೆ. ತಲಾವಾರು ಪ್ರತಿದಿನ ಸರಬರಾಜುಗೊಳ್ಳುತ್ತಿರುವ ನೀರಿನ ಪ್ರಮಾಣ ೪೦ ಲೀಟರ್ ಆಗಿರುತ್ತದೆ. ೧೯೯೯–೨೦೦೦, ೨೦೦೦–೦೧, ೨೦೦೧–೦೨ ಈ ಸಾಲುಗಳಲ್ಲಿ ನೀರಿನ ತೆರಿಗೆ ರೂಪದಲ್ಲಿ ಸಂದಾಯವಾದ ಹಣ ರೂ.೧,೩೪,೭೬೫, ರೂ.೨,೬೭,೭೧೨ ಹಾಗೂ ೯,೯೦,೦೦೦ ರೂ.ಗಳು ಆಗಿತ್ತು.

**ಜನಾರೋಗ್ಯ ಮತ್ತು ನೈರ್ಮಲ್ಯ**

ಪುರಸಭೆಯ ಕಿರಿಯ ಆರೋಗ್ಯ ನಿರೀಕ್ಷಕರು ನಗರದಲ್ಲಿಯ ಜನನ ಮರಣ ದಾಖಲಾತಿ ಜವಾಬ್ದಾರಿ ನಿರ್ವಹಿಸುತ್ತಾರೆ. ಸಾಂಕ್ರಾಮಿಕಗಳ ನಿಯಂತ್ರಣಕ್ಕೆ ಕ್ರಿಮಿನಾಶಕಗಳ ಸಿಂಪಡಣೆಯಂತಹ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವರು. ಪುರಸಭೆಯು ೫೦ ಜನ ಪೌರಕಾರ್ಮಿಕನ್ನು ನಗರದ ನೈರ್ಮಲ್ಯ ಕಾಪಾಡಲು ನೇಮಕ ಮಾಡಿಕೊಂಡಿರುತ್ತಾರೆ. ಒಳಚರಂಡಿ ಯೋಜನೆಯನ್ನು ಪುರಸಭೆ ಕಾರ್ಯಗತಗೊಳಿಸುತ್ತಿದ್ದು ಇದು ೨೦೦೦-೦೧ರಲ್ಲಿ ಕಾರ್ಯಾರಂಭಗೊಂಡಿದೆ, ಇನ್ನು ಪೂರ್ಣಗೊಂಡಿಲ್ಲ. ಒಟ್ಟು ಯೋಜನಾ ವೆಚ್ಚವು ३೭೪.೮೧ ಲಕ್ಷ ರೂ.ಗಳಾಗಿದ್ದು ಈ ಯೋಜನೆಗೆ ಪುರಸಭೆ ಭರಿಸಿದ ವೆಚ್ಚವು ೯೨,೦೦೦ ರೂ.ಗಳಾಗಿದೆ. ೧೯೯೯-೨೦೦೦ ದಿಂದ ೨೦೦೧-೦೨ರವರೆಗೆ ಹೊರಚರಂಡಿಗಾಗಿ ಮಾಡಿದ ವೆಚ್ಚ ೫ ಲಕ್ಷ ರೂ.ಗಳಾಗಿದೆ. ಹೊರಚರಂಡಿಯ ಉದ್ದ ೫೦೦೦ ಮೀಟರ್ (ಎಲ್ ಮಾದರಿ ಚರಂಡಿ-೨೦೦೦ ಮೀ., ಯು ಮಾದರಿ ಚರಂಡಿ ३೦೦೦ಮೀ.) ಇದೆ.

**ಇತರ ಸೇವೆಗಳು / ಸೌಲಭ್ಯಗಳು**

ಪುರಸಭೆಯು ಒಂದು ಶಿಶುವಿಹಾರವನ್ನು ನಡೆಸುತ್ತಿದೆ. ೧೯೯೯-೨೦೦೦ರಲ್ಲಿ ರೂ.೫೦೦೦, ೨೦೦೧-೨೦೦೨ರಲ್ಲಿ ೯,೦೦೦ ರೂ. ಹಣವನ್ನು ಇದಕ್ಕಾಗಿ ವೆಚ್ಚ ಮಾಡಿದೆ.

ಪುರಸಭೆ ಒಂದು ಉದ್ಯಾನವನ್ನು ೨೦೦೦-೨೦೦೧ರಲ್ಲಿ ರೂ. ೨೭೫ ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಿದ್ದು ಅದರ ವಿಸ್ತೀರ್ಣ ೧ ಎಕರೆ ೧೭ ಗುಂಟೆ ಆಗಿದೆ.

ಪುರಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಜಲ್ಲಿ ಕಲ್ಲಿನ ರಸ್ತೆಯು ೧೦ ಕಿ.ಮೀ. ಟಾರ್ ರಸ್ತೆಯು ೧೨ ಕಿ.ಮೀ. ಹಾಗೂ ಕಾಂಕ್ರೀಟ್ ರಸ್ತೆಯು ೦.३ ಕಿ.ಮೀ. ಇದೆ. ೧೯೫೨ರಲ್ಲಿ ಮೊದಲ ಬಾರಿಗೆ, ಪಟ್ಟಣದಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲಾಯಿತು. ಪ್ರಸ್ತುತ (೨೦೦३-೦೪) ನಗರದಲ್ಲಿಯ ಬೀದಿದೀಪಗಳ ಸಂಖ್ಯೆ ३,೫೦೦; ಮನೆ ಸಂಪರ್ಕಗಳ ಸಂಖ್ಯೆ ೮,೫೦೦ ಹಾಗೂ ವಾಣಿಜ್ಯ ಸಂಪರ್ಕಗಳು ೨೦೦೦ ಆಗಿರುತ್ತದೆ.

ಪುರಸಭೆ ವ್ಯಾಪ್ತಿಯಲ್ಲಿ ಸೇರಿರುವ ಕೊಳಚೆಪ್ರದೇಶಗಳ ಸಂಖ್ಯೆಯು ನಾಲ್ಕು ಆಗಿದ್ದು ಅಲ್ಲಿರುವ ಗುಡಿಸಲುಗಳ ಸಂಖ್ಯೆ ೫೦ ಆಗಿದೆ. ಅಲ್ಲಿನ ಗುಡಿಸಲು ನಿವಾಸಿಗಳ ಸಂಖ್ಯೆ ೪,೮೧೨ ಆಗಿದೆ. ಕೊಳಚೆಪ್ರದೇಶದ ಒಟ್ಟು ವಿಸ್ತೀರ್ಣವು ೧ ಚ.ಕಿ.ಮೀ. ಆಗಿರುತ್ತದೆ.

**ಹಣಕಾಸು**

ಪುರಸಭೆಗೆ ಆಕ್ಟ್ರಾಯ್ ರದ್ದಾಗುವ ಮೊದಲು ೧೯೭೬ರಿಂದ ೧೯೭೮ರ ಮೂರು ವರ್ಷಗಳಲ್ಲಿ ಸಂದಾಯವಾದ ಆಕ್ಟ್ರಾಯ್ ಸುಂಕವು ಕ್ರಮವಾಗಿ ರೂ.೭೮,೦೦೦, ರೂ.೯೦,೦೦೦ ಹಾಗೂ ರೂ.೧,೦೪,೦೦೦ ಆಗಿದ್ದಿತು. ಆಕ್ಟ್ರಾಯ್ ಬದಲಾಗಿ ಸರ್ಕಾರ ನೀಡುತ್ತಿರುವ ಎಸ್.ಎಫ್.ಸಿ (ರಾಜ್ಯ ಹಣಕಾಸು ಆಯೋಗ) ಅನುದಾನವು ಹಾಗೂ ಅಭಿವೃದ್ಧಿ ಅನುದಾನಗಳು ೨೦೦೧-೦೨ರಲ್ಲಿ ಕ್ರಮವಾಗಿ ರೂ.३೭,೦೪,೨೫೬ ಹಾಗೂ ರೂ. ೨೫,೦೦,೦೦೦ ಆಗಿವೆ. ಪುರಸಭೆಯು ಪ್ರತಿ ವರ್ಷ ತನ್ನ ಮುಂಗಡಪತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ/ಪಂಗಡಗಳಿಗಾಗಿ ಶೇ.೧೮ರ ಅಡಿ ಮೀಸಲಿಟ್ಟ ಹಣವು ೧೯೯೯-೨೦೦೦, ೨೦೦೦-೦೧ ಹಾಗೂ ೨೦೦೧-೦೨ಗಳಲ್ಲಿ ಕ್ರಮವಾಗಿ ರೂ.೪,೧३,೦೦೦, ರೂ.೪,೬೦,೦೦೦ ಹಾಗೂ ರೂ.೫,೦೦,೦೦೦ ಆಗಿದೆ. ಖರ್ಚು ಮಾಡಿದ ಹಣವು ಕ್ರಮವಾಗಿ ರೂ.೯,೦೦,೦೦೦, ರೂ.೧,೦३,೪३३ ಹಾಗೂ ೧೦,೫೬೪ ರೂ.ಗಳಾಗಿದೆ.

೧೯೮೪ರಲ್ಲಿ ಪುರಸಭೆ ಕಟ್ಟಡ ನವೀಕರಿಸಿದ್ದು ಅದಕ್ಕೆ ತಗುಲಿದ ವೆಚ್ಚ ೫.೫ ಲಕ್ಷ ರೂ.ಗಳಾಗಿರುತ್ತದೆ.

ಪುರಸಭೆಯು ೨೦೦೦-೦೧ರಲ್ಲಿ ३೦ ಲಕ್ಷ ವೆಚ್ಚದಲ್ಲಿ ೫೪ ಅಂಗಡಿ ಸಂಕೀರ್ಣಗಳನ್ನು ನಿರ್ಮಿಸಿದೆ ಹಾಗೂ ೧೯೫೨ರಲ್ಲಿ ೫೦ ಸಾವಿರ ರೂ. ವೆಚ್ಚದಲ್ಲಿ ಒಂದು ಸಂತೆ ಮೈದಾನ ಸಹ ನಿರ್ಮಿಸಿದೆ.

ಪುರಸಭೆಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಹಣ (ಒಟ್ಟು ಆದಾಯಕ್ಕೆ ಅನುಗುಣವಾಗಿ) ಶೇಕಡಾ ಪ್ರಮಾಣ ೧೯೯೮–೯೯ ಹಾಗೂ ೨೦೦೧–೦೨ರಲ್ಲಿ ಇದ್ದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಶೇಕಡಾವಾರು

| ಕ್ರ.ಸಂ. | ವಿವರ | ೧೯೯೮–೯೯ | ೨೦೦೧–೦೨ |
|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧೨ | ೧೫ |
| ೨ | ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ | ೧೮ | ೨೦ |
| ೩ | ನೀರು ಸರಬರಾಜು | ೧೨ | ೧೦ |
| ೪ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೧೪ | ೧೦ |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೧೭ | ೧೫ |
| ೬ | ಸಿಬ್ಬಂದಿ ಪ್ರಭಾರ | ೨೨ | ೨೫ |
| ೭ | ಇತರೆ | ೬ | ೫ |

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳ ಸಮಗ್ರ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಪುರಸಭೆಯು ಒಳಪಟ್ಟಿದ್ದು, ೧೯೯೫–೯೬ರಲ್ಲಿ ಯೋಜನಾ ಮಂಜೂರಾತಿ ಪಡೆದಿದೆ. ಯೋಜನೆಯ ಮೊತ್ತ ೧೩೩.೯೦ ಲಕ್ಷ ರೂ.ಗಳು. ಅದರ ವಿವರ–ಅಂಗಡಿ ಸಂಕೀರ್ಣ ನಿರ್ಮಾಣಕ್ಕಾಗಿ ೧೦೬.೧೫ ಲಕ್ಷ ರೂ.ಗಳು ರಸ್ತೆ ಹಾಗೂ ಚರಂಡಿಗಳಿಗಾಗಿ ೨೨.೭೫ ಲಕ್ಷ ರೂ.ಗಳು ಹಾಗೂ ಬೀದಿ ದೀಪಗಳಿಗಾಗಿ ೫ ಲಕ್ಷ ರೂ.ಗಳನ್ನು ಪುರಸಭೆ ಖರ್ಚು ಮಾಡಿದೆ. ಸುವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ ಅಡಿ ಆದ ಪ್ರಗತಿ ವಿವರ ಈ ಕೆಳಗಿನಂತಿದೆ. ಬಿಡುಗಡೆಗೊಂಡ ಅನುದಾನ ೧೫,೪೮,೪೮೮ ರೂ.ಗಳು ಖರ್ಚು ಮಾಡಿದ ಅನುದಾನದ ಹಣ ೧,೪೧,೮೯೫ ರೂ.ಗಳು ಆಗಿದೆ. ಅದರಲ್ಲಿ ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ ೪೪ ಹಾಗೂ ಫಲಾನುಭವಿಗಳ ಸಂಖ್ಯೆಯು ೨೪೫ ಆಗಿರುತ್ತದೆ.

**ಕಳೆದ ೫ ವರ್ಷಗಳ ಪುರಸಭೆಯ ಆದಾಯ ಹಾಗೂ ವೆಚ್ಚಗಳ ಪಟ್ಟಿ.**

ಲಕ್ಷ ರೂ.ಗಳಲ್ಲಿ

| ವಿವರಗಳು | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ | ೨೦೦೦–೨೦೦೧ | ೨೦೦೧–೦೨ |
|---|---|---|---|---|---|
| **ಆರಂಭ ಶಿಲ್ಕು** | ೨೪.೨೨ | ೩೨.೧೨ | ೧೮.೧೪ | ೪.೨೩ | ೩.೭೫ |
| **ಜಮಾ** | ೫೦.೬೬ | ೬೯.೬೭ | ೫೧.೭೭ | ೧೧೧.೩೨ | ೯೬.೩೯ |
| **ಒಟ್ಟು** | ೭೪.೮೮ | ೧೦೧.೭೯ | ೬೯.೯೧ | ೧೧೫.೫೫ | ೧೦೦.೧೪ |
| **ಖರ್ಚು** | ೪೨.೭೬ | ೭೨.೭೪ | ೫೨.೮೫ | ೧೧೨.೦೩ | ೯೫.೩೦ |
| **ಅಖೈರು ಶಿಲ್ಕು** | ೩೨.೧೨ | ೨೯.೦೬ | ೧೭.೦೭ | ೩.೫೨ | ೪.೮೪ |

ಮೂಲ: ಪುರಸಭೆ – ಶಿಡ್ಲಘಟ್ಟ

**ಪುರಸಭೆ – ಮುಳಬಾಗಿಲು**

ಮೊದಲ ಬಾರಿಗೆ ೧೯೫೨ರಲ್ಲಿ ಮುಳಬಾಗಿಲು ಪುರಸಭೆ ಸ್ಥಾಪನೆಗೊಂಡಿತು. ಆಗಿನ ಅದರ ಚುನಾಯಿತ ಸದಸ್ಯರ ಸಂಖ್ಯೆಯು ೧೫ ಆಗಿದ್ದಿತು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ೨೦೦೧–೦೨ರಲ್ಲಿ ಚುನಾವಣೆಗಳು ನಡೆದು ೨೩ ಸದಸ್ಯರು ಚುನಾಯಿತರಾದರು ಹಾಗೂ ಅವರಲ್ಲಿ ಐದು ಜನ ನಾಮಕರಣಗೊಂಡ ಸದಸ್ಯರು ಇದ್ದು, ಸದಸ್ಯರ ಹಂಚಿಕೆ ಮೀಸಲು ಸ್ಥಾನ ಸೇರಿದಂತೆ ಈ ಕೆಳಗಿನಂತಿದೆ.

| ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಸಾಮಾನ್ಯ ವರ್ಗ | | ಒಟ್ಟು |
|---|---|---|---|---|---|---|
| ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | |
| ೭ | ೩ | ೨ | ೧ | ೧೧ | ೪ | ೨೮ |

ಪಟ್ಟಣದ ವಿಸ್ತೀರ್ಣವು ೫.೪೫ ಚ.ಕಿ.ಮೀ. ಇದ್ದು ೬,೦೧೧ ಮನೆಗಳನ್ನೊಳಗೊಂಡಿದೆ. ನಗರವನ್ನು ೨೩ ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ೨೦೦೧ರ ಜನಗಣತಿಯಂತೆ ನಗರದ ಜನಸಂಖ್ಯೆ ೪೪,೦೩೩ ಆಗಿತ್ತು. ೧೯೬೬ರಿಂದ ನಗರ ಯೋಜನೆ ಪ್ರಾರಂಭಗೊಂಡಿದ್ದು, ಇದುವರೆಗೂ ಗೃಹಮಂಡಳಿ ಬಡಾವಣೆ ಹೊರತುಪಡಿಸಿ, ಯಾವುದೇ ಹೊಸ ಬಡಾವಣೆಗಳು ನಿರ್ಮಾಣಗೊಂಡಿರುವುದಿಲ್ಲ. ೧೯೭೦ರಲ್ಲಿ ನಿರ್ಮಾಣಗೊಂಡ ಗೃಹಮಂಡಳಿಯ ಬಡಾವಣೆ ೫,೦೦೦ ಚದರ ಅಡಿ ವಿಸ್ತೀರ್ಣದಲ್ಲಿ ಹೊಂದಿದ್ದು ೭ ಮನೆಗಳನ್ನು ಹೊಂದಿದೆ. ಪುರಸಭೆಯು ಈ ಬಡಾವಣೆಗೆ ಚರಂಡಿ, ನೀರು ಹಾಗೂ ಬೀದಿ ದೀಪದ ವ್ಯವಸ್ಥೆ ಒದಗಿಸಿರುತ್ತದೆ.

**ನೀರು ಸರುಬರಾಜು:** ಬಹಳ ಹಿಂದಿನಿಂದಲೂ ಪಟ್ಟಣಕ್ಕೆ ಸೇದುವ ಬಾವಿಗಳಿಂದ ನೀರು ಸರುಬರಾಜುಗೊಳ್ಳುತ್ತಿತ್ತು. ಆದರೆ ಈಗ ಕೊಳವೆಬಾವಿಗಳಿಂದ ನೀರು ಸರಬರಾಜುಗೊಳ್ಳುತ್ತಿದೆ. ಪಟ್ಟಣದಲ್ಲಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಸೀಗೇನಹಳ್ಳಿ, ಬೈಪಾಸ್ ಸೋಮೇಶ್ವರಪಾಳ್ಯಗಳಲ್ಲಿ ಬೋರ್‌ಗಳನ್ನು ಹಾಕಿ ನೀರು ಪೂರೈಕೆ ಮಾಡಲಾಗುತ್ತಿದೆ. ೨೧,೩೭,೫೦೦ ಲೀಟರ್ ಸಾಮರ್ಥ್ಯದ ಒಟ್ಟು ೫ ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಿ ನೀರು ಸಂಗ್ರಹಿಸಿ ಪಟ್ಟಣಕ್ಕೆ ಪೂರೈಸಲಾಗುತ್ತಿದೆ. ಪ್ರಸ್ತುತ ಪಟ್ಟಣದಲ್ಲಿ ೬೫೦ ಸಾರ್ವಜನಿಕ ನಲ್ಲಿಗಳು ಹಾಗೂ ೨,೨೦೦ ಖಾಸಗಿ ನಲ್ಲಿಗಳು ಇವೆ. ೨.೫೦ ಲಕ್ಷ ಗ್ಯಾಲನ್ ನೀರು ಸರುಬರಾಜು ಮಾಡಲಾಗುತ್ತಿದ್ದು ತಲಾವಾರು ದಿನನಿತ್ಯ ಸರಬರಾಜುಗೊಳ್ಳುವ ನೀರಿನ ಪ್ರಮಾಣ ೪೫ ಲೀ. ಆಗಿರುತ್ತದೆ. ಕಳೆದ ಮೂರು ವರ್ಷಗಳು ೨೦೦೦-೦೧, ೨೦೦೧-೦೨ ಹಾಗೂ ೨೦೦೨-೦೩ಗಳಲ್ಲಿ ನೀರಿನ ಸರುಬರಾಜಿಗಾಗಿ ಪುರಸಭೆ ಮಾಡಿದ ವೆಚ್ಚವು ಕ್ರಮವಾಗಿ ರೂ.೨,೮೭,೧೬೩, ರೂ.೩,೪೮,೮೯೬ ಹಾಗೂ ರೂ.೩,೬೧,೮೦೦ ಆಗಿರುತ್ತದೆ.

### ಜನಾರೋಗ್ಯ ಮತ್ತು ನೈರ್ಮಲ್ಯ

ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮವಾಗಿ ಕ್ರಿಮಿನಾಶಕಗಳ ಸಿಂಪಡಣೆ, ಜನನ ಮರಣ ದಾಖಲೆಗಳ ಉಸ್ತುವಾರಿಯನ್ನು ಕಿರಿಯ ಆರೋಗ್ಯ ನಿರೀಕ್ಷಕರು ನಿರ್ವಹಿಸುವರು. ಪುರಸಭೆ ೪೦ ಪೌರಕಾರ್ಮಿಕರನ್ನು ನಗರದ ನೈರ್ಮಲ್ಯ ಕಾಪಾಡಲು ನೇಮಕ ಮಾಡಿಕೊಂಡಿದ್ದ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡ ೨೦ ಮಂದಿ ಪೌರಕಾರ್ಮಿಕ ಸಿಬ್ಬಂದಿ ಸಹ ಇದೆ.

### ಇತರ ಸೌಲಭ್ಯಗಳು

ಪುರಸಭೆಯು ಸಾರ್ವಜನಿಕ ಸೌಕರ್ಯಕ್ಕಾಗಿ ೨ ಉದ್ಯಾನಗಳನ್ನು ನಿರ್ಮಿಸಿದ್ದು ಅವುಗಳ ವಿಸ್ತೀರ್ಣಗಳು ಕ್ರಮವಾಗಿ ೧೫,೦೦೦ ಚದರ ಅಡಿ ಹಾಗೂ ೪೫,೦೦೦ ಚದರ ಅಡಿಗಳಾಗಿವೆ. ಪುರಸಭೆಯ ವ್ಯಾಪ್ತಿ ಒಳಗೆ ಇರುವ ಟಾರ್ ರಸ್ತೆ ೨೫ ಕಿ.ಮೀ. ಹಾಗೂ ಜಲ್ಲಿ ರಸ್ತೆ ೩೮ ಕಿ.ಮೀ. ಆಗಿರುತ್ತದೆ. ಮೊದಲ ಬಾರಿಗೆ ೧೯೩೨ರಲ್ಲಿ ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ದೊರೆಯಿತು. ಪಟ್ಟಣದಲ್ಲಿ ಮನೆ ದೀಪಗಳ ಸಂಖ್ಯೆ ೨,೯೭೬ ಹಾಗೂ ಬೀದಿ ದೀಪಗಳ ಸಂಖ್ಯೆ ೨,೦೦೦ ಮತ್ತು ವಾಣಿಜ್ಯ ಸಂಪರ್ಕಗಳು ೨,೦೨೫ ಆಗಿರುತ್ತದೆ. ಪುರಸಭೆ ವ್ಯಾಪ್ತಿಯಲ್ಲಿ ೫ ಚ.ಕಿ.ಮೀ. ವಿಸ್ತೀರ್ಣದಲ್ಲಿ ೧೬ ಕೊಳಚೆಪ್ರದೇಶಗಳು ಇದ್ದು, ೨೧೦ ಗುಡಿಸಲುಗಳನ್ನು ಇವು ಹೊಂದಿವೆ. ಈ ಪ್ರದೇಶಗಳಲ್ಲಿ ೧೨,೮೦೦ ಜನ ವಾಸಿಸುತ್ತಿದ್ದಾರೆ

### ಹಣಕಾಸು

ಪುರಸಭೆಯ ಪ್ರಮುಖ ಆದಾಯವಾದ ಆಕ್ಟ್ರಾಯ್ ರದ್ದಾದ ನಂತರ ಇತ್ತೀಚೆಗೆ ೨೦೦೦-೦೧, ೨೦೦೧-೦೨ ಮತ್ತು ೨೦೦೨-೦೩ ಈ ಮೂರು ವರ್ಷಗಳಲ್ಲಿ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಮೇರೆಗೆ ಪುರಸಭೆಯು ಸರ್ಕಾರದಿಂದ

ಪಡೆದ ಜಕಾತಿ ಅನುದಾನವು ಕ್ರಮವಾಗಿ ರೂ.೪೬,೬೮,೧೬೩, ರೂ.೪೮,೯೦,೮೫೭ ಹಾಗೂ ರೂ.೪೧,೯೧,೭೧೩ ಆಗಿದೆ. ಇದಲ್ಲದೆ ಪುರಸಭೆಗೆ ೨೦೦೧–೦೨ ದೊರೆತ ಅಭಿವೃದ್ಧಿ ಅನುದಾನವು ೨,೫೦,೦೦೦ ರೂ.ಗಳಾಗಿವೆ.

ಪುರಸಭೆ ಮುಂಗಡಪತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಾಗಿ ಮೀಸಲಿಟ್ಟ ಹಣ (ಶೇ.೧೮) ಹಾಗೂ ಇತ್ತೀಚಿನ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

(ರೂ.ಗಳಲ್ಲಿ)

| ವರ್ಷ | ಕಾಯ್ದಿರಿಸಿದ ಹಣ | ಖರ್ಚು ಮಾಡಿದ ಹಣ |
|---|---|---|
| ೨೦೦೦–೦೧ | ೩,೬೯,೨೧೪ | ೫೨,೩೯೬ |
| ೨೦೦೧–೦೨ | ೪,೦೧,೮೧೮ | ೧೪,೨೨೫ |
| ೨೦೦೨–೦೩ | ೫,೩೭,೫೯೩ | ೪,೪೭,೩೮೧ |

ಪುರಸಭೆಯು ೩೨.೨೦ ಲಕ್ಷ ರೂ. ವೆಚ್ಚದಲ್ಲಿ ೬೦ ಅಂಗಡಿಗಳ ಸಂಕೀರ್ಣವನ್ನು ನಿರ್ಮಿಸಿದೆ.

ಪುರಸಭೆಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಹಣದ ಮೊತ್ತ ಶೇಕಡಾ ಪ್ರಮಾಣ (ಒಟ್ಟು ಆದಾಯಕ್ಕನುಗುಣವಾಗಿ) ೧೯೯೮–೯೯ ಹಾಗೂ ೨೦೦೧–೦೨ ಸಾಲಿಗೆ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಶೇಕಡಾವಾರು

| ಕ್ರ.ಸಂ. | ವಿವರ | ೧೯೯೮–೯೯ | ೨೦೦೧–೨೦೦೨ |
|---|---|---|---|
| ೧ | **ಜನಾರೋಗ್ಯ ಮತ್ತು ನೈರ್ಮಲ್ಯ** | ೨೮.೨೩ | ೨೮.೧೫ |
| ೨ | **ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ** | ೧೦.೦೦ | ೧೧.೮೮ |
| ೩ | **ನೀರು ಸರಬರಾಜು** | ೧೫.೦೦ | ೧೪.೬೦ |
| ೪ | **ರಸ್ತೆ ಮತ್ತು ದೀಪ ನಿರ್ವಹಣೆ** | ೨.೧೦ | ೬.೨೮ |
| ೫ | **ಸಿಬ್ಬಂದಿ ಪ್ರಭಾರ** | ೨೩.೯೪ | ೨೫.೯೧ |
| ೬ | **ಇತರೆ** | ೧೧.೯೦ | ೨೩.೫೭ |

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳ ಸಮಗ್ರ ಯೋಜನೆ ೧೯೯೬–೯೭ ಪ್ರಾರಂಭಗೊಂಡಿತು. ಯೋಜನೆಯ ಒಟ್ಟು ಮೊತ್ತ ೧೮೬.೩೦ ಲಕ್ಷ ರೂ.ಗಳು.

ಪುರಸಭೆಯು ೧೯೯೬–೯೭ರಲ್ಲಿ ೧೪.೪೦ ಲಕ್ಷ ರೂ.ಗಳಲ್ಲಿ ಮಾಂಸದ ಮಾರುಕಟ್ಟೆ ನಿರ್ಮಾಣ ಮಾಡಿದೆ. ೧೯೯೯–೨೦೦೦, ೧೯೯೬–೯೭ರಲ್ಲಿ ೯.೧೦ ಲಕ್ಷ ರೂ.ಗಳಲ್ಲಿ ತರಕಾರಿ ಮಾರುಕಟ್ಟೆ ಹಾಗೂ ೨೦೦೦–೨೦೦೧ ರಲ್ಲಿ ೩೫.೭೧ ಲಕ್ಷ ರೂ.ಗಳಲ್ಲಿ ಚರಂಡಿ ಮತ್ತು ರಸ್ತೆಗಳ ನಿರ್ಮಾಣ ಕಾರ್ಯವನ್ನು ಸಹ ಕೈಗೊಂಡಿದೆ.

ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ೨೦೦೩ನೇ ಮಾರ್ಚ್ ಮಾಹೆ ಅಂತ್ಯದವರೆಗೆ ಪುರಸಭೆಯು ಖರ್ಚು ಮಾಡಿದ ಹಣದ ವಿವರ.

ಈ ಕೆಳಗಿನ ೧೯೯೮–೯೯ ರಿಂದ ೨೦೦೧–೦೨ರವರೆಗಿನ ಐದು ವರ್ಷಗಳಲ್ಲಿ ಪುರಸಭೆಯ ಆದಾಯ ವೆಚ್ಚಗಳ ವಿವರ ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

(ರೂ.ಗಳಲ್ಲಿ)

| ವಿವರ | ೧೯೯೮–೯೯ | ೧೯೯೯–೨೦೦೦ | ೨೦೦೦–೦೧ | ೨೦೦೧–೦೨ | ೨೦೦೨–೦೩ |
|---|---|---|---|---|---|
| ಪ್ರಾರಂಭ ಶಿಲ್ಕು | ೨೦,೧೦,೨೧೧ | ೧೮,೨೦,೦೭೩ | ೩೭,೯೩,೧೨೫ | ೨೯,೫೮,೫೦೪ | ೬೩,೭೬,೦೮೦ |
| ಜಮಾ | ೫೯,೨೩,೬೧೦ | ೮೯,೬೩,೩೪೧ | ೭೯,೭೧,೫೭೮ | ೧೦೯,೫೪,೬೩೭ | ೧೨೯,೬೭,೯೨೫ |
| ಒಟ್ಟು | ೭೯,೩೩,೮೨೧ | ೧೦,೭೮,೩೪೧೪ | ೧೧,೭೬,೪೭೦೩ | ೧೩೯,೧೩,೧೪೧ | ೧೯೩,೪೪,೦೦೫ |
| ಖರ್ಚು | ೬೧,೧೩,೭೪೮ | ೬೩,೬೯,೩೬೫ | ೮,೮೦,೬೧೯೯ | ೧೦೦,೩೪,೮೮೭ | ೧೩೩,೮೭,೨೩೨ |
| ಅಖೈರು ಶಿಲ್ಕು | ೧೮,೨೦,೦೭೩ | ೪೪,೧೪,೦೯೪ | ೨೯,೫೮,೫೦೪ | ೩೮,೭೮,೨೫೪ | ೫೯,೫೬,೭೭೩ |

ಮೂಲ: ಪುರಸಭೆ – ಮುಳಬಾಗಿಲು

ಮುಳಬಾಗಿಲು ಪುರಸಭೆಯ ಸ್ವರ್ಣಜಯಂತಿ ಶಹರಿ ರೋಜ್ಗಾರ್ ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ೨೦೦೩ನೇ ಮಾರ್ಚ್ ಮಾಹೆಯ ಅಂತ್ಯದವರೆಗೂ ಖರ್ಚು ಮಾಡಿದ ವಿವರಣಾತ್ಮಕ ತಃಖ್ತೆ

| ಕ್ರ.ಸಂ. | ಉಪಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ ರೂ.ಗಳಲ್ಲಿ | ಖರ್ಚಾದ ಅನುದಾನ ರೂ.ಗಳಲ್ಲಿ | ಉಳಿಕೆ ರೂ.ಗಳಲ್ಲಿ | ಫಲಾನುಭವಿಗಳ ಕಾಮಗಾರಿಗಳ ಸಂಖ್ಯೆ |
|---|---|---|---|---|---|
| ೧ | ಸಣ್ಣ ಉದ್ದಿಮೆ | ೨,೨೭,೫೦೦ | ೨,೨೭,೫೦೦ | – | ೮೨ |
| ೨ | ಡ್ವಾಕ್ವಾ ಯೋಜನೆ | ೨,೨೫,೦೦೦ | ೨,೨೫,೦೦೦ | – | ೫೦ |
| ೩ | ತರಬೇತಿ ಕಾರ್ಯಕ್ರಮ | ೨,೩೬,೫೪೧ | ೨,೦೪,೦೦೦ | ೩೨,೫೪೧ | ೯೦ |
| ೪ | ಸಮುದಾಯ ಭವನ | ೫,೦೦,೦೦೦ | ೫,೦೦,೦೦೦ | – | ೧ |
| ೫ | ನಗರವೇತನಾಧಾರಿತ ಕಾರ್ಯಕ್ರಮ | ೭,೪೬,೬೦೫ | ೬,೫೦,೦೦೦ | ೯೬,೬೦೫ | ೩೮ |
| ೬ | ಸಾಮಾಜಿಕ ಸೇವೆಗಳು | ೧,೪೬,೫೫೨ | ೧,೧೬,೨೬೫ | ೩೦,೨೮೭ | ೧೪೨೫ |
| ೭ | ಬಾಲಿಕ ಅಭಿವೃದ್ಧಿ ಯೋಜನೆ | ೬೨,೫೦೦ | ೬೨,೫೦೦ | – | ೧೨೫ |
| ೮ | ಆಡಳಿತ ವೆಚ್ಚ | ೬,೨೬,೧೩೬ | ೬,೨೪,೮೪೬ | ೧,೨೯೦ | – |
| | ಒಟ್ಟು | ೨೯,೨೪,೮೩೪ | ೨೭,೬೪,೧೧೧ | ೧,೬೦,೭೨೩ | |

ಮೂಲ: ಪುರಸಭೆ – ಮುಳಬಾಗಿಲು

**ಪುರಸಭೆ – ಗೌರಿಬಿದನೂರು**

ಮೊಟ್ಟಮೊದಲ ಬಾರಿಗೆ ಗೌರಿಬಿದನೂರು ಪುರಸಭೆಯು ೧೯೪೧ರಲ್ಲಿ ಸ್ಥಾಪನೆಗೊಂಡಿತು. ಅಂದಿನ ಪುರಸಭೆಯು ೧೫ ಜನ ಚುನಾಯಿತ ಸದಸ್ಯರನ್ನು ಹೊಂದಿತ್ತು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ (೨೦೦೦–೨೦೦೧) ಚುನಾವಣೆಗಳು ನಡೆದು ೨೩ ಜನ ಸದಸ್ಯರು ಚುನಾಯಿತರಾದರು. ಮೀಸಲಾತಿ ಸ್ಥಾನಗಳೊಂದಿಗೆ ಸದಸ್ಯರ ಹಂಚಿಕೆ ಈ ಕೆಳಗಿನಂತಿದೆ.

ಹಿಂದುಳಿದ ವರ್ಗ– ಗಂ–೪ ಹೆ–೩; ಪರಿಶಿಷ್ಟ ಜಾತಿ – ಗಂ–೨, ಹೆ–೧; ಸಾಮಾನ್ಯ ವರ್ಗ– ಗಂ–೬, ಹೆ–೫; ಪರಿಶಿಷ್ಟ ಪಂಗಡ – ಗಂ–೧, ಹೆ–೧, ಒಟ್ಟು ೨೩.

(೨೦೦೧-೦೨)ರಲ್ಲಿ ಪುರಸಭೆಯ ಕ್ಷೇತ್ರವ್ಯಾಪ್ತಿಯು ೯ ಚದರ ಕಿ.ಮೀ.ಆಗಿದ್ದು, ಜನಸಂಖ್ಯೆ ೩೦,೫೩೭ ಇದ್ದು ೫,೫೬೫ ಮನೆಗಳನ್ನು ಹೊಂದಿದೆ. ನಗರವನ್ನು ೨೩ ವಾರ್ಡ್‌ಗಳಾಗಿ ವಿಭಾಗಿಸಲಾಗಿದೆ. ಪುರಸಭೆಯು ನಗರ ಯೋಜನೆಗೆ ಒಳಪಟ್ಟಿದ್ದು, ೮ ಬಡಾವಣೆಗಳು ನಿರ್ಮಾಣವಾಗಿದ್ದು ಅವುಗಳು ಅಬ್ದುಲ್ ಪರೂಕ ಬಡಾವಣೆ, ಕೆ.ಎಲ್.ರಾಘವೇಂದ್ರ ಗುಪ್ತ (೩) ಬಡಾವಣೆಗಳು, ಕೆ.ಆರ್.ನಟೇಶ್ ಬಡಾವಣೆ, ಕೆ.ಆರ್.ಸುರೇಶ ಬಡಾವಣೆ, ಗಂಗಮ್ಮ ಬಡಾವಣೆ ಹಾಗೂ ಅಭಿಲಾಷಾ ಲೇಔಟ್ ಇವುಗಳಲ್ಲಿಯ ಒಟ್ಟು ಮನೆಗಳ ಸಂಖ್ಯೆ ೫೦ ಆಗಿದೆ. ಗೃಹಮಂಡಳಿಯ ಬಡಾವಣೆ ೧೯೮೭ರಲ್ಲಿ ೨,೧೭,೮೦೦ ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣವಾಗಿದ್ದು ಇದು ೨೨ ಮನೆಗಳನ್ನು ಹೊಂದಿದೆ. ಈ ಬಡಾವಣೆಗೆ ಪುರಸಭೆಯಿಂದ ಬೀದಿದೀಪ, ರಸ್ತೆ ಚರಂಡಿ ಹಾಗೂ ನೀರಿನ ಸೌಲಭ್ಯ ಒದಗಿಸಲಾಗಿದೆ.

**ನೀರು ಸರಬರಾಜು:** ಬಹಳ ಹಿಂದಿನಿಂದಲೂ ಸೇದುವ ಬಾವಿಗಳಿಂದ ಪಟ್ಟಣವು ನೀರನ್ನು ಪಡೆಯುತ್ತಿತ್ತು. ಈಗ ಕೊಳವೆಬಾವಿಗಳನ್ನು ಕೊರೆದು ಅವುಗಳಿಂದ ನೀರಿನ ಸರಬರಾಜು ವ್ಯವಸ್ಥೆ ಮಾಡಲಾಗಿದೆ. ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಕಲ್ಪಿಸಲು ಉತ್ತರ ಪಿನಾಕಿನಿ ಕಿಂಡಿ ಅಣೆಕಟ್ಟಿನ ಹತ್ತಿರದಲ್ಲಿ ತೆರೆದ ಬಾವಿಗಳನ್ನು ನಿರ್ಮಿಸಿ ನೀರನ್ನು ಪಂಪ್ ಮೂಲಕ ಪೂರೈಸುವ ಕ್ರಮ ಕೈಗೊಳ್ಳಲಾಗುತ್ತಿದೆ. ಯೋಜನೆಯ ಅಂದಾಜು ವೆಚ್ಚ ಇನ್ನೂ ಲಭ್ಯವಿಲ್ಲ. ಪಟ್ಟಣದಲ್ಲಿ ೧೫,೦೦೦, ೪೦,೦೦೦ ೭೫,೦೦೦ ಹಾಗೂ ೨೫,೦೦೦ ಗ್ಯಾಲನ್ ಸಾಮರ್ಥ್ಯದ ನಾಲ್ಕು ಓವರ್ ಹೆಡ್ ಸಂಗ್ರಾಹಕಗಳು ಇವೆ.

ಈಗ ದಿನನಿತ್ಯ ೧.೯೦ ಲಕ್ಷ ಗ್ಯಾಲನ್ ನೀರನ್ನು ನಗರಕ್ಕೆ ಒದಗಿಸುತ್ತಿದ್ದು, ನೀರಿನ ತಲಾವಾರು ಹಂಚಿಕೆ ೪೫ ಲೀಟರ್ ಆಗಿರುತ್ತದೆ. ನಗರದಲ್ಲಿರುವ ಸಾರ್ವಜನಿಕ ನಲ್ಲಿಗಳ ಸಂಖ್ಯೆ ೨೦೦ ಹಾಗೂ ಖಾಸಗಿ ನಲ್ಲಿಗಳ ಸಂಖ್ಯೆ ೧,೮೫೦ ಆಗಿರುತ್ತದೆ.

೨೦೦೧-೦೨ನೇ ಸಾಲಿನಲ್ಲಿ ನೀರು ಸರಬರಾಜುಗಾಗಿ ಮಾಡಿದ ವೆಚ್ಚವು ೪,೧೪,೨೨೧ ರೂ.ಗಳು ಹಾಗೂ ತೆರಿಗೆಯ ರೂಪದಲ್ಲಿ ಸಂದಾಯವಾದ ಹಣವು ೨೦೦೦-೨೦೦೧, ೨೦೦೧-೦೨, ೨೦೦೨-೦೩ರಲ್ಲಿ ಕ್ರಮವಾಗಿ ರೂ.೯,೬೧,೯೮, ರೂ.೧೨,೧೯,೯೬೯ ರೂ. ಹಾಗೂ ೯,೭೧,೫೩೦ ರೂ.ಗಳು ಆಗಿರುತ್ತದೆ.

**ಜನಾರೋಗ್ಯ ಮತ್ತು ನೈರ್ಮಲ್ಯ:** ಪುರಸಭೆಯು ೩೭ ಜನ ಪೌರಕಾರ್ಮಿಕರನ್ನು ನಗರ ನೈರ್ಮಲ್ಯಕ್ಕಾಗಿ ನೇಮಕ ಮಾಡಿಕೊಂಡಿದೆ. ನಗರದಲ್ಲಿ ಸಾಂಕ್ರಾಮಿಕ ರೋಗಗಳ ತಡೆಗೆ ಕ್ರಿಮಿನಾಶಕ ಸಿಂಪಡಣಾ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಕಿರಿಯ ಆರೋಗ್ಯ ನಿರೀಕ್ಷಕರು ಜನನ, ಮರಣಗಳ ದಾಖಲಾತಿಯನ್ನು ನಿರ್ವಹಿಸುತ್ತಾರೆ. ಪುರಸಭೆಯು ನಗರದಲ್ಲಿ ‘ಎಲ್’ ಮಾದರಿಯ ೨,೨೦೦ ಮೀ. ಹಾಗೂ ಯು ಮಾದರಿಯ ೪,೦೦೦ ಮೀ ಉದ್ದದ ಚರಂಡಿಯನ್ನು ನಿರ್ಮಿಸಿದೆ.

## ಇತರ ಸೌಲಭ್ಯಗಳು

ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ಪುರಸಭೆಯು ೧೯೯೯-೨೦೦೦, ೨೦೦೦-೨೦೦೧ ಹಾಗೂ ೨೦೦೧-೨೦೦೨ನೇ ಸಾಲುಗಳಲ್ಲಿ ಕ್ರಮವಾಗಿ ರೂ.೫,೦೦೦, ರೂ.೬,೦೦೦ ಹಾಗೂ ರೂ.೧೦,೦೦೦ಗಳನ್ನು ಅನುದಾನವಾಗಿ ಕೊಟ್ಟಿದೆ. ಪುರಸಭೆಯ ವ್ಯಾಪ್ತಿಯಲ್ಲಿ ಎರಡು ಉದ್ಯಾನಗಳು ಇದ್ದು ಅವು ಕ್ರಮವಾಗಿ ೮೦’ x ೮೦’ ಹಾಗೂ ೬೦’ x ೬೦’ ವಿಸ್ತೀರ್ಣ ಹೊಂದಿವೆ. ಎಂ.ಎಲ್.ಎ. ಅನುದಾನದಿಂದ ಒಂದು ಉದ್ಯಾನವು ನಿರ್ಮಾಣಗೊಂಡಿದೆ.

ಪುರಸಭೆಯ ವ್ಯಾಪ್ತಿಯಲ್ಲಿ ೩೦ ಕಿ.ಮೀ. ಜಲ್ಲಿ ರಸ್ತೆ, ೨೦ ಕಿ.ಮೀ. ಟಾರ್ ರಸ್ತೆ ಹಾಗೂ ಒಂದು ಕಿ.ಮೀ. ಸಿಮೆಂಟ್ ಕಾಂಕ್ರೀಟ್ ರಸ್ತೆಗಳು ಇದೆ. ಪಟ್ಟಣಕ್ಕೆ ೧೯೫೨ರಲ್ಲಿ ಕೆ.ಇ.ಬಿಯಿಂದ ವಿದ್ಯುತ್ ಪೂರೈಕೆ ಆಗುತ್ತಿದೆ. ೨೦೦೧-೨೦೦೨ರಲ್ಲಿ ಪಟ್ಟಣದಲ್ಲಿಯ ಮನೆ ದೀಪ ಸಂಪರ್ಕ ಸಂಖ್ಯೆ ೫,೫೬೫, ಬೀದಿದೀಪಗಳು ೩,೦೦೦ ಹಾಗೂ ವಾಣಿಜ್ಯ ಸಂಪರ್ಕಗಳು ೬೯೦ ಇರುತ್ತವೆ.

ಪುರಸಭೆಯ ಎರಡು ಕಿ.ಮೀ. ವ್ಯಾಪ್ತಿಯಲ್ಲಿ ಐದು ಕೊಳಚೆಪ್ರದೇಶಗಳು ಇವೆ ಹಾಗೂ ಅಲ್ಲಿನ ಗುಡಿಸಲುಗಳ ಸಂಖ್ಯೆ ೭೫ ಆಗಿದ್ದು, ನಿವಾಸಿಗಳ ಸಂಖ್ಯೆ ೮,೩೪೦ ಆಗಿರುತ್ತದೆ.

**ಹಣಕಾಸು**

ಆಕ್ಟ್ರಾಯ್ ರದ್ದಾದ ಮೇಲೆ ಸರ್ಕಾರವು ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಅನುಸಾರ ಆಕ್ಟ್ರಾಯ್ ಅನುದಾನವನ್ನು ನೀಡುತ್ತಿವೆ. ೨೦೦೦–೦೧, ೨೦೦೧–೦೨ ಹಾಗೂ ೨೦೦೨–೦೩ ಸಾಲಿನಲ್ಲಿ ಕ್ರಮವಾಗಿ ರೂ.೫೨,೨೯,೭೯, ರೂ.೪೫,೨೨,೭೪೬, ರೂ.೩೭,೭೮,೧೮೪ಗಳನ್ನು ಪುರಸಭೆ ಪಡೆದಿದೆ. ಇದಲ್ಲದೆ ಸರ್ಕಾರವು ಅಭಿವೃದ್ಧಿ ಅನುದಾನವಾಗಿ, ೨೦೦೦–೦೧ರಲ್ಲಿ ೭,೫೦,೦೦೦ ರೂ.ಗಳನ್ನು ನೀಡಿದೆ. ಪುರಸಭೆಯು ತನ್ನ ಮುಂಗಡಪತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಿಟ್ಟ ಶೇ.೧೮ರ ಹಣ, ೨೦೦೦–೦೧, ೨೦೦೧–೦೨, ೨೦೦೨–೦೩ ಸಾಲಿನಲ್ಲಿ ಕ್ರಮವಾಗಿ ರೂ.೪,೮೦,೦೬೦, ರೂ. ೫,೦೦,೦೦೦ ಹಾಗೂ ರೂ.೯,೦೦,೦೦೦ ಆಗಿದ್ದು ಅದೇ ಸಾಲುಗಳಲ್ಲಿ ಪುರಸಭೆಯು ಖರ್ಚು ಮಾಡಿದ ಹಣವು ಕ್ರಮವಾಗಿ ರೂ.೨,೬೩,೫೯೦, ರೂ.೪,೮೩,೫೪೫ ಮತ್ತು ರೂ.೩,೬೦,೮೨೪ ಗಳಾಗಿರುತ್ತದೆ. ಹೊಸದಾಗಿ ಪುರಸಭೆಯು ೨೦೦೦–೦೧ರಲ್ಲಿ ೧೧.೫ ಲಕ್ಷ ರೂ. ಗಳಲ್ಲಿ ಪುರಸಭೆಯ ಕೌನ್ಸಿಲ್ ಹಾಲ್ ಕಟ್ಟಡವನ್ನು ನಿರ್ಮಾಣ ಮಾಡಿದೆ. ೨೦೦೧–೦೨ರಲ್ಲಿ ೧೩.೫ ಲಕ್ಷ ರೂ. ವೆಚ್ಚದಲ್ಲಿ ೧೨ ಮಾರುಕಟ್ಟೆಗಳ ನಿರ್ಮಾಣ ಹಾಗೂ ೨.೧೫ ಲಕ್ಷ ರೂ.ಗಳಲ್ಲಿ ೮ ಮಾಂಸದ ಅಂಗಡಿಗಳನ್ನು ನಿರ್ಮಾಣ ಮಾಡಿದೆ.

ಪುರಸಭೆಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ (ಒಟ್ಟು ಆದಾಯಕ್ಕನುಗುಣವಾಗಿ) ಮಾಡಿದ ಹಣದ ೧೯೯೮–೯೯ ಹಾಗೂ ೨೦೦೧–೦೨ ರ ಸಾಲಿನ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಿದೆ. ಶೇಕಡಾವಾರು

| ಕ್ರ.ಸಂ. | ವಿವರ | ೧೯೯೮–೯೯ | ೨೦೦೧–೨೦೦೨ |
|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧೦ | ೧೦ |
| ೨ | ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ | ೨೦ | ೨೫ |
| ೩ | ನೀರು ಸರಬರಾಜು | ೧೫ | ೧೫ |
| ೪ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೨೦ | ೧೦ |
| ೫ | ಚರಂಡಿ ಮತ್ತು ಸಾಂಕ್ರಾಮಿಕಗಳ ನಿಯಂತ್ರಣ | ೧೦ | ೧೫ |
| ೬ | ಸಿಬ್ಬಂದಿ ಪ್ರಭಾರ | ೨೦ | ೨೫ |
| ೭ | ಇತರೆ | ೯ | ೦೫ |

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ವರ್ಗದ ನಗರಗಳ ಸಮಗ್ರ ಅಭಿವೃದ್ಧಿ ಯೋಜನೆಯು ೧೯೯೩–೯೪ರಲ್ಲಿ ಮಂಜೂರಾಗಿದ್ದು ಯೋಜನೆಯ ಮೊತ್ತವು ೧೪೧.೯೫ ಲಕ್ಷ ಆಗಿದ್ದು, ಆ ಪೈಕಿ ಅಂಗಡಿ ಸಂಕೀರ್ಣಗಳಿಗಾಗಿ ೩೯.೪೧ ಲಕ್ಷ ರೂ.ಗಳು ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕಾಗಿ ೫೩.೨೧ ಲಕ್ಷ ರೂ.ಗಳು, ನಿವೇಶನಗಳ ಅಭಿವೃದ್ಧಿಗಾಗಿ ೪೭.೨೩ ಲಕ್ಷ ರೂ.ಗಳು ಹಾಗೂ ಇತರೆ ರೂ.೨ ಲಕ್ಷಗಳನ್ನು ಪುರಸಭೆಯು ಹಂಚಿಕೆ ಮಾಡಿದೆ. ಎಸ್.ಜಿ.ಎಸ್.ಆರ್‌ವೈ ಸ್ವರ್ಣ ಜಯಂತಿ ಶಹರಿ ರೋಜ್ಗಾರ್ ಯೋಜನೆಯಡಿಯಲ್ಲಿ ಯೋಜನೆಗಳಿಗೆ ಖರ್ಚಾದ ಹಣ ಹಾಗೂ ಫಲಾನುಭವಿಗಳ ಸಂಖ್ಯೆ ಈ ಕೆಳಗೆ ನೀಡಿದೆ.

| ಕ್ರ.ಸಂ. | ಉಪಯೋಜನೆಯ ಹೆಸರು | ಬಿಡುಗಡೆಯಾದ ಹಣ (ರೂ.ಗಳಲ್ಲಿ) | ಖರ್ಚಾದ ಹಣ (ರೂ.ಗಳಲ್ಲಿ) | ಫಲಾನುಭವಿ / ಕಾಮಗಾರಿ ಸಂಖ್ಯೆ |
|---|---|---|---|---|
| ೧ | ಸಣ್ಣ ಉದ್ದಿಮೆ | ೨,೫೮,೫೦೦ | ೨,೪೫,೫೦೦ | ೮೭ |
| ೨ | ಡ್ವಾಕ್ವಾ | ೨,೭೫,೦೦೦ | ೨,೨೫,೦೦೦ | ೧೬೦ |
| ೩ | ತರಬೇತಿ ಕಾರ್ಯಕ್ರಮ | ೩,೧೮,೯೭೭ | ೨,೯೪,೩೨೫ | ೧೩೫ |
| ೪ | ನಗರ ಕೂಲಿ ಉದ್ಯೋಗ | ೭,೦೩,೭೬೩ | ೬,೫೦,೦೦೦ | ೨,೯೮ |
| ೫ | ಸಾಮಾಜಿಕ ಸೇವೆಗಳು | ೧,೬೨,೮೪೯ | ೧,೧೫,೧೫೮ | ೧,೪೪೩ |
| | ಒಟ್ಟು | ೧೭,೧೯,೦೮೯ | ೧೫,೨೯,೯೮೩ | ೪,೮೩ |

ಮೂಲ: ಪುರಸಭೆ ಗೌರಿಬಿದನೂರು

**ಪುರಸಭೆಯ ಕಳೆದ ಐದು ವರ್ಷಗಳ ಆದಾಯ– ವೆಚ್ಚದ ವಿವರ.**

ರೂ.ಗಳಲ್ಲಿ

| ವಿವರಗಳು | ೧೯೯೮–೯೯ | ೧೯೯೯–೨೦೦೦ | ೨೦೦೦–೨೦೦೧ | ೨೦೦೧–೦೨ | ೨೦೦೨–೦೩ |
|---|---|---|---|---|---|
| **ಆರಂಭ ಶಿಲ್ಕು** | ೭೪೫,೮೯೯ | ೫,೧೮,೬೮೭ | ೯೦,೦೧,೪೪೬ | ೩,೨೦,೪೯೩೧ | ೧,೧೨,೪೭,೬೮೪ |
| **ಜಮಾ** | ೧,೫೬,೨೫,೭೭೮ | ೧,೮೯,೩೯,೭೮೩ | ೧,೭೮,೨೨,೦೭೫ | ೨,೩೦,೨೨,೩೫೩ | ೧,೮೭,೨೯,೦೦೦ |
| **ಒಟ್ಟು** | ೧,೬೩,೭೧,೬೭೭ | ೧,೯೪,೫೮,೪೭೧ | ೨,೬೮,೨೩,೫೨೧ | ೨,೬೨,೨೭,೨೮೪ | ೨,೯೯,೭೬,೬೮೪ |
| **ಖರ್ಚು** | ೧,೬೨,೧೫,೭೪೨ | ೧,೦೪,೫೭,೦೨೪ | ೨,೨೪,೫೩,೯೬೦ | ೧,೪೯,೭೯,೬೦೦ | ೨೫,೯೯,೩೦೦ |
| **ಅಖೈರು ಶಿಲ್ಕು** | ೧,೫೫,೯೩೫ | ೯೦,೦೧,೪೪೬ | ೪೩,೬೯,೫೬೧ | ೧೧,೨೪,೭೬,೮೪ | ೩,೭೭,೩೮೪ |

ಮೂಲ: ಪುರಸಭೆ ಗೌರಿಬಿದನೂರು

### ಪುರಸಭೆ – ಬಂಗಾರಪೇಟೆ

ಮೊದಲಬಾರಿಗೆ ಪುರಸಭೆ ಬಂಗಾರಪೇಟೆಯು ೧೯೨೦ರಲ್ಲಿ ಸ್ಥಾಪನೆಗೊಂಡಿತು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ೨೦೦೧–೦೨ರಲ್ಲಿ ಚುನಾವಣೆಗಳು ನಡೆದು, ಪುರಸಭೆಗೆ ೨೩ ಜನ ಚುನಾಯಿತರಾದರು. ಐದು ಜನ ನಾಮಕರಣಗೊಂಡ ಸದಸ್ಯರು ಸೇರಿದಂತೆ ಪುರಸಭೆಯ ಒಟ್ಟು ಸದಸ್ಯರ ಸಂಖ್ಯೆ ೨೮, ಮೀಸಲು ಸ್ಥಾನಗಳೊಂದಿಗೆ ಚುನಾಯಿತ ಸದಸ್ಯರ ಹಂಚಿಕೆ ಈ ಕೆಳಗಿನಂತಿದೆ.

| ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಸಾಮಾನ್ಯ ವರ್ಗ | | ಪರಿಶಿಷ್ಟ ಪಂಗಡ ಮಹಿಳೆ | ಒಟ್ಟು |
|---|---|---|---|---|---|---|---|
| ಗಂ. | ಹೆ. | ಗಂ. | ಹೆ | ಗಂ. | ಹೆ. | | |
| ೫ | ೩ | ೨ | ೨ | ೭ | ೪ | ೨ | ೨೩ |

೨೦೦೧ನೇ ಜನಗಣತಿಯಂತೆ ನಗರದ ಜನಸಂಖ್ಯೆ ೩೮,೭೦೩ ಇದೆ. ನಗರವನ್ನು ೨೩ ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ತಲಾವಾರು ಸರಾಸರಿ ಕರಭಾರ ೪೨ ರೂ.ಗಳಾಗಿವೆ. ಪುರಸಭೆಗೆ ನಗರಯೋಜನೆ ಅನ್ವಯಗೊಂಡಿದ್ದು ಇಲ್ಲಿಯವರೆಗೆ ರೂಪುಗೊಂಡ ಹೊಸ ಬಡಾವಣೆಗಳು ೧) ಕುಪ್ಪಸ್ವಾಮಿ ಮುದಲಿಯಾರ್ ಬಡಾವಣೆ, ೨) ಅಮರಾವತಿ ಬಡಾವಣೆ, ೩) ಅಕ್ಬರ್ ಶರೀಫ್ ಬಡಾವಣೆ, ೪) ಮುನಿಸ್ವಾಮಿ ಬಡಾವಣೆ, ೫) ಮುನಿಯಮ್ಮ ಬಡಾವಣೆ, ೬) ಎಸ್.ಎ.ಅಬ್ದುಲ್ ಗಫೂರ್ ಬಡಾವಣೆ, ೭) ಖೈದರ್ ಸಾಬಿ ಬಡಾವಣೆ, ೮) ಕದಿರಪ್ಪ ಬಡಾವಣೆ, ೯) ಕುಂಖಾನ್ ಲೇಔಟ್, ೧೦) ಅಮ್ಮಿನ್ ಲೇಔಟ್, ೧೧) ಮೀರಣ್ಣಾ ಲೇಔಟ್, ೧೨) ಇಂದಿರಾ ಆಶ್ರಯ ಬಡಾವಣೆ, ೧೩) ದೇಶಹಳ್ಳಿ ಆಶ್ರಮ ಬಡಾವಣೆ ಮತ್ತು ೧೪) ಗಿರಿವಾಸ್ ಲೇಔಟ್. ಈ ಬಡಾವಣೆಗಳಲ್ಲಿಯ ಒಟ್ಟು ಮನೆಗಳ ಸಂಖ್ಯೆ ೨,೭೭೩ ಆಗಿದೆ. ಕೆ.ಎಚ್.ಬಿ ಕಾಲೋನಿಯು ೧೯೮೧–೮೨ರಲ್ಲಿ ನಿರ್ಮಾಣಗೊಂಡಿದ್ದು, ಈ ಬಡಾವಣೆಯನ್ನು ಕರ್ನಾಟಕ ಗೃಹಮಂಡಳಿಯು ೬೭,೨೦೦ ಚದರ ಅಡಿ ಕ್ಷೇತ್ರದಲ್ಲಿ ನಿರ್ಮಿಸಿದ್ದು ಅಲ್ಲಿನ ಮನೆಗಳ ಸಂಖ್ಯೆ ೫೬. ಈ ಬಡಾವಣೆಗೆ ಪುರಸಭೆ ರಸ್ತೆ ದೀಪ, ಚರಂಡಿ ವ್ಯವಸ್ಥೆ ಹಾಗೂ ನೀರಿನ ಸೌಲಭ್ಯವನ್ನು ಒದಗಿಸಿದೆ. ಪುರಸಭೆಯ ವ್ಯಾಪ್ತಿಯಲ್ಲಿ (೨೦೦೧–೦೨ರಲ್ಲಿ)ಐದು ಕೊಳಚೆ ಪ್ರದೇಶಗಳು ಇದ್ದು, ಅಲ್ಲಿನ ಗುಡಿಸಲುಗಳ ಸಂಖ್ಯೆ ೭೫೦ ಮತ್ತು ನಿವಾಸಿಗಳ ಸಂಖ್ಯೆ ೩೫೨೫ ಆಗಿದೆ.

### ನೀರು ಸರಬರಾಜು

ಹಿಂದಿನಿಂದಲೂ ನಗರಕ್ಕೆ ಬಾವಿಗಳಿಂದಲೇ ನೀರಿನ ಪೂರೈಕೆ ಆಗುತ್ತಿತ್ತು. ಈಗ ಕೊಳವೆಬಾವಿಗಳಿಂದ ಪುರಸಭೆಯು ಸುರಕ್ಷಿತ ಕುಡಿಯುವ ನೀರಿನ ಸರಬರಾಜು ಮಾಡುತ್ತಿದೆ. ೧೯೮೧–೮೨ರಲ್ಲಿ ಪುರಸಭೆಯು ರೂ. ೨,೩೪,೪೫೯ಗಳನ್ನು ನೀರು ಪೂರೈಕೆಗಾಗಿ ಖರ್ಚು ಮಾಡಿದೆ. ಇಲ್ಲಿಯವರೆಗೆ ನೀರು ಪೂರೈಕೆ ಯೋಜನೆಗಾಗಿ ಪುರಸಭೆ ಮಾಡಿದ ವೆಚ್ಚ ೨೦.೫೦ ಲಕ್ಷ

ರೂ.ಗಳು ಈ ಹಣವನ್ನು ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ಪುರಸಭೆ ಪಡೆದುಕೊಂಡಿದೆ. ನಗರಕ್ಕೆ ೨,೫೦,೦೦೦ ಗ್ಯಾಲನ್ ನೀರು ಪೂರೈಕೆ ಮಾಡಲು ಮೂರು ಪಂಪಿಂಗ್ ಸ್ಟೇಶನ್‌ಗಳನ್ನು ನಿರ್ಮಿಸಿದೆ. ಎರಡು ನೀರಿನ ಸಂಗ್ರಾಹಕಗಳನ್ನು ಪುರಸಭೆ ಉದ್ಯಾನದಲ್ಲಿ ನಿರ್ಮಿಸಿದೆ. ಇದರಲ್ಲಿ ಒಂದು ಟ್ಯಾಂಕ್ (ಸಂಗ್ರಾಹಕ) ಒಂದು ಲಕ್ಷ ಗ್ಯಾಲನ್ ಹಾಗೂ ಇನ್ನೊಂದು ೫೦,೦೦೦ ಗ್ಯಾಲನ್ ಸಾಮರ್ಥ್ಯಉಳ್ಳದ್ದಾಗಿವೆ. ಬೋವಿ ನಗರದಲ್ಲಿ ಒಂದು ಲಕ್ಷ ಗ್ಯಾಲನ್‌ನ ಇನ್ನೊಂದು ಟ್ಯಾಂಕ್ ಕಟ್ಟಿಸಲಾಗಿದೆ. ಪ್ರಸ್ತುತ ದಿನನಿತ್ಯ ೧೬ ಲಕ್ಷ ಲೀಟರ್ ನೀರು ಸರಬರಾಜುಗೊಳ್ಳುತ್ತಿದೆ. ತಲಾವಾರು ನಿತ್ಯದ ನೀರು ಪೂರೈಕೆಯ ಪ್ರಮಾಣ ೪೦ ಲೀಟರ್ ಆಗಿದೆ. ೨೦೦೧–೦೨ರಲ್ಲಿ ನೀರು ಪೂರೈಕೆಗಾಗಿ ಪುರಸಭೆ ಮಾಡಿದ ವೆಚ್ಚ ರೂ.೧೪,೮೩,೯೧ ಹಾಗೂ ನೀರಿನ ತೆರಿಗೆ ರೂಪದಲ್ಲಿ ಸಂದಾಯವಾದ ಹಣ ರೂ.೬,೯೬,೯೭ ಆಗಿದೆ. ಪ್ರಸ್ತುತ ನಗರದಲ್ಲಿ ೬೦೦ ಸಾರ್ವಜನಿಕ ನಲ್ಲಿಗಳು, ೩,೦೫೨ ಖಾಸಗಿ ನಲ್ಲಿಗಳು ಇವೆ.

**ಜನಾರೋಗ್ಯ ಮತ್ತು ನೈರ್ಮಲ್ಯ:** ನಗರದ ನೈರ್ಮಲ್ಯ ಕಾಪಾಡಲು ಪುರಸಭೆಯ ೩೧ ಜನ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಪುರಸಭೆಯ ಕಾರ್ಯಾಲಯದ ಹಿರಿಯ ಆರೋಗ್ಯ ನಿರೀಕ್ಷಕರು ಜನನ, ಮರಣ ದಾಖಲಾತಿ ನೋಡಿಕೊಳ್ಳುತ್ತಿದ್ದಾರೆ ಹಾಗೂ ಸಾಂಕ್ರಾಮಿಕಗಳು ಹರಡದಂತೆ ಮುಂಜಾಗ್ರತಾ ಕ್ರಮಗಳಾದ ಕ್ರಿಮಿನಾಶಕ–ಸಿಂಪಡಣೆ, ಸ್ವಚ್ಛತೆ ಮುಂತಾದ ಜವಾಬ್ದಾರಿಗಳನ್ನು ಹೊಂದಿದ್ದಾರೆ.

**ಇತರ ಸೌಲಭ್ಯಗಳು:** ಶಿಕ್ಷಣಕ್ಕೆ ಸಂಬಂಧಿಸಿದಂತೆ ಪುರಸಭೆ ಒಂದು ಬಾಲವಾಡಿ ಹಾಗೂ ಒಂದು ಶಿಶುವಿಹಾರಗಳನ್ನು ನಡೆಸುತ್ತಿದ್ದು ಅದಕ್ಕಾಗಿ ೨೦೦೦–೦೧, ೨೦೦೧–೦೨ರಲ್ಲಿ ಕ್ರಮವಾಗಿ ಮಾಡಿದ ವೆಚ್ಚ ರೂ. ೨೪,೪೨೪ ಹಾಗೂ ರೂ. ೨,೨೭,೬೦೪ ಆಗಿದೆ. ಪುರಸಭೆಯ ವ್ಯಾಪ್ತಿಯಲ್ಲಿ ಡಾಂಬರ್ ರಸ್ತೆ ೬.೪೦ ಕಿ.ಮೀ., ಜಲ್ಲಿಕಲ್ಲಿನ ರಸ್ತೆ ೩.೫ ಕಿ.ಮೀ., ಮಣ್ಣಿನ ರಸ್ತೆ ೧೬.೬ ಕಿ.ಮೀ. ಹಾಗೂ ಕಾಂಕ್ರೀಟ್ ರಸ್ತೆ ೨.೫೦ ಕಿ.ಮೀ. ಇದೆ.

ಮೊದಲ ಬಾರಿಗೆ ೧೯೫೨ರಲ್ಲಿ ನಗರವು ವಿದ್ಯುತ್ ಸಂಪರ್ಕ ಪಡೆಯಿತು. ೨೦೦೧–೦೨ರಲ್ಲಿ ನಗರದಲ್ಲಿಯ ಮನೆಗಳು ಪಡೆದ ವಿದ್ಯುತ್‌ಸಂಪರ್ಕ ಸಂಖ್ಯೆ ೯,೨೦೦, ಬೀದಿ ದೀಪಗಳ ಸಂಖ್ಯೆ ೩,೧೫೦ ಮತ್ತು ವಾಣಿಜ್ಯ ಸಂಪರ್ಕಗಳ ಸಂಖ್ಯೆ ೨,೧೦೦ ಆಗಿದೆ.

**ಹಣಕಾಸು:** ಆಕ್ಟ್ರಾಯ್ ರದ್ದಾಗುವ ಮೊದಲು ಪುರಸಭೆಗೆ ಸಂದಾಯವಾಗುತ್ತಿದ್ದ ವಾರ್ಷಿಕ ಆಕ್ಟ್ರಾಯ್‌ವು ೧೯೭೬–೭೭ರಲ್ಲಿ ರೂ.೨,೯೩,೫೨೪, ೧೯೭೭–೭೮ರಲ್ಲಿ ರೂ.೨,೯೧,೮೪೧ ಹಾಗೂ ೧೯೭೮–೭೯ರಲ್ಲಿ ರೂ.೩,೭೭,೫೩೩ ಆಗಿತ್ತು. ಆಕ್ಟ್ರಾಯ್ ರದ್ದಾದ ಮೇಲೆ ಪುರಸಭೆ ಆ ಕೊರತೆ ತುಂಬಿಸಿಕೊಳ್ಳಲು ರಾಜ್ಯ ಸರ್ಕಾರದ ಹಣಕಾಸು ಆಯೋಗದ ಶಿಫಾರಸ್ಸಿನ ಮೇಲೆ ಸರ್ಕಾರದಿಂದ ಪಡೆದ ಅನುದಾನ ರೂಪದ ಹಣ ೧೯೯೯–೨೦೦೦ರಲ್ಲಿ ರೂ.೩೪,೧೮,೫೯೮, ೨೦೦೦–೦೧ ರೂ.೪೧,೫೦,೩೦೦ ಹಾಗೂ ೨೦೦೧–೦೨ರಲ್ಲಿ ರೂ.೪೧,೫೦,೩೦೦ ಪಡೆದಿದೆ. ಪುರಸಭೆಯು ೨೦೦೦–೦೧ರಲ್ಲಿ ಅಭಿವೃದ್ಧಿ ಅನುದಾನವಾಗಿ ರೂ. ೭,೫೦,೦೦೦ ಸಹ ಪಡೆದಿದೆ.

ಪುರಸಭೆಯು ತನ್ನ ಮುಂಗಡಪತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ (ಶೇಕಡಾ ೧೮) ಮೀಸಲಿಟ್ಟ ಹಣ ಹಾಗೂ ಖರ್ಚು ಮಾಡಿದ ಹಣದ ವಿವರ ಈ ಕೆಳಗೆ ಕೊಟ್ಟಿದೆ.

(ರೂ.ಗಳಲ್ಲಿ)

| ವರ್ಷ | ಕಾಯ್ದಿರಿಸಿದ ಹಣ | ಖರ್ಚಾದ ಹಣ |
|---|---|---|
| ೧೯೯೯–೨೦೦೦ | ೨,೦೦,೦೦೦ | ೨೭,೦೬೪ |
| ೨೦೦೦–೨೦೦೧ | ೩,೦೦,೦೦೦ | ೪೫,೯೯ |
| ೨೦೦೧–೨೦೦೨ | ೨,೦೦,೦೦೦ | ೨೪,೨೦೧ |

ಪುರಸಭೆಯು ತನ್ನ ಒಟ್ಟು ಆದಾಯದಲ್ಲಿ, ವಿವಿಧ ಬಾಬುಗಳಿಗೆ ಖರ್ಚು ಮಾಡಿದ ಹಣದ ಶೇಕಡಾ ಪ್ರಮಾಣದ (ಒಟ್ಟು ಆದಾಯಕ್ಕನುಗುಣವಾಗಿ) ೧೯೯೮–೯೯ ಹಾಗೂ ೨೦೦೧–೦೨ರ ಸಾಲಿಗೆ ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಶೇಕಡಾವಾರು

| ಕ್ರ.ಸಂ. | ವಿವರ | ೧೯೯೮–೯೯ | ೨೦೦೧–೦೨ |
|---|---|---|---|
| ೧) | ಜನಾರೋಗ್ಯ ಮತ್ತು ನೈರ್ಮಲ್ಯ | ೬.೪೭ | ೫.೧೨ |
| ೨) | ನೀರು ಸರಬರಾಜು | ೮.೮೨ | ೨೬.೮೯ |
| ೩) | ರಸ್ತೆ ಮತ್ತು ದೀಪ ನಿರ್ವಹಣೆ | ೨೦.೫೩ | – |
| ೪) | ಸಿಬ್ಬಂದಿ ಪ್ರಭಾರ | ೫೪.೬೦ | ೬೦.೦೮ |
| ೫) | ಇತರೆ | ೫.೬೭ | ೬.೧೨ |

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಮಂಜೂರಾದ ಯೋಜನಾ ಮೊತ್ತ (೧೯೯೫–೯೬) ರೂ.೧೯೪.೦೧ ಲಕ್ಷ ಆಗಿದ್ದು ವೆಚ್ಚದ ವಿವರಗಳನ್ನು ಈ ಕೆಳಗೆ ನೀಡಿದೆ.

ಲಕ್ಷ ರೂ.ಗಳಲ್ಲಿ

| ವಿವರ | ವೆಚ್ಚ |
|---|---|
| **ಶಾಪಿಂಗ್ ಕಾಂಪ್ಲೆಕ್ಸ್‌ಗಾಗಿ** | ೭೯.೦೦ |
| **ರಸ್ತೆ ಮತ್ತು ಚರಂಡಿ** | ೪೦.೦೦ |
| **ಬೀದಿ ದೀಪಗಳಿಗಾಗಿ** | ೧೦.೦೦ |
| **ಸಮುದಾಯ ಭವನ ನಿರ್ಮಾಣ** | ೨೧.೦೦ |
| **ಆಟದ ಮೈದಾನ** | ೪೪.೦೦ |
| **ಒಟ್ಟು** | ೧೯೪.೦೧ |

ಪುರಸಭೆಗೆ ಸ್ವರ್ಣ ಜಯಂತಿ ಶಹರಿ ರೋಜ್ಗಾರ್ ಯೋಜನೆಯಡಿ ದೊರೆತ ಯೋಜನಾ ಮೊತ್ತ ಮತ್ತು ಮಂಜೂರಾದ ಘಟಕಗಳ ವಿವರ

| ಒಟ್ಟು ಯೋಜನೆ ಮೊತ್ತ ರೂ.ಗಳಲ್ಲಿ | ಬಿಡುಗಡೆಯಾದ ಮೊತ್ತ ರೂ.ಗಳಲ್ಲಿ | ಖರ್ಚಾದ ಮೊತ್ತ ರೂ.ಗಳಲ್ಲಿ | ಉಳಿಕೆ ಹಣ ರೂ.ಗಳಲ್ಲಿ | ಯೋಜನೆಯಲ್ಲಿ ಮಂಜೂರಾದ ಘಟಕಗಳು | ರೂ.ಗಳಲ್ಲಿ |
|---|---|---|---|---|---|
| ೨೧,೨೫,೯೮೬ | ೨೧,೨೫,೯೮೬ | ೧೭,೬೪,೮೬೦ | ೩,೬೧,೧೨೬ | ೧) ನಗರ ವೇತನಾಧಾರಿತ ಉದ್ಯೋಗ | ೭೯,೧೮೮ |
| | | | | ೨) ಸ್ವಯಂ ಉದ್ಯೋಗ ಯೋಜನೆ | ೨,೩೮,೭೫೪ |
| | | | | ೩) ಮೂಲಭೂತ ಸೌಕರ್ಯ | ೩,೯೫,೦೦೦ |
| | | | | ೪) ತರಬೇತಿ ಕಾರ್ಯಕ್ರಮ | ೨,೮೪,೭೨೯ |
| | | | | ೫) ಬಾಲಿಕ ಸಮೃದ್ಧಿ ಯೋಜನೆ | ೬೨,೫೦೦ |
| | | | | ೬) ಸಾಮಾಜಿಕ ಸೇವೆಗಳು | ೮೮,೮೩೫ |
| | | | | ೭) ಡ್ವಾಕ್ವಾ | ೨,೨೫,೦೦೦ |
| | | | | ೮) ಟಿ.ಸಿ.ಬಿ. ಆವರ್ತಕ ನಿಧಿ | ೧,೦೦,೦೦೦ |

**ಐದು ವರ್ಷಗಳ ಜಮಾ ಮತ್ತು ಖರ್ಚಿನ ವಿವರಗಳು**

ರೂ.ಗಳಲ್ಲಿ

| ವಿವರಗಳು | ೯೭-೯೮ | ೯೮-೯೯ | ೯೯-೨೦೦೦ | ೨೦೦೦-೨೦೦೧ | ೨೦೦೧-೨೦೦೨ |
|---|---|---|---|---|---|
| **ಪ್ರಾರಂಭಶಿಲ್ಕು** | ೮,೯೦,೨೬೮ | ೮,೮೭,೫೩೭ | ೧೧,೭೭,೯೦೯ | ೭,೬೧,೬೨೯ | ೪೯,೯೫,೬೮೦ |
| **ಜಮಾ** | ೬೫,೭೮,೨೭೧ | ೬೮,೧೨,೦೬೪ | ೮೦,೯೩,೨೦೨ | ೨,೧೨,೬೯,೭೫೮ | ೧,೦೩,೦೫,೨೨೯ |
| **ಒಟ್ಟು** | ೭೪,೬೮,೫೩೯ | ೭೬,೯೯,೬೦೧ | ೯೨,೭೧,೨೧೧ | ೨,೨೦,೩೧,೩೮೭ | ೧,೫೩,೦೦,೯೦೯ |
| **ಖರ್ಚು** | ೬೫,೮೧,೦೦೨ | ೬೫,೨೧,೬೯೨ | ೮೫,೦೯,೫೮೨ | ೧,೭೦,೩೫,೭೦೭ | ೧,೧೮,೬೪,೧೧೬ |
| **ಅಖೈರುಶಿಲ್ಕು** | ೮,೮೭,೫೩೭ | ೧೧,೭೭,೯೦೯ | ೭,೬೧,೬೨೯ | ೪೯,೯೫,೬೮೦ | ೩೪,೩೬,೭೯೩ |

ಮೂಲಸಭೆ: ಪುರಸಭೆ ಬಂಗಾರಪೇಟೆ

## ಪಟ್ಟಣ ಪಂಚಾಯಿತಿ– ಬಾಗೇಪಲ್ಲಿ

ಮೊಟ್ಟ ಮೊದಲ ಬಾರಿಗೆ ೧೯೫೦ರಲ್ಲಿ ಬಾಗೇಪಲ್ಲಿ ಪುರಸಭೆಯಾಗಿ ಸ್ಥಾಪನೆಗೊಂಡಿತು. ಆಗಿನ ಅದರ ಚುನಾಯಿತ ಸದಸ್ಯರ ಸಂಖ್ಯೆ ೧೯ ಆಗಿತ್ತು ಹಾಗೂ ಇಬ್ಬರು ನಾಮಕರಣ ಸದಸ್ಯರಿದ್ದರು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ ೨೦೦೧ರಲ್ಲಿ ಚುನಾವಣೆಗಳು ನಡೆದು ೧೩ ಜನ ಸದಸ್ಯರು ಆಯ್ಕೆಗೊಂಡರು. ಮೀಸಲಾತಿಗನುಗುಣವಾಗಿ ಸದಸ್ಯರ ಹಂಚಿಕೆ ಈ ಕೆಳಗಿನಂತೆ ಇದ್ದಿತು.

| ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | | ಸಾಮಾನ್ಯ ವರ್ಗ | | ಒಟ್ಟು |
|---|---|---|---|---|---|---|---|---|
| ಗಂ. | ಹೆ | ಗಂ. | ಹೆ | ಗಂ. | ಹೆ | ಗಂ. | ಹೆ. | |
| ೩ | ೧ | ೨ | ೧ | – | ೧ | ೩ | ೨ | ೧೩ |

ಪ್ರಸ್ತುತ, ಪಟ್ಟಣ ಪಂಚಾಯಿತಿಯ ವಿಸ್ತೀರ್ಣವು ೨.೭೪ ಚ.ಕಿ.ಮೀ. ಇದ್ದು ಜನಸಂಖ್ಯೆ (೨೦೦೧ರ ಜನಗಣತಿಯಂತೆ) ೨೦,೧೧೯ ಆಗಿದೆ ಹಾಗೂ ಮನೆಗಳ (೨೦೦೧-೦೨) ಸಂಖ್ಯೆ ೩,೪೯೪– ಪಟ್ಟಣವನ್ನು ೧೩ ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ೨೦೦೧–೦೨ರಲ್ಲಿ ಸರಾಸರಿ ತಲಾವಾರು ಕರಭಾರ ರೂ.೧೭೦೦ ಆಗಿತ್ತು. ಆಶ್ರಯ ಯೋಜನೆಯಡಿ ಗಣಸೂರ್ಯ ಬಡಾವಣೆ ರೂಪುಗೊಂಡಿದೆ. ಈ ಬಡಾವಣೆ ೨೬ ಮನೆಗಳನ್ನು ಹೊಂದಿದ್ದು, ೧೫೫ ನಿವಾಸಿಗಳನ್ನು ಹೊಂದಿದೆ. ಇದಕ್ಕೆ ಪಟ್ಟಣಪಂಚಾಯಿತಿ ೩ ಲಕ್ಷ ರೂ.ಗಳನ್ನು ಖರ್ಚು ಮಾಡಿದೆ. ಗೃಹಮಂಡಳಿಯು ೧೯೮೭ರಲ್ಲಿ ೧,೦೮,೧೨೧ ಚದರ ಅಡಿ ಕ್ಷೇತ್ರದಲ್ಲಿ ೫೫ ಮನೆಗಳನ್ನು ನಿರ್ಮಾಣ ಮಾಡಿದ್ದು, ಪಟ್ಟಣ ಪಂಚಾಯಿತಿಯಿಂದ ರಸ್ತೆ ಚರಂಡಿ, ನೀರು ವಿದ್ಯುತ್ ದೀಪ ಈ ಸೌಲಭ್ಯಗಳನ್ನು ಒದಗಿಸಿರುತ್ತದೆ.

## ನೀರು ಸರಬರಾಜು

ಹಿಂದಿನಿಂದಲೂ ಸೇದುವ ಬಾವಿಗಳಿಂದ ಪಟ್ಟಣಕ್ಕೆ ನೀರು ಸರಬರಾಜುಗೊಳ್ಳುತ್ತಿತ್ತು. ಈಗ ಕೊಳವೆಬಾವಿಗಳನ್ನು ಕೊರೆದು ನೀರನ್ನು ಒದಗಿಸಲಾಗುತ್ತಿದೆ. ಸುರಕ್ಷಿತ ನೀರು ಸರಬರಾಜು ಹೊಣೆಯನ್ನು ಪಟ್ಟಣಪಂಚಾಯಿತಿ ವಹಿಸಿಕೊಂಡಿದ್ದು ಗ್ರಾಮೀಣ ನೀರು ಸರಬರಾಜು ಯೋಜನೆಯು ೧೯೭೮ರಲ್ಲಿ ಪ್ರಾರಂಭಗೊಂಡಿದೆ. ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ೧.೪೯ ಲಕ್ಷ ಖರ್ಚು ಮಾಡಿ (೨೦೦೧-೦೨) ಒಂದು ಲಕ್ಷ ಗ್ಯಾಲನ್ ನೀರಿನ ಓವರ್ ಹೆಡ್ ಟ್ಯಾಂಕ್ ಹಾಗೂ ೫೦ ಸಾವಿರ ಗ್ಯಾಲನ್ ನೀರಿನ ಇನ್ನೊಂದು ಟ್ಯಾಂಕ್ ನಿರ್ಮಿಸಿದೆ. ಬಾಗ್ಲಕುಂಟೆಯಲ್ಲಿ ೫ ಕೊಳವೆಬಾವಿಗಳು, ಕೊರ್ಲಕುಂಟೆ ಕೆರೆಯಲ್ಲಿ ೪ ಕೊಳವೆ ಬಾವಿಗಳನ್ನು ಕೊರೆದು, ೩ ಕಿ.ಮೀ. ಉದ್ದದ ಕೊಳವೆ ಸಂಪರ್ಕ ಕಲ್ಪಿಸಿ ಬಾವಿಗಳಿಗೆ ವಿದ್ಯುತ್ ಮೋಟಾರುಗಳನ್ನು ಅಳವಡಿಸಿದೆ. ಬಾಗ್ಲುಕುಂಟೆಯಲ್ಲಿ ಪಂಪ್ ಹೌಸ್ ನಿರ್ಮಿಸಲಾಗಿದೆ. ಹೆಚ್ಚಿನ ನೀರು ಪೂರೈಕೆಗಾಗಿ ೮ ಕೋಟಿ

ರೂ. ವೆಚ್ಚದಲ್ಲಿ ಡ್ಯಾಂ ನಿರ್ಮಾಣ ಕಾಮಗಾರಿಯನ್ನು ಪಟ್ಟಣಕ್ಕೆ ಹತ್ತಿರ ಇರುವ ಚಿತ್ರಾವತಿ ನದಿಗೆ ಅಡ್ಡಲಾಗಿ ಕಟ್ಟಲಾಗುತ್ತಿದೆ. ಪ್ರಸ್ತುತ (೨೦೦೨-೦೩) ದಲ್ಲಿ ೪.೮ ಲಕ್ಷ ಲೀಟರ್ ನೀರು ಪಟ್ಟಣಕ್ಕೆ ಸರಬರಾಜುಗೊಳ್ಳುತ್ತಿದ್ದು, ತಲಾವಾರು ದಿನನಿತ್ಯ ಸರಬರಾಜು ಆಗುವ ನೀರಿನ ಪ್ರಮಾಣ ೨೦ ಲೀಟರ್ ಆಗಿರುತ್ತದೆ.

೨೦೦೦-೦೧, ೨೦೦೧-೦೨ ಮತ್ತು ೨೦೦೨-೦೩ನೇ ಸಾಲಿನಲ್ಲಿ ಪಟ್ಟಣಪಂಚಾಯಿತಿಗೆ ಸಂದಾಯವಾದ ನೀರಿನ ತೆರಿಗೆಯು, ಕ್ರಮವಾಗಿ ರೂ.೪,೪೮,೯೭೨, ರೂ.೬,೮೩,೯೫೫ ಮತ್ತು ರೂ.೫,೪೩,೪೧೨ ಆಗಿದೆ.

### ಜನಾರೋಗ್ಯ ಮತ್ತು ನೈರ್ಮಲ್ಯ

ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಕ್ರಿಮಿನಾಶಕಗಳ ಸಿಂಪಡಣೆ ಮತ್ತು ಜನನ ಮರಣ ದಾಖಲಾತಿಗಳನ್ನು ಕಿರಿಯ ಆರೋಗ್ಯ ನಿರೀಕ್ಷಕರು ನೋಡಿಕೊಳ್ಳುತ್ತಾರೆ. ಪಟ್ಟಣಪಂಚಾಯಿತಿಯು ಪಟ್ಟಣದ ನೈರ್ಮಲ್ಯ ಕಾಪಾಡಲು ೨೮ ಜನ ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿರುತ್ತದೆ. ಬಾಗೇಪಲ್ಲಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಇಲ್ಲ. ಪಟ್ಟಣದಲ್ಲಿರುವ ಹೊರಚರಂಡಿಯ ಉದ್ದ ೪,೪೮೦ಮೀ. ಇದ್ದು ಅದರಲ್ಲಿ ಎಲ್ ಮಾದರಿಯದ್ದು, ೧,೮೦೦ ಮೀ ಹಾಗೂ ಯು ಮಾದರಿಯದ್ದು ೨,೬೮೦ ಮೀ.ಇರುತ್ತದೆ. ೨೦೦೨-೦೩ರಲ್ಲಿ ಪಟ್ಟಣಪಂಚಾಯಿತಿಯು ರೂ.೨೬,೦೦೦ ಗಳನ್ನು ವಿವಿಧ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ಸಹಾಯಧನದ ರೂಪದಲ್ಲಿ ನೀಡಿದೆ.

### ಇತರ ಸೌಲಭ್ಯಗಳು

ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ೮ ಕಿ.ಮೀ. ಟಾರ್ ರಸ್ತೆ ೧೨ ಕಿ.ಮೀ. ಜಲ್ಲಿ ರಸ್ತೆ ಹಾಗೂ ೨ ಕಿ.ಮೀ. ಕಾಂಕ್ರೀಟು ರಸ್ತೆ ಇರುತ್ತದೆ. ಪ್ರಥಮಬಾರಿಗೆ ಕರ್ನಾಟಕ ವಿದ್ಯುತ್ ಮಂಡಳಿಯಿಂದ ಪಟ್ಟಣವು ವಿದ್ಯುತ್‌ಸಂಪರ್ಕ ಪಡೆಯಿತು. ೨೦೦೧-೦೨ರಲ್ಲಿ ಇದ್ದ ಬೀದಿ ದೀಪಗಳ ಸಂಖ್ಯೆ, ಸೋಡಿಯಂ ೧೨೬, ಕೊಳವೆ ದೀಪಗಳು ೧,೮೬೦. ೭,೦೦೦ ಮನೆಗಳಿಗೆ ವಿದ್ಯುತ್ ಸಂಪರ್ಕ ಮತ್ತು ೯೯೦ ವಾಣಿಜ್ಯ ಸಂಪರ್ಕಗಳನ್ನು ನೀಡಿದೆ.

ಪಟ್ಟಣದ ವ್ಯಾಪ್ತಿಯಲ್ಲಿ ೦.೫ ಕಿ.ಮೀ. ವಿಸ್ತೀರ್ಣದಲ್ಲಿ ೩ ಕೊಳಚೆ ಪ್ರದೇಶಗಳು ಇದ್ದು, ಅಲ್ಲಿ ವಾಸಿಸುವ ಜನರ ಸಂಖ್ಯೆ ೨,೬೨೮ ಆಗಿದೆ. ಪಟ್ಟಣಪಂಚಾಯಿತಿಯು ಈ ಕೊಳಚೆ ಪ್ರದೇಶಗಳಿಗೆ ಶೌಚಾಲಯ, ನೀರು ಹಾಗೂ ಚರಂಡಿ ಹಾಗೂ ರಸ್ತೆ ಸೌಲಭ್ಯಗಳನ್ನು ಒದಗಿಸಿದೆ.

### ಹಣಕಾಸು

ಆಕ್ಟ್ರಾಯ್ ರದ್ದಾಗುವ ಮೊದಲು ೧೯೭೬, ೧೯೭೭ ಹಾಗೂ ೧೯೭೮ರಲ್ಲಿ ಸಂದಾಯವಾಗುತ್ತಿದ್ದ ಆಕ್ಟ್ರಾಯ್ ಹಣವು ಕ್ರಮವಾಗಿ ರೂ.೪೮,೦೦೦, ರೂ.೬೩,೦೦೦ ಹಾಗೂ ರೂ.೮೬,೦೦೦ ಆಗಿದ್ದಿತು. ಆಕ್ಟ್ರಾಯ್‌ಯು ರದ್ದಾದ ನಂತರ ಇತ್ತೀಚೆಗೆ ೧೯೯೯-೨೦೦೦, ೨೦೦೦-೦೧, ೨೦೦೧-೦೨ರ ಸಾಲಿನಲ್ಲಿ ಸರ್ಕಾರ ನೀಡಿದ ರಾಜ್ಯ ಹಣಕಾಸು ಆಯೋಗದ ಅನುದಾನವು ಕ್ರಮವಾಗಿ ರೂ. ೯,೮೪,೦೦೦ ರೂ.೯,೮೪,೦೦೦ ಹಾಗೂ ೯,೮೪,೦೦೦ರೂ. ಆಗಿದ್ದಿತು ಹಾಗೂ ಸರ್ಕಾರ ನೀಡಿದ ಅಭಿವೃದ್ಧಿ ಅನುದಾನವು ಕ್ರಮವಾಗಿ ರೂ.೫,೦೦,೦೦೦ ರೂ.೨೫,೦೦,೦೦೦ ಆಗಿದ್ದಿತು.

ಪಟ್ಟಣ ಪಂಚಾಯಿತಿಯು ಪ್ರತೀ ವರ್ಷ ಪರಿಶಿಷ್ಠ ಜಾತಿ ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಿಟ್ಟ (ಶೇ.೧೮) ಹಣ ಹಾಗೂ ಖರ್ಚು ಮಾಡಿದ ಹಣ ಕಳೆದ ಮೂರು ವರ್ಷಗಳಲ್ಲಿ ಅಂದರೆ ೧೯೯೯-೨೦೦೦, ೨೦೦೦-೦೧, ೨೦೦೧-೦೨ರಲ್ಲಿ ಕ್ರಮವಾಗಿ ರೂ.೭೨,೦೦೦, ರೂ.೧,೬೫,೦೦೦ ಹಾಗೂ ರೂ.೧,೬೫,೦೦೦ ಆಗಿದ್ದು, ಖರ್ಚಾದ ಹಣವು ಕ್ರಮವಾಗಿ ರೂ.೭೨,೦೦೦, ರೂ.೧,೬೫,೦೦೦ ಹಾಗೂ ರೂ.೧,೮೫,೦೦೦ ಆಗಿತ್ತು. ಈ ಮೀಸಲಿಟ್ಟ ಹಣದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರು ವಾಸಿಸುವ ಸ್ಥಳಗಳಲ್ಲಿ ರಸ್ತೆ ಚರಂಡಿ, ಸಮುದಾಯ ಭವನ, ವಿದ್ಯಾರ್ಥಿವೇತನ, ಮಹಿಳಾ ಮಂಡಳಿಗಳ ಹೊಲಿಗೆ ತರಬೇತಿ ಹಾಗೂ ವಿದ್ಯುತ್ ದೀಪ ಅಳವಡಿಸುವಿಕೆ, ಮುಂತಾದ ಕೆಲಸಗಳನ್ನು ಪಂಚಾಯಿತಿ ಕೈಗೊಂಡಿದೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯವು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಹಣದ ಶೇಕಡಾ (ಆದಾಯಕ್ಕೆ ಅನುಗುಣವಾಗಿ) ೧೯೯೮-೯೯ ಹಾಗೂ ೨೦೦೧-೦೨ರ ಸಾಲಿನ ವಿವರಗಳು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

(ಶೇಕಡಾವಾರು)

| | ವಿವರ | ೧೯೯೮-೯೯ | ೨೦೦೧-೦೨ |
|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧೪ | ೧೬ |
| ೨ | ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ | ೨೦ | ೨೨ |
| ೩ | ನೀರು ಸರಬರಾಜು | ೧೪ | ೧೦ |
| ೪ | ರಸ್ತೆ ಮತ್ತು ದೀಪ ನಿರ್ವಹಣೆ | ೧೨ | ೧೨ |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗಗಳು | ೧೪ | ೧೨ |
| ೬ | ಸಿಬ್ಬಂದಿ ಪ್ರಭಾರ | ೨೪ | ೨೦ |
| ೭ | ಇತರೆ | ೪ | ೬ |

ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿ ೧೯೯೮ದಿಂದ ೨೦೦೩-೦೪ರವರೆಗೆ ಬಿಡುಗಡೆಯಾದ ಒಟ್ಟು ಅನುದಾನ ರೂ.೧೩,೫೮,೯೭೬ ಆಗಿದ್ದು, ಖರ್ಚಾದ ಹಣವು ರೂ.೧೨,೨೩,೨೯೬ ಆಗಿರುತ್ತದೆ. ಯೋಜನೆಯಡಿ ಕೈಗೊಂಡ ಕಾಮಗಾರಿಗಳು ೩೭ ಆಗಿದ್ದು ಫಲಾನುಭವಿಗಳ ಸಂಖ್ಯೆ ೫೨೨ ಆಗಿರುತ್ತದೆ.

**ಕಳೆದ ಐದು ವರ್ಷಗಳ ಪಟ್ಟಣ ಪಂಚಾಯಿತಿಯ ಆದಾಯ ವೆಚ್ಚದ ವಿವರ**

(ರೂ.ಗಳಲ್ಲಿ)

| ವಿವರಗಳು | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ೨೦೦೦-೨೦೦೧ | ೨೦೦೨-೨೦೦೩ |
|---|---|---|---|---|---|
| **ಆರಂಭ ಶಿಲ್ಕು** | ೧,೮೦,೧೦೮ | ೪,೫೪,೦೯೬ | ೧೫,೬೯,೪೨೦ | ೨೮,೯೨,೬೩೮ | ೧೭,೮೭,೯೨೯ |
| **ಜಮಾ** | ೩೮,೨೧,೬೦೨ | ೪೭,೯೧,೧೨೬ | ೬೦,೪೧,೨೯೫ | ೬೪,೩೬,೪೪೩ | ೬೨,೪೭,೬೦೦ |
| **ಖರ್ಚು** | ೩೫,೪೭,೬೧೪ | ೩೬,೭೫,೮೦೨ | ೪೭,೧೮,೦೭೭ | ೭೫,೬೨,೧೫೪ | ೫೪,೦೦,೧೪೭ |
| **ಅಖೈರು ಶಿಲ್ಕು** | ೪,೫೪,೦೯೬ | ೧೫,೮೬,೮೩೮ | ೧೭,೫೭,೯೨೯ | ೧೭,೫೭,೯೨೯ | ೨೬,೩೫,೩೮೨ |

ಮೂಲ: ಪಟ್ಟಣಪಂಚಾಯಿತಿ, ಬಾಗೇಪಲ್ಲಿ

### ಪಟ್ಟಣ ಪಂಚಾಯಿತಿ – ಶ್ರೀನಿವಾಸಪುರ

ಮೊದಲ ಬಾರಿಗೆ ಪಟ್ಟಣ ಪಂಚಾಯಿತಿ ಶ್ರೀನಿವಾಸಪುರವು ಪುರಸಭೆಯಾಗಿ ೧೯೪೮ರಲ್ಲಿ ಸ್ಥಾಪನೆಗೊಂಡಿತ್ತು. ಆಗಿನ ಅದರ ಸದಸ್ಯರ ಸಂಖ್ಯೆ ೧೭ ಆಗಿದ್ದಿತು. ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ೨೦೦೦-೦೧ರಲ್ಲಿ ಚುನಾವಣೆಗಳು ನಡೆದು ೧೭ ಜನ ಸದಸ್ಯರು ಆಯ್ಕೆಗೊಂಡರು. ಮೀಸಲು ಸ್ಥಾನದೊಂದಿಗೆ ಅವರ ಸ್ಥಾನಗಳ ಹಂಚಿಕೆ ಈ ಕೆಳಗಿನಂತಿದೆ.

| ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಸಾಮಾನ್ಯ ವರ್ಗ | | ಪರಿಶಿಷ್ಟ ಪಂಗಡ | ಒಟ್ಟು |
|---|---|---|---|---|---|---|---|
| ಗಂ. | ಹೆ. | ಗಂ. | ಹೆ. | ಗಂ. | ಹೆ. | | |
| ೯ | ೫ | ೨ | ೧ | – | – | – | ೧೭ |

ಪಟ್ಟಣ ಪಂಚಾಯಿತಿಯ ಕ್ಷೇತ್ರ ವ್ಯಾಪ್ತಿಯು ೫ ಚದರ ಕಿ.ಮೀ. ಆಗಿದೆ. ಜನಸಂಖ್ಯೆ ೨೨,೯೫೯ (೨೦೦೧ ಜನಗಣತಿಯಂತೆ) ಹಾಗೂ ಪಟ್ಟಣದಲ್ಲಿ ೬,೬೭೭ ಮನೆಗಳು ಇವೆ. ನಗರವನ್ನು ೧೭ ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಬ್ಬ ಪ್ರಜೆಗೆ ಸರಾಸರಿ ಕರಭಾರ (ಇನ್ಸಿಡೆನ್ ಆಫ್ ಟ್ಯಾಕ್ಸ್) ೩೨ ರೂ. ಆಗಿರುತ್ತದೆ. ನಗರ ಯೋಜನೆ ಪ್ರಾರಂಭಗೊಂಡಾಗಿನಿಂದ ರೂಪಗೊಂಡ ಹೊಸ ಬಡಾವಣೆಗಳು ೧) ವೆಂಕಟೇಶ್ವರ ಬಡಾವಣೆ, ೨) ರಾಮಕೃಷ್ಣ ಬಡಾವಣೆ, ೩) ನಗರೇಶ್ವರ ಬಡಾವಣೆ, ೪) ಜಾಕೀರ್ ಹುಸೇನ್ ಮೊಹಲ್ಲಾ, ೫) ಗಫಾರ್ ಖಾನ್ ಮೊಹಲ್ಲಾ ಹಾಗೂ ೬) ಹೈದರಾಲಿ ಮೊಹಲ್ಲಾ. ಇವು ೩,೮೫೦ ಮನೆಗಳನ್ನು ಹೊಂದಿರುತ್ತವೆ. ಗೃಹಮಂಡಳಿಯು ೧೯೯೯ರಲ್ಲಿ ೧,೦೦೦ ಮನೆಗಳ ಆಶ್ರಯ ಬಡಾವಣೆಯನ್ನು ೧೯೯೯ರಲ್ಲಿ ನಿರ್ಮಿಸಿದ್ದು, ಅದರ ವಿಸ್ತೀರ್ಣ ೯ ಲಕ್ಷ ಚದರ ಅಡಿಗಳಾಗಿದೆ. ಈ ಬಡಾವಣೆಗೆ ರಸ್ತೆ ಚರಂಡಿ, ಬೀದಿದೀಪ ಹಾಗೂ ನೀರಿನ ಸರಬರಾಜು ವ್ಯವಸ್ಥೆಯನ್ನು ಪಂಚಾಯಿತಿ ಕೈಗೊಂಡಿದೆ.

### ನೀರು ಸರಬರಾಜು

ಹಿಂದಿನಿಂದ ಪಟ್ಟಣಕ್ಕೆ ಸೇದುವ ಬಾವಿಗಳಿಂದ ನೀರು ಸರಬರಾಜು ಆಗುತ್ತಿತ್ತು. ಈಗ ಕೊಳವೆಬಾವಿಗಳಿಂದ ನೀರು ಸರಬರಾಜುಗೊಳ್ಳುತ್ತಿದೆ. ಪಟ್ಟಣ ಪಂಚಾಯಿತಿಯು ನೀರು ಸರಬರಾಜು ಹೊಣೆ ವಹಿಸಿಕೊಂಡಿದ್ದು, ಈ ಯೋಜನೆಯು ೧೯೭೦ರಲ್ಲಿ ಪ್ರಾರಂಭಗೊಂಡಿದ್ದು, ಯೋಜನೆಯ ಒಟ್ಟು ವೆಚ್ಚ ೨೦ ಲಕ್ಷ ರೂ.ಗಳಾಗಿದೆ. ಇತ್ತೀಚೆಗೆ ೧.೫ ಲಕ್ಷ ರೂ. ವೆಚ್ಚದಲ್ಲಿ ೧೯೯೯–೨೦೦೦ ಒಂದು ಓವರ್ ಹೆಡ್ ಟ್ಯಾಂಕ್ ಕಟ್ಟಲಾಗಿದೆ. ಪ್ರಸ್ತುತ, ೩ ಓವರ್ ಹೆಡ್ ಟ್ಯಾಂಕ್‌ಗಳು ಇದ್ದು, ಅವುಗಳ ಸಾಮರ್ಥ್ಯಗಳು ಕ್ರಮವಾಗಿ ೫,೦೦,೦೦೦ ಗ್ಯಾಲನ್ ೭೫,೦೦೦ ಗ್ಯಾಲನ್ ಹಾಗೂ ೧ ಲಕ್ಷ ಗ್ಯಾಲನ್‌ಗಳಾಗಿರುತ್ತದೆ. ೨೦೦೨–೦೩ರಲ್ಲಿ ಪಟ್ಟಣಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಸಾರ್ವಜನಿಕ ನಲ್ಲಿಗಳ ಸಂಖ್ಯೆ ೫೦೦ ಹಾಗೂ ಖಾಸಗಿ ನಲ್ಲಿಗಳ ಸಂಖ್ಯೆ ೨,೫೦೦ ಆಗಿದೆ. ದಿನನಿತ್ಯ ತಲಾವಾರು ೩೦ ಲೀಟರ್ ನೀರು ಹಂಚಿಕೆಯಾಗುತ್ತಿದೆ. ನೀರಿಗಾಗಿ ಪಟ್ಟಣಪಂಚಾಯಿತಿಯು ಮಾಡುತ್ತಿರುವ ವೆಚ್ಚವು ರೂ.೩,೧೯,೧೦೦ ಆಗಿದೆ. ೧೯೯೧–೨೦೦೦ದಿಂದ ೨೦೦೧–೦೨ ಈ ಮೂರು ವರ್ಷಗಳಲ್ಲಿ ಸಂದಾಯವಾದ ನೀರಿನ ತೆರಿಗೆ ಕ್ರಮವಾಗಿ ರೂ.೫೧,೫೪೯, ರೂ.೧,೩೪,೫೭೧ ಮತ್ತು ರೂ.೫,೪೧,೮೭೦ರೂಗ.ಳು ಆಗಿದೆ.

### ಜನಾರೋಗ್ಯ ಮತ್ತು ನೈರ್ಮಲ್ಯ

ಸಾಂಕ್ರಾಮಿಕ ರೋಗಗಳ ತಡೆಗೆ ಮುಂಜಾಗ್ರತಾ ಕ್ರಮವಾದ ಕ್ರಿಮಿನಾಶಕಗಳ ಸಿಂಪಡಣೆ ಹಾಗೂ ಜನನ, ಮರಣ ದಾಖಲಾತಿಗಳ ಜವಾಬ್ದಾರಿಯನ್ನು ನೇಮಕಗೊಂಡ ಕಿರಿಯ ಆರೋಗ್ಯ ನಿರೀಕ್ಷಕರು ನೋಡಿಕೊಳ್ಳುತ್ತಾರೆ. ಪಟ್ಟಣದಲ್ಲಿ ಎಲ್ ಮಾದರಿಯ ೪,೦೦೦ ಮೀ. ಹಾಗೂ ಯು ಮಾದರಿಯ ೧೦,೦೦೦ ಮೀಟರ್ ಉದ್ದದ ತೆರೆದ ಚರಂಡಿ ಇವೆ. ಇದಕ್ಕಾಗಿ ಪಂಚಾಯಿತಿಯು ೧೯೯೯–೨೦೦೦ದಿಂದ ೨೦೦೧–೦೨ರ ಅವಧಿಯಲ್ಲಿ ೪ ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ. ಪಟ್ಟಣದ ನೈರ್ಮಲ್ಯ ಕಾಪಾಡಲು ೨೨ ಜನ ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

### ಇತರ ಸೌಲಭ್ಯಗಳು

ಈ ಹಿಂದೆ ಪಟ್ಟಣ ಪಂಚಾಯಿತಿ ಒಂದು ಶಿಶುವಿಹಾರವನ್ನು ನಡೆಸುತ್ತಿತ್ತು. ಆದರೆ ಈಗ ಯಾವುದೇ ಶಿಶುವಿಹಾರ ನಡೆಸುತ್ತಿಲ್ಲ ಪಟ್ಟಣಪಂಚಾಯಿತಿಯು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ೧೯೯೯–೨೦೦೦, ೨೦೦೦–೦೧ ಹಾಗೂ ೨೦೦೧–೦೨ನೇ ಸಾಲುಗಳಲ್ಲಿ ರೂ.೫,೦೦೦, ರೂ.೩೫,೦೦೦ ಹಾಗೂ ರೂ.೧೧,೦೦೦ ವಾರ್ಷಿಕ ಅನುದಾನವನ್ನು ಕೊಟ್ಟಿದೆ. ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ೧.೯ ಕಿ.ಮೀ. ಜಲ್ಲಿ ರಸ್ತೆ ೮.೯ಕಿ.ಮೀ. ಟಾರ್ ರಸ್ತೆ ಹಾಗೂ ೯.೮ ಕಿ.ಮೀ. ಮಣ್ಣುರಸ್ತೆ ಇದೆ.

೧೯೫೨ರಲ್ಲಿ ಮೊದಲಬಾರಿಗೆ ಕರ್ನಾಟಕ ವಿದ್ಯುತ್ ಮಂಡಳಿ ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿತು. ೨೦೦೩–೦೪ರಲ್ಲಿ ಪಟ್ಟಣದಲ್ಲಿ ಬೀದಿದೀಪಗಳ ಸಂಖ್ಯೆ ೧,೧೨೫; ೮,೦೦೦ ಮನೆ ಸಂಪರ್ಕಗಳು ಹಾಗೂ ೮೦೦ ವಾಣಿಜ್ಯ ಸಂಪರ್ಕಗಳು ಇವೆ. ಪಂಚಾಯಿತಿ ವ್ಯಾಪ್ತಿಯಲ್ಲಿ ೨.೫೦ ಕಿ.ಮೀ. ವಿಸ್ತೀರ್ಣದಲ್ಲಿ ನಾಲ್ಕು ಕೊಳಚೆಪ್ರದೇಶಗಳು ಇದ್ದು, ಅಲ್ಲಿರುವ ಗುಡಿಸಲುಗಳ ಸಂಖ್ಯೆ ೫೬ ಆಗಿದೆ ಹಾಗೂ ಅಲ್ಲಿನ ನಿವಾಸಿಗಳ ಸಂಖ್ಯೆ ೬,೦೪೪ ಆಗಿರುತ್ತದೆ.

**ಹಣಕಾಸು**

ಆಕ್ಟ್ರಾಯ್ ರದ್ದಾಗುವ ಮೊದಲು ೧೯೭೬, ೧೯೭೭ ಹಾಗೂ ೧೯೭೮ ಈ ಮೂರು ವರ್ಷಗಳಲ್ಲಿ ಪ್ರತೀ ವರ್ಷ ಕ್ರಮವಾಗಿ ರೂ.೬೮,೦೦೦, ರೂ.೭,೦೦,೦೦೦ ಹಾಗೂ ರೂ.೯೦,೦೦೦ ಆಕ್ಟ್ರಾಯ್ (ಸುಂಕ) ಪಟ್ಟಣ ಪಂಚಾಯಿತಿಗೆ ದೊರೆತಿರುತ್ತದೆ. ಆಕ್ಟ್ರಾಯ್ ರದ್ದಾದ ಮೇಲೆ ಇತ್ತೀಚಿನ ಮೂರು ವರ್ಷಗಳಾದ ೧೯೯೯–೨೦೦೦, ೨೦೦೦–೦೧ ಹಾಗೂ ೨೦೦೧–೦೨ ಈ ಸಾಲುಗಳಲ್ಲಿ ರಾಜ್ಯ ಹಣಕಾಸು ಆಯೋಗದ ಅನುದಾನವು ಕ್ರಮವಾಗಿ, ರೂ.೧೭,೧೫,೩೪೦, ರೂ. ೧೯,೧೮,೦೮೬ ಹಾಗೂ ರೂ. ೨೪,೧೦,೮೧೨ ಆಗಿದೆ. ೧೯೯೯–೨೦೦೦ದಲ್ಲಿ

ಪಟ್ಟಣ ಪಂಚಾಯಿತಿ ಪ್ರತೀ ವರ್ಷ ತನ್ನ ಮುಂಗಡಪತ್ರದಲ್ಲಿ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ಶೇ.೧೮ರ ಯೋಜನೆಗಾಗಿ ಮೀಸಲಿಟ್ಟ ಹಣ ಖರ್ಚು ಮಾಡಿದ ವಿವರ ಈ ಕೆಳಗಿದೆ.

(ರೂ.ಗಳಲ್ಲಿ)

| ವರ್ಷ | ಕಾಯ್ದಿರಿಸಿದ ಹಣ | ಖರ್ಚು ಮಾಡಿದ ಹಣ |
|---|---|---|
| ೧೯೯೯–೨೦೦೦ | ೧೦,೭೦,೦೦೦ | ೨೦,೦೦೦ |
| ೨೦೦೦–೨೦೦೧ | ೯೮,೦೦೦ | ೩೬,೪೫೨ |
| ೨೦೦೧–೨೦೦೨ | ೧,೧೦,೦೦೦ | ೨೦೦ |

೧೯೫೬ರಲ್ಲಿ ಪುರಸಭೆ ಕಟ್ಟಡ ನಿರ್ಮಾಣಗೊಂಡಿದ್ದು, ೧೯೮೪ರಲ್ಲಿ ರೂ.೩.೫ಲಕ್ಷ ರೂ. ಗಳಲ್ಲಿ ಅವನ್ನು ನವೀಕರಿಸಿದೆ.

ಪಟ್ಟಣ ಪಂಚಾಯಿತಿಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡಿದ ಹಣದ ಶೇಕಡಾವಾರು ಪ್ರಮಾಣ (ಒಟ್ಟು ಆದಾಯಕ್ಕನುಗುಣವಾಗಿ) ೧೯೯೮–೯೯ ಹಾಗೂ ೨೦೦೧–೦೨ ಈ ಸಾಲುಗಳಲ್ಲಿ ತುಲನಾತ್ಮಕವಾಗಿ ವಿಶ್ಲೇಷಣೆಯ ಉದ್ದೇಶದಿಂದ ಈ ಕೆಳಗಿನ ಪಟ್ಟಿಯಲ್ಲಿ ವಿವರ ನೀಡಿದೆ.

(ಶೇಕಡಾವಾರು)

| ಕ್ರ.ಸಂ. | ವಿವರ | ೧೯೯೮–೯೯ | ೨೦೦೧–೦೨ |
|---|---|---|---|
| ೧ | ಆರೋಗ್ಯ ಮತ್ತು ನೈರ್ಮಲ್ಯ | ೨೪ | ೩೭ |
| ೨ | ಸಾರ್ವಜನಿಕ ಕಾಮಗಾರಿ | ೬ | ೬ |
| ೩ | ನೀರು ಸರಬರಾಜು | ೧೪ | ೧೪ |
| ೪ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೮ | ೮ |
| ೫ | ಚರಂಡಿ ಮತ್ತು ಸಾಂಕ್ರಾಮಿಕಗಳ ನಿಯಂತ್ರಣ | ೨ | ೨ |
| ೬ | ಸಿಬ್ಬಂದಿ ಪ್ರಭಾರ | – | – |
| ೭ | ಇತರೆ | ೪೬ | ೩೬ |

**ಪಟ್ಟಣಪಂಚಾಯಿತಿಯ ಕಳೆದ ಐದು ವರ್ಷಗಳ ಜಮಾ–ಖರ್ಚಿನ ವಿವರ**

(ರೂ.ಗಳಲ್ಲಿ)

| ಕ್ರ.ಸಂ. | ವಿವರಗಳು | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ | ೨೦೦೦–೦೧ | ೨೦೦೧–೦೨ |
|---|---|---|---|---|---|---|
| ೧ | ಆರಂಭ ಶಿಲ್ಕು | ೬೭,೬೯೦ | ೬,೬೬,೨೨೯ | ೨,೮೯,೯೮೫ | ೧,೦೭,೨೩೧ | ೮,೪೬,೨೨೫ |
| ೨ | ಜಮಾ | ೨೮,೬೬,೭೮೮ | ೪೨,೧೧,೩೬೨ | ೪೩,೬೬,೬೮೫ | ೪೨,೦೩,೭೦೦ | ೪೪,೪೪,೮೪೦ |
| ೩ | ಒಟ್ಟು | ೨೯,೩೪,೪೭೮ | ೪೮,೭೭,೫೯೧ | ೪೬,೫೬,೬೭೦ | ೪೩,೧೦,೯೩೧ | ೫೨,೯೧,೦೬೫ |
| ೪ | ಖರ್ಚು | ೨೨,೬೮,೨೪೯ | ೪೫,೮೭,೬೦೬ | ೪೫,೪೯,೪೩೯ | ೩೪,೬೪,೭೦೬ | ೪೫,೯೪,೫೭೬ |
| ೫ | ಅಖೈರು ಶಿಲ್ಕು | ೬,೬೬,೨೨೯ | ೨,೮೯,೯೮೫ | ೧,೦೭,೨೩೧ | ೮,೪೬,೨೨೫ | ೬,೯೬,೪೮೯ |

ಸ್ವರ್ಣ ಜಯಂತಿ ಸ್ವಯಂ ರೋಜ್ಗಾರ್ ಯೋಜನೆಯನ್ವಯ ಪಟ್ಟಣ ಪಂಚಾಯಿತಿಗೆ ಬಿಡುಗಡೆ ಮಾಡಿದ ಹಣ, ಖರ್ಚಾದ ಹಣ ಹಾಗೂ ಫಲಾನುಭವಿಗಳ ವಿವರಗಳು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ಕ್ರ.ಸಂ. | ಉಪಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ ರೂ.ಗಳು | ಖರ್ಚಾದ ಅನುದಾನ ರೂ.ಗಳು | ಫಲಾನುಭವಿಗಳ/ ಕಾಮಗಾರಿಗಳ ಸಂಖ್ಯೆ |
|---|---|---|---|---|
| ೧) | **ಸ್ವಯಂ ಉದ್ಯೋಗ ಯೋಜನೆ** | | | |
| | ಅ) ಸಣ್ಣ ಉದ್ದಿಮೆ | ೧,೯೬,೬೪೫ | ೧,೪೬,೮೭೬ | ೩೨ |
| | ಆ) ಡ್ವಾಕ್ವಾ | ೧,೨೫,೦೦೦ | ೧,೨೫,೦೦೦ | ೧೮ |
| ೨) | **ತರಬೇತಿ ಕಾರ್ಯಕ್ರಮ** | ೧,೭೬,೨೮೭ | ೧,೭೩,೯೦೦ | ೭೬ |
| ೩) | **ಸಾಮಾಜಿಕ ಸೇವೆಗಳು** | ೬೫,೬೦೦ | ೬೦,೯೮೦ | ೩೫೦ |
| ೪) | **ನಗರ ಕೂಲಿ ಉದ್ಯೋಗ** | ೪,೫೦,೦೦೦ | ೪,೩೦,೭೨೮ | ೧೩ |

ಮೂಲ: ಪಟ್ಟಣಪಂಚಾಯಿತಿ ಶ್ರೀನಿವಾಸಪುರ

**ಪಟ್ಟಣ ಪಂಚಾಯಿತಿ, ಗುಡಿಬಂಡೆ**

ಪ್ರಾರಂಭದಲ್ಲಿ, ಗುಡಿಬಂಡೆ ಪಟ್ಟಣಪಂಚಾಯಿತಿಯು ಪುರಸಭೆಯಾಗಿ ೧೯೪೪ರಲ್ಲಿ ಸ್ಥಾಪನೆಗೊಂಡಿತ್ತು. ಆಗ ಅದರ ಚುನಾಯಿತ ಸದಸ್ಯರ ಸಂಖ್ಯೆ ಆರು ಆಗಿದ್ದಿತು. ಜನಸಂಖ್ಯೆ ಆಧರಿಸಿ ಈ ಪುರಸಭೆಯನ್ನು ಪಟ್ಟಣಪಂಚಾಯಿತಿಯಾಗಿ ಸರ್ಕಾರ ಮಾರ್ಪಡಿಸಿತು. ಸಂವಿಧಾನದ ೭೪ನೇ ತಿದ್ದುಪಡಿಯಂತೆ ಇತ್ತೀಚೆಗೆ ೨೦೦೧-೦೨ರಲ್ಲಿ ಚುನಾವಣೆಗಳು ನಡೆದು ೧೧ ಜನ ಸದಸ್ಯರು ಚುನಾಯಿತರಾದರು. ಚುನಾಯಿತ ಸದಸ್ಯರ ಸಂಖ್ಯೆ ಮೀಸಲು ಸ್ಥಾನಗಳೊಂದಿಗಿನ ಹಂಚಿಕೆ ಈ ಕೆಳಗಿನಂತಿದೆ.

| ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಸಾಮಾನ್ಯ ವರ್ಗ | | ಪರಿಶಿಷ್ಟ ಪಂಗಡ | | ಒಟ್ಟು |
|---|---|---|---|---|---|---|---|---|
| ಗಂ. | ಹೆ. | ಗಂ. | ಹೆ. | ಗಂ. | ಹೆ. | ಗಂ. | ಹೆ. | |
| ೧ | ೩ | ೦ | ೨ | ೧ | ೧ | ೨ | ೧ | ೧೧ |

ಗುಡಿಬಂಡೆಯ ಜನಸಂಖ್ಯೆ (೨೦೦೧ರ ಜನಗಣತಿಯಂತೆ) ೮, ೮೦೭ ಆಗಿದ್ದು ೨,೦೯೩ ಮನೆಗಳನ್ನು ಹೊಂದಿದೆ. ಪಟ್ಟಣದ ವಿಸ್ತೀರ್ಣ ೨.೬ ಚ.ಕಿ.ಮೀ. ಆಗಿದೆ. ಪಟ್ಟಣವನ್ನು ೧೧ ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ.

**ನೀರು ಸರಬರಾಜು:** ಪಟ್ಟಣಕ್ಕೆ ಬಹಳ ಹಿಂದಿನಿಂದಲೂ ಸೇದುವ ಬಾವಿಗಳಿಂದ ನೀರು ಸರಬರಾಜುಗೊಳ್ಳುತ್ತಿತ್ತು. ಈಗ ಕೊಳವೆಬಾವಿಗಳನ್ನು ಕೊರೆದು, ವಿದ್ಯುತ್ ಮೋಟಾರುಗಳನ್ನು ಅಳವಡಿಸಿ, ಕೊಳವೆಗಳ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಪಟ್ಟಣದ ಬಾಬುಜಿನಗರ ಹಾಗೂ ಪ್ರವಾಸಿಮಂದಿರದ ಬಳಿ ನಿರ್ಮಿಸಲಾದ ೧ ಲಕ್ಷ ಗ್ಯಾಲನ್ ಹಾಗೂ ೧೦ ಸಾವಿರ ಗ್ಯಾಲನ್ ಸಾಮರ್ಥ್ಯದ ಎರಡು ಓವರ್ ಹೆಡ್ ಸಂಗ್ರಾಹಕಗಳನ್ನು ನಿರ್ಮಿಸಿ, ಅಲ್ಲಿಂದ ಪಟ್ಟಣಕ್ಕೆ ನೀರು ಪೂರೈಸಲಾಗುತ್ತಿದೆ. ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಆಣೆಕಟ್ಟಿನಿಂದ ನೀರು ಪಡೆದು, ಶುದ್ಧೀಕರಣ ಘಟಕಗಳನ್ನು ನಿರ್ಮಿಸಿ, ನೀರನ್ನು ಶುದ್ಧೀಕರಿಸಿ ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಚಿತ್ರಾವತಿ ನದಿಗೆ ನಿರ್ಮಿಸಿದ ಆಣೆಕಟ್ಟಿನಿಂದ ನೀರು ಪೂರೈಕೆ ಯೋಜನೆಯ ಕಾರ್ಯ ಪ್ರಗತಿಯಲ್ಲಿ ಇದೆ.

ಪ್ರಸ್ತುತ, ಪಟ್ಟಣಕ್ಕೆ ೨,೮೦,೦೦೦ ಲೀಟರ್ ನೀರು ಸರಬರಾಜುಗೊಳ್ಳುತ್ತಿದ್ದು ನೀರಿನ ತಲಾವಾರು ಹಂಚಿಕೆ ೩೦ ಲೀಟರ್ ಎಲ್.ಪಿ.ಸಿ.ಡಿ. ಆಗಿದೆ. ಪಟ್ಟಣಪಂಚಾಯಿತಿಯು ನೀರು ಸರಬರಾಜಿಗಾಗಿ ೨೦೦೧-೦೨ನೇ ಸಾಲಿನಲ್ಲಿ ಮಾಡಿದ ವಾರ್ಷಿಕ ವೆಚ್ಚ ೧,೫೬,೦೦೦ ರೂ. ಆಗಿದೆ. ೨೦೦೦-೦೧, ೨೦೦೧-೦೨, ೨೦೦೨-೦೩ ಹಾಗೂ ಈ ಸಾಲುಗಳಲ್ಲಿ ನೀರಿನ ತೆರಿಗೆ ರೂಪದಲ್ಲಿ

ಸಂಗ್ರಹಿಸಿದ ಹಣ ಕ್ರಮವಾಗಿ ರೂ.೧,೬೨,೦೦೦, ರೂ.೧,೮೮,೦೦೦ ಹಾಗೂ ರೂ.೧,೭೧,೫೨೦ ಆಗಿರುತ್ತದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ೭೫ ಸಾರ್ವಜನಿಕ ನಲ್ಲಿಗಳು ಹಾಗೂ ೪೫೦ ಖಾಸಗಿ ನಲ್ಲಿಗಳಿವೆ.

## ಆರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ

ನಗರದ ನೈರ್ಮಲ್ಯ ಕಾಪಾಡಲು ಪಟ್ಟಣ ಪಂಚಾಯಿತಿಯು ೨೦ ಜನ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಸಾಂಕ್ರಾಮಿಕಗಳು ಹರಡದಂತೆ ಮುಂಜಾಗ್ರತಾ ಕ್ರಮವಾದ ಕ್ರಿಮಿನಾಶಕ ಸಿಂಪಡಣೆ ರೋಗನಿರೋಧಕಗಳನ್ನು ನೀಡುವ, ಜವಾಬ್ದಾರಿಯನ್ನು ಕಾರ್ಯಾಲಯದ ಆರೋಗ್ಯ ನಿರೀಕ್ಷಕರು ನೋಡಿಕೊಳ್ಳುವರು. ಜನನ, ಮರಣ ದಾಖಲಾತಿಯನ್ನು ಕಾರ್ಯಾಲಯ ಸಿಬ್ಬಂದಿ ನಿರ್ವಹಿಸುತ್ತದೆ. ಪಟ್ಟಣದಲ್ಲಿ 'ಎಲ್' ಮಾದರಿಯ ಚರಂಡಿ ೯೦೦ ಮೀಟರ್ ಇದೆ ಹಾಗೂ 'ಯು' ಮಾದರಿಯ ಚರಂಡಿ ೬೫೦ ಮೀಟರ್ ಇದೆ.

**ಇತರೆ ಸೌಲಭ್ಯಗಳು:** ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ೩.೪ಕಿ.ಮೀ. ಜಲ್ಲಿ ಕಲ್ಲುರಸ್ತೆ, ೪.೩ ಕಿ.ಮೀ, ಡಾಂಬರ್ ರಸ್ತೆ ಹಾಗೂ ೨.೮ ಕಿ.ಮೀ. ಕಾಂಕ್ರೀಟ್ ರಸ್ತೆ ಇದೆ. ಪ್ರಥಮ ಬಾರಿಗೆ ೧೯೫೬ರಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯು, ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿತು. ಪ್ರಸ್ತುತ (೨೦೦೨–೦೩)ರ ಹೊತ್ತಿಗೆ ೧,೮೧೫ ಮನೆ ವಿದ್ಯುತ್ ಸಂಪರ್ಕಗಳು, ೪೧೦ ಬೀದಿದೀಪಗಳು ಹಾಗೂ ೬೫ ವಾಣಿಜ್ಯ ವಿದ್ಯುತ್ ಸಂಪರ್ಕಗಳನ್ನು ಪಟ್ಟಣಕ್ಕೆ ಒದಗಿಸಲಾಗಿದೆ.

ಪಟ್ಟಣಪಂಚಾಯಿತಿಯ ಕ್ಷೇತ್ರ ವ್ಯಾಪ್ತಿಯಲ್ಲಿ, ಮೂರು ಕೊಳಚೆ ಪ್ರದೇಶಗಳು ಇದ್ದು, ಅವುಗಳ ಒಟ್ಟು ವಿಸ್ತೀರ್ಣ ೦.೪ ಚ.ಕಿ.ಮೀ. ಅಲ್ಲಿನ ಗುಡಿಸಲುಗಳ ಸಂಖ್ಯೆ ೧೩೦ ಆಗಿದೆ ಹಾಗೂ ಈ ಪ್ರದೇಶದಲ್ಲಿನ ನಿವಾಸಿಗಳ ಸಂಖ್ಯೆ ೨,೫೦೦ ಆಗಿರುತ್ತದೆ.

**ಹಣಕಾಸು:** ಆಕ್ಟ್ರಾಯ್ ರದ್ದಾದ ನಂತರ ಎಲ್ಲ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಆಕ್ಟ್ರಾಯ್ ಅನುದಾನ ಪಡೆಯುತ್ತಿವೆ. ಕಳೆದ ಮೂರು ವರ್ಷಗಳಾದ ೨೦೦೧–೦೨, ೨೦೦೨–೦೩, ೨೦೦೩–೦೪ರ ಸಾಲಿನಲ್ಲಿ ಪಟ್ಟಣ ಪಂಚಾಯಿತಿಯು ಪಡೆದ ಆಕ್ಟ್ರಾಯ್ (ಜಕಾತಿ) ಅನುದಾನವು ಕ್ರಮವಾಗಿ ರೂ.೧,೮೭,೦೦೦, ರೂ.೧,೮೭,೦೦೦ ಹಾಗೂ ರೂ.೨,೨೪,೦೦೦ ಆಗಿದೆ. ೨೦೦೧–೦೨ರಲ್ಲಿ ಪಟ್ಟಣಪಂಚಾಯಿತಿಯ ರೂ.೫,೦೦,೦೦೦ಗಳ ಅಭಿವೃದ್ಧಿ ಅನುದಾನವನ್ನು ಸಹ ಸರ್ಕಾರದಿಂದ ಪಡೆದಿದೆ.

ಪಂಚಾಯಿತಿ ಇತ್ತೀಚಿನ (೨೦೦೧–೦೨ ರಿಂದ ೨೦೦೩–೦೪) ಮೂರು ವರ್ಷಗಳಲ್ಲಿ ತನ್ನ ಮುಂಗಡ ಪತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಿಟ್ಟ ಹಣ ಕ್ರಮವಾಗಿ ರೂ.೫೦,೦೦೦, ರೂ.೫೦,೦೦೦, ರೂ.೫೦,೦೦೦ ಹಾಗೂ ಖರ್ಚು ಮಾಡಿದ ಹಣ ಕ್ರಮವಾಗಿ ರೂ.೫೦,೦೦೦ ರೂ.೪೧,೦೦೦ ಹಳಗೂ ೧೬,೦೦೦ ರೂ. ಆಗಿದೆ.

ಪಂಚಾಯಿತಿ ಕಾರ್ಯಾಲಯವು ೨೦೦೨–೦೩ರಲ್ಲಿ ೨.೬ ಲಕ್ಷ ವೆಚ್ಚದಲ್ಲಿ ಮಾರುಕಟ್ಟೆ ಸಂಕೀರ್ಣ ಹಾಗೂ ೧೯೯೨–೯೩ರಲ್ಲಿ ಒಂದು ಲಕ್ಷ ರೂ. ವೆಚ್ಚದಲ್ಲಿ ಮಟನ್ ಮಾರುಕಟ್ಟೆಯನ್ನು ನಿರ್ಮಿಸಿದೆ.

ಪಂಚಾಯಿತಿಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬುಗಳಿಗೆ ಖರ್ಚು ಮಾಡಿದ ಹಣ (ಒಟ್ಟು ಆದಾಯಕ್ಕನುಗುಣವಾಗಿ)ದ ಶೇಕಡಾ ಪ್ರಮಾಣ ೧೯೯೮–೯೯ ಹಾಗೂ ೨೦೦೧–೦೨ರಲ್ಲಿ ಇದ್ದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಶೇಕಡಾವಾರು

| ಕ್ರ.ಸಂ. | ವಿವರ | ೧೯೯೮–೯೯ | ೨೦೦೧–೦೨ |
|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧೧ | ೧೧ |
| ೨ | ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ | ೧೫ | ೨೦ |
| ೩ | ನೀರು ಸರಬರಾಜು | ೧೭ | ೧೭ |
| ೪ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೨೫ | ೧೬ |

| | | | |
|---|---|---|---|
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗಗಳ | ೫ | ೧೦ |
| ೬ | ಸಿಬ್ಬಂದಿ ಪ್ರಭಾರ | ೨೩ | ೨೩ |
| ೭ | ಇತರೆ | ೫ | ೪ |

ಮೂಲ: ಪಟ್ಟಣ ಪಂಚಾಯಿತಿ, ಗುಡಿಬಂಡೆ

ಎಸ್.ಜೆ.ಎಸ್.ಆರ್.ವೈ ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನೆಯಡಿ ಸಾಧಿಸಲಾದ ಪ್ರಗತಿ ಈ ಕೆಳಗಿನಂತಿದೆ.

| ಕ್ರ.ಸಂ. | ಉಪಯೋಜನೆಯ ಹೆಸರು | ಬಿಡುಗಡೆಯಾದ ಅನುದಾನ ರೂ.ಗಳಲ್ಲಿ | ಖರ್ಚು ರೂ.ಗಳಲ್ಲಿ | ಫಲಾನುಭವಿಗಳ/ ಕಾಮಗಾರಿಗಳ ಸಂಖ್ಯೆ |
|---|---|---|---|---|
| ೧ | ಸಣ್ಣ ಉದ್ದಿಮೆ | ೧,೩೭,೫೦೦ | ೮೦,೨೫೦ | ೨೮ |
| ೨ | ಡ್ವಾಕ್ವಾ | ೧,೭೫,೦೦೦ | ೬೦,೫೦೦ | ೧೦ |
| ೩ | ತರಬೇತಿ ಕಾರ್ಯಕ್ರಮ | ೧,೪೭,೦೦೦ | ೧,೧೫,೦೦೦ | ೬೫ |
| ೪ | ನಗರ ಕೂಲಿ ಉದ್ಯೋಗ | ೧,೭೯,೨೬೦ | ೪,೫೯,೨೬೦ | ೨೦ |
| ೫ | ಸಾಮಾಜಿಕ ಸೇವೆಗಳು | ೯೧,೫೨೦ | ೨೬,೫೨೦ | ೨೦೦ |

**ಕಳೆದ ಐದು ವರ್ಷಗಳ ಪಟ್ಟಣ ಪಂಚಾಯಿತಿಯ ಆದಾಯ ಮತ್ತು ವೆಚ್ಚಗಳ ತ:ಖ್ತೆ**

(ರೂ.ಗಳಲ್ಲಿ)

| ವಿವರಗಳು | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ |
|---|---|---|---|---|---|
| ಆರಂಭ ಶಿಲ್ಕು | ೧,೦೯,೮೯೦ | ೧,೧೧,೩೮೦ | ೧,೩೧,೯೦೦ | ೧,೩೭,೯೦೦ | ೧೧,೪೭,೯೦೦ |
| ಜಮಾ | ೧೦,೯೮,೨೦೦೦ | ೧೧,೦೩೧,೦೦೦ | ೧,೧೨,೩೧,೦೦೦ | ೧,೨೦,೭೦,೫೦೦ | ೧೩೫೧೪೦೦೦ |
| ಒಟ್ಟು | ೧೨,೦೮,೦೯೦೦ | ೧೧೧,೪೨೩೮೦ | ೧೧,೩೬,೨೯೦೦ | ೧೨೨೦೮೪೦೦ | ೧,೪೬,೬೧,೯೦೦ |
| ಖರ್ಚು | ೧೦,೯೬,೨೦೦ | ೧,೧೦,೧೦,೪೮೦ | ೧,೧೨,೨೫,೦೦೦ | ೧೧೦೬೦೫೦೦ | ೧೩,೩೮೪,೦೦೦ |
| ಅಖೈರ್ ಶಿಲ್ಕು | ೧,೧೧,೯೩೦ | ೧,೩೧,೯೦೦ | ೧೩,೭೯,೦೦೦ | ೧೧೪೭೯೦೦ | ೧೨,೭೭೯,೦೦ |

ಮೂಲ: ಪಟ್ಟಣ ಪಂಚಾಯಿತಿ, ಗುಡಿಬಂಡೆ

### ವಸತಿ ಯೋಜನೆ

ಕೈಗಾರಿಕೀಕರಣ, ನಗರೀಕರಣದಂತಹ ಬದಲಾವಣೆಗೊಳ್ಳುತ್ತಿರುವ ಸನ್ನಿವೇಶಗಳು ಗ್ರಾಮೀಣ ಜನತೆ ಮೇಲೆ ಪರಿಣಾಮ ಬೀರುತ್ತಿದ್ದು, ಜನರು ನಗರ/ಪಟ್ಟಣಗಳಿಗೆ ತಮ್ಮ ಜೀವನೋಪಾಯಕ್ಕೆ ಕೆಲಸ ಹುಡುಕಿಕೊಂಡು ಹೋಗುತ್ತಿರುವುದು ಸಾಮಾನ್ಯವಾಗಿ ಕಾಣಬರುತ್ತದೆ ಹಾಗೂ ಜನರ ವಲಸೆ ದಿನೇ ದಿನೇ ಹೆಚ್ಚುತ್ತಿದೆ. ಹೀಗಾಗಿ, ನಗರ/ಪಟ್ಟಣಗಳಲ್ಲಿ ವಲಸೆ ಬಂದ ಜನರಿಗೆ ಮೂಲಭೂತ ಸೌಕರ್ಯ ಒದಗಿಸುವಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತಿವೆ. ಇಂತಹ ಸಮಸ್ಯೆಗಳಲ್ಲಿ ವಸತಿ ಸಮಸ್ಯೆಯು ಒಂದಾಗಿದ್ದು ವಿಶೇಷವಾಗಿ ನಗರದಲ್ಲಿ ಈ ಸಮಸ್ಯೆ ತೀವ್ರಗೊಳ್ಳುತ್ತಿದೆ. ಅಭಿವೃದ್ಧಿ ಹೊಂದಿದ ನಿವೇಶನಗಳ ಕೊರತೆ, ಹೆಚ್ಚುತ್ತಿರುವ ನಿರ್ಮಾಣ ವೆಚ್ಚ ಹಾಗೂ ಕಾರ್ಮಿಕರ ವಲಸೆ ಮುಂತಾದ ಅಂಶಗಳು, ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿವೆ. ರಾಜ್ಯದ ಇತರ ಭಾಗಗಳಲ್ಲಿರುವಂತೆ ಕೋಲಾರ ಜಿಲ್ಲೆಯಲ್ಲಿ ವಾಸದ ಮನೆಗಳ ಕೊರತೆ ಇದ್ದು, ಗೃಹ ನಿರ್ಮಾಣ ಸಹಕಾರ ಸಂಘಗಳು, ನಗರಾಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿ ಮುಂತಾದ ಸಂಸ್ಥೆಗಳು ಗೃಹ ನಿರ್ಮಾಣಕ್ಕೆ ಸಹಕರಿಸುತ್ತಿವೆ. ವಿವಿಧ ಯೋಜನೆಯಡಿ ನಿರ್ಮಿಸಲಾದ ಜನತಾ ಗೃಹಗಳು, ಹುಡ್ಕೋ ನಿರ್ಮಾಣಗಳು ಹಾಗೂ ಇತರ ಕಡಿಮೆ ನಿರ್ಮಾಣ ವೆಚ್ಚದ

ಮನೆಗಳು; ಭಾಗ್ಯಮಂದಿರ ಯೋಜನೆಯಡಿ ನಿರ್ಮಾಣಗೊಂಡ ಮನೆಗಳು, ಇಂದಿರಾ ಆವಾಸ್ ಯೋಜನೆ ಮನೆಗಳು, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಆಶ್ರಯ ಯೋಜನೆಯಡಿ ನಿರ್ಮಾಣಗೊಂಡ ಮನೆಗಳು ಮುಂತಾದ ಗೃಹನಿರ್ಮಾಣ ಚಟುವಟಿಕೆಗಳು ವಸತಿ ಸಮಸ್ಯೆಯನ್ನು ಪರಿಹರಿಸಲು ಸ್ವಲ್ಪಮಟ್ಟಿಗೆ ಸಹಾಯ ಮಾಡಿವೆ. ಗೃಹ ನಿರ್ಮಾಣ ಸಮಸ್ಯೆಯನ್ನು ನೀಗಲು ಜಿಲ್ಲೆಯಲ್ಲಿ ಬೃಹತ್ ಗೃಹನಿರ್ಮಾಣ ಚಟುವಟಿಕೆಗಳನ್ನು ಸರ್ಕಾರವು ಸೇರಿದಂತೆ ಅನೇಕ ಸಂಸ್ಥೆಗಳು ಕೈಗೊಂಡಿವೆ. ಇವುಗಳಲ್ಲಿ ಕೆಲವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದೆ. ಗ್ರಾಮ ಲೆಕ್ಕಗರಿಗಾಗಿ, ಪೊಲೀಸ್ ಹಾಗೂ ಆಸ್ಪತ್ರೆ ಸಿಬ್ಬಂದಿಗಾಗಿ ಪ್ರತ್ಯೇಕವಾಗಿ ಮನೆಗಳನ್ನು ನಿರ್ಮಾಣ ಮಾಡಿ ವಸತಿ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನೀಗಿಸಲಾಗಿದೆ. ಸರ್ಕಾರವು ಕೈಗೊಂಡಿರುವ ಕೆಲವು ಗೃಹ ನಿರ್ಮಾಣ ಯೋಜನೆಗಳನ್ನು ಈಗಾಗಲೇ ಕೋಲಾರ ಜಿಲ್ಲಾ ಪಂಚಾಯತ್ ಕಾರ್ಯಚಟುವಟಿಕೆಯಡಿ ವಿವರಿಸಲಾಗಿದೆ. ಜಿಲ್ಲೆಯಲ್ಲಿ ೨೦೦೧–೦೨ನೇ ಸಾಲಿನವರೆಗೆ ಅಂಬೇಡ್ಕರ್ ಯೋಜನೆಯಡಿ ೨೨೬ ಮನೆಗಳನ್ನು ಕಟ್ಟಿಕೊಡಲಾಗಿದೆ. ಇಂದಿರಾ ಆವಾಸ ಯೋಜನೆಯಡಿ ೧,೬೬೨ ಮನೆಗಳ ನಿರ್ಮಾಣ ಮಾಡಿದೆ ಹಾಗೂ ಆಶ್ರಯ ಯೋಜನೆಯಡಿ ಹಂಚಿದ ಮನೆ ನಿವೇಶನಗಳ ಸಂಖ್ಯೆಯು ೨,೨೨೮ ಆಗಿದೆ.

**ಕರ್ನಾಟಕ ಗೃಹ ಮಂಡಳಿ**

ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಕರ್ನಾಟಕ ಗೃಹಮಂಡಳಿಯು ಜಿಲ್ಲೆಯಲ್ಲಿಯ ವಾಸದ ಮನೆಗಳ ಸಮಸ್ಯೆಗಳನ್ನು ಪರಿಹರಿಸಲು ಗೃಹನಿರ್ಮಾಣ ಚಟುವಟಿಕೆಗಳನ್ನು ಕೈಗೊಂಡಿದೆ. ಕೋಲಾರದ ಜಿಲ್ಲಾ ಯೋಜನಾ ಕಚೇರಿಯು ಪ್ರಾರಂಭಗೊಂಡಾಗಿನಿಂದ ವಿವಿಧ ಯೋಜನೆಗಳಡಿ ವಸತಿಹೀನರಿಗೆ ವಸತಿ ಒದಗಿಸುತ್ತಿದೆ.

**ಕೋಷ್ಟಕ ೧೨.೮: ಗೃಹ ನಿರ್ಮಾಣ ಯೋಜನೆಯಡಿ ಕೋಲಾರ ಜಿಲ್ಲೆಯಲ್ಲಿ ಮಂಡಳಿ ಪ್ರಾರಂಭಗೊಂಡಾಗಿನಿಂದ ಇಲ್ಲಿಯವರೆಗೆ ಕಟ್ಟಲಾದ ಮನೆಗಳ ತಾಲೂಕುವಾರು ವಿವರ.**

(ಸಂಖ್ಯೆಗಳಲ್ಲಿ)

| ಕ್ರ ಸಂ | ತಾಲೂಕು | ಹಡ್ಕೋ ನೆರವಿನ ಸಮುದಾಯ ಮನೆಗಳು | ಹಡ್ಕೋ ನೆರವಿನಲ್ಲಿ ಮನೆಗಳು | ಎಸ್.ಆರ್. ಎಚ್.ಎಸ್ | ಕಡಿಮೆ ವೆಚ್ಚದ ವಸತಿ ಯೋಜನೆ | ಶಿಕ್ಷಕರ ವಸತಿ ಗೃಹಗಳು | ವೈದ್ಯಾಧಿಕಾರಿ ಹಾಗೂ ದಾದಿಯರ ಮನೆಗಳು | ಗ್ರಾಮೀಣ ವಸತಿ ಯೋಜನೆಯಡಿ ನಿರ್ಮಾಣ ಗೊಂಡ ಮನೆಗಳು | ಆಶ್ರಯ ವಸತಿ ಯೋಜನೆ | ಒಟ್ಟು |
|---|---|---|---|---|---|---|---|---|---|---|
| ೧ | ಕೋಲಾರ | ೨೫ | ೨೦ | – | – | ೭ | ೩ | ೧೪೨ | ೪೦ | ೪೪೬ |
| ೨. | ಬಂಗಾರಪೇಟೆ | ೯ | ೪೮ | ೨೦ | – | ೧೨ | – | ೪೦ | ೪೫ | ೧೭೪ |
| ೩. | ಮುಳಬಾಗಿಲು | – | – | – | – | – | ೩ | ೧೨ | ೧೫ | ೩೦ |
| ೪. | ಮಾಲೂರು | – | – | – | – | ೧೮ | – | ೬೭ | ೨೫೬ | ೩೪೧ |
| ೫ | ಶಿಡ್ಲಘಟ್ಟ | – | ೬೯ | ೪ | – | ೨೨ | ೩ | – | ೧೬೧ | ೨೫೯ |
| ೬ | ಚಿಕ್ಕಬಳ್ಳಾಪುರ | – | – | ೨೦ | – | ೧೦ | – | – | ೧೭ | ೪೭ |
| ೭ | ಚಿಂತಾಮಣಿ | – | – | – | – | ೧೨ | – | ೯ | ೨೦ | ೪೧ |
| ೮ | ಶ್ರೀನಿವಾಸಪುರ | – | – | – | – | ೬ | – | – | ೨೫ | ೩೧ |
| ೯. | ಬಾಗೇಪಲ್ಲಿ | – | ೯೮ | – | ೫೦ | ೧೮ | ೩ | ೩೦ | ೩೫ | ೨೩೪ |
| ೧೦. | ಗುಡಿಬಂಡೆ | – | ೧೮ | ೨೨ | – | ೧೨ | – | – | – | ೫೨ |
| ೧೧ | ಗೌರಿಬಿದನೂರು | – | – | – | – | – | – | – | ೯ | ೯ |
| | ಒಟ್ಟು | | ೨೫೩ | ೬೬ | ೫೦ | ೧೧೭ | ೧೨ | ೩೦೦ | ೧೦೩೩ | ೨೬೧೪ |

ಮೂಲ: ಕರ್ನಾಟಕ ಗೃಹ ಮಂಡಳಿ, ಕೋಲಾರ

ಜಿಲ್ಲಾ ಯೋಜನಾ ಕಚೇರಿಯು ಕೋಲಾರ ಜಿಲ್ಲೆಯಲ್ಲಿ ಬಡಾವಣೆಗಳ ನಿರ್ಮಾಣ, ಎಲ್.ಐ.ಜಿ. (ಕಡಿಮೆ ಆದಾಯ ವರ್ಗ) ಎಂ.ಐ.ಜಿ. (ಮಧ್ಯಮ ಆದಾಯ ವರ್ಗ) ಹಾಗೂ ಎಚ್ಐಜಿ (ಹೆಚ್ಚಿನ ಆದಾಯ ವರ್ಗ)ಜನರಿಗೆ ಮನೆಗಳನ್ನು ನಿರ್ಮಿಸಿಕೊಡುವುದು ಹಾಗೂ ನಿವೇಶನಗಳನ್ನು ಮಾಡಿ ವಿತರಿಸುವುದು, ಆಶ್ರಯ ಯೋಜನೆ, ಎಸ್.ಆರ್.ಎಚ್.ಎಸ್. (ಸಬ್ಸಿಡೈಜ್ ರೆಂಟಲ್ ಹೌಸಿಂಗ್ ಸ್ಕೀಮ್) ಮುಂತಾದ ಯೋಜನೆಗಳಡಿ ಗೃಹನಿರ್ಮಾಣ ಕಾರ್ಯದಲ್ಲಿ ಮಂಡಳಿ ತೊಡಗಿದೆ. ಹಣಕಾಸಿನ ಸಂಸ್ಥೆಯಾದ ಹುಡ್ಕೋ ನೆರವಿನ ಯೋಜನೆಗಳನ್ನು ಸಹ ಇದು ಕೈಗೊಂಡಿದೆ. ಕೋಲಾರದ ಹಾರೋಹಳ್ಳಿಯಲ್ಲಿ ೨೬ ಎಕರೆ ೩೨ ಗುಂಟೆ ಪ್ರದೇಶದಲ್ಲಿ, ಹುಡ್ಕೊ ನೆರವಿನಿಂದ ೧೧೬ ಮನೆಗಳನ್ನು ನಿರ್ಮಿಸಿದೆ. ೧೯೮೨–೮೩ರಲ್ಲಿ ಕೀಲುಕೋಟದಲ್ಲಿ ಪುರಸಭೆಯಿಂದ ೬೭ ನಿವೇಶನಗಳನ್ನು ಕೊಂಡು ೬೬ ಮನೆಗಳನ್ನು ಕಟ್ಟಿದೆ. ಕೆಜಿಎಫ್‌ನ ಮಸಕುಮನಲ್ಲಿ ೧೭೫' x ೬೭೫' ಹಾಗೂ ೨೮.೫ ಗುಂಟೆಪ್ರದೇಶದಲ್ಲಿ ೭೯ ಮನೆಗಳನ್ನು ನಿರ್ಮಿಸಿದೆ. ಅದರಂತೆ ಬಂಗಾರಪೇಟೆಯಲ್ಲಿ ೪೦' x ೬೦'ರ ೨೯ ನಿವೇಶನಗಳನ್ನು ಕೊಂಡು, ೫೮ ಎಲ್.ಐ.ಜಿ ಮನೆಗಳು ಅದೇ ವರ್ಷ (೧೯೮೨–೮೩) ನಿರ್ಮಿಸಿ ಹಾಗೂ ಹಂಚಿಕೆ ಮಾಡಿದೆ ಶಿಡ್ಲಘಟ್ಟದಲ್ಲಿ ೧,೬೧,೧೭೨ ಚ.ಅಡಿ ಜಮೀನಿನಲ್ಲಿ (೧೯೭೮–೭೯)ರಲ್ಲಿ ೩೯ ಮನೆಗಳನ್ನು ನಿರ್ಮಿಸಿದೆ. ಬಾಗೇಪಲ್ಲಿಯಲ್ಲಿ ೬ ಎಕರೆ ೧೦ ಗುಂಟೆ ಜಮೀನಿನಲ್ಲಿ ೪೫ ಮನೆಗಳನ್ನು ಕಟ್ಟಿದೆ ಹಾಗೂ ೪೩ ನಿವೇಶನಗಳನ್ನು ಮಾಡಿ ವಿತರಿಸಿದೆ. ಎಸ್.ಆರ್.ಎಸ್.ಹೆಚ್. ಯೋಜನೆಯಡಿ ಒಟ್ಟು ೬೬ ಮನೆಗಳನ್ನು ಚಿಕ್ಕಬಳ್ಳಾಪುರ, ಕೆ.ಜಿ.ಎಫ್. ಗೌರಿಬಿದನೂರು ಹಾಗೂ ಶಿಡ್ಲಘಟ್ಟದಲ್ಲಿ ನಿರ್ಮಿಸಿದೆ. ಕಡಿಮೆ ವೆಚ್ಚದ ಗೃಹ ಯೋಜನೆಯಡಿ ಚನ್ನರಾಯಪಲ್ಲಿಯಲ್ಲಿ ೫೦ ಮನೆ ನಿರ್ಮಿಸಿದೆ. ಜಿಲ್ಲೆಯಲ್ಲಿ ಶಿಕ್ಷಕರಿಗಾಗಿ ೧೦೬ ಕ್ವಾರ್ಟರ್ಸ್‌ಗಳನ್ನು ಮಂಡಳಿ ನಿರ್ಮಿಸಿದೆ.

**ಕೊಳಚೆ ನಿರ್ಮೂಲನಾ ಮಂಡಳಿ:**

ಕರ್ನಾಟಕ ರಾಜ್ಯದ ನಗರ/ಪಟ್ಟಣ ಪ್ರದೇಶದ ಭಾಗಗಳಲ್ಲಿ ಇರುವ ಕೊಳಚೆ ಪ್ರದೇಶ ನಿವಾಸಿಗಳ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರವು, ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ) ಮತ್ತು ನಿರ್ಮೂಲನೆ ಕಾಯ್ದೆ ೧೯೭೩ಅನ್ನು ೧೯೭೪ರಲ್ಲಿ ಜಾರಿಗೆ ತಂದಿತು. ಕಾನೂನಿನಂತೆ ಕೊಳಚೆ ನಿರ್ಮೂಲನಾ ಮಂಡಳಿ ರಚನೆಗೊಂಡಿತು. ಈ ಕಾಯ್ದೆಗೆ ೨೦೦೨ರಲ್ಲಿ ತಿದ್ದುಪಡಿ ತರಲಾಗಿದೆ. ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ಇದ್ದು, ಐದು ವಿಭಾಗೀಯ ಕಚೇರಿಗಳು ತಾಂತ್ರಿಕ ನಿರ್ದೇಶಕರು/ಕಾರ್ಯಪಾಲ ಅಭಿಯಂತರು ಇವರ ಮುಖ್ಯಸ್ಥಿಕೆಯಲ್ಲಿ ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿವೆ. ಇವಲ್ಲದೆ ೧೪ ಉಪ ವಿಭಾಗ ಕಚೇರಿಗಳು ಸಹ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮಂಡಳೀಯ ಕಾರ್ಯವ್ಯಾಪ್ತಿಯು ರಾಜ್ಯಾದಂತ ಇರುವ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಹಾಗೂ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಘೋಷಿಸಿದ ಕೊಳಚೆ ಪ್ರದೇಶಗಳ ಅಭಿವೃದ್ಧಿ, ನಿರ್ಮೂಲನೆ ಹಾಗೂ ಪುನರ್‌ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದಾಗಿದೆ.

ಕೊಳಚೆ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಬೀದಿ ದೀಪ, ಸಾರ್ವಜನಿಕ ಶೌಚಗೃಹ, ಚರಂಡಿ, ರಸ್ತೆ ಸೌಲಭ್ಯಗಳನ್ನು ಒದಗಿಸುವುದು, ಮಂಡಳಿಯ ಉದ್ದೇಶವಾಗಿದೆ. ಮಂಡಳಿಯು ಕೊಳಚೆ ನಿವಾಸಿಗಳಿಗೆ ಖಾಲಿ ನಿವೇಶನ ದೊರೆಯುವ ಕಡೆ, ಇಲ್ಲವೆ ಅದೇ ಪ್ರದೇಶದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ವಸತಿ ಗೃಹಗಳನ್ನು ಕಟ್ಟಿಕೊಡುವುದು. ಯೋಜನೆಯಡಿ ಸಾಲು ಮನೆಗಳು ಮತ್ತು ಮಹಡಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಈ ವಸತಿ ಗೃಹ ಯೋಜನೆಗಳಿಗೆ, ಹುಡ್ಕೊ ಸಂಸ್ಥೆಯಿಂದ ಸಾಲವನ್ನು ಪಡೆಯಲಾಗುವುದು.

ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ (ಎನ್.ಎನ್.ಡಿ.ಪಿ)ಗೆ ಕೇಂದ್ರ ಸರ್ಕಾರವು ಯೋಜನೆಯಡಿ, ರಾಜ್ಯ ಸರ್ಕಾರಗಳಿಗೆ ಕೊಳಚೆ ನಿವಾಸಿಗಳ ಕಲ್ಯಾಣಕ್ಕಾಗಿ ಹಣ ಬಿಡುಗಡೆ ಮಾಡುವುದು.

ಕೇಂದ್ರ ಪುರಸ್ಕೃತ ವಾಲ್ಮೀಕಿ ಅಂಬೇಡ್ಕರ ಆವಾಸ್ ಯೋಜನೆ – ಈ ಯೋಜನೆಯಡಿ ಮನೆಗಳ ನಿರ್ಮಾಣದ ಜೊತೆಗೆ ನಿರ್ಮಲ ಭಾರತ ಅಭಿಯಾನ್ ಯೋಜನೆಯಡಿ, ಸಾಮೂಹಿಕ ಶೌಚಾಲಯಗಳ ನಿರ್ಮಾಣವನ್ನು ಸಹ ಕೈಗೊಳ್ಳಲಾಗುತ್ತಿದೆ. ಈ 'ವಾಂಬೇ ಯೋಜನೆ' ಕೈಗೊಳ್ಳದೆ ಇರುವ ನಗರ/ ಪಟ್ಟಣಗಳಲ್ಲಿ ಶೌಚಾಲಯಗಳ ನಿರ್ಮಾಣ ಕಾರ್ಯವನ್ನು ಸ್ಥಳೀಯ ಜನ ಪ್ರತಿನಿಧಿಗಳ ಬೇಡಿಕೆಗೆ ಅನುಗುಣವಾಗಿ ನಿರ್ಮಿಸಲಾಗುತ್ತಿದೆ. ನಗರೀಕರಣ ಹಾಗೂ ಕೈಗಾರಿಕೀಕರಣ ಕಾರಣವಾಗಿ ಉದ್ಯೋಗ

ಹುಡುಕಿಕೊಂಡು ಗ್ರಾಮೀಣ ಜನ ನಗರ/ಪಟ್ಟಣಗಳಿಗೆ ವಲಸೆ ಬರುವುದು ಇತ್ತೀಚಿನ ದಶಕದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹೀಗಾಗಿ ಕೊಳಚೆ ಪ್ರದೇಶಗಳು ನಿರ್ಮಾಣಗೊಳ್ಳುತ್ತಿವೆ. ಘೋಷಿತ ಹಾಗೂ ಅಭಿವೃದ್ಧಿಪಡಿಸಲು ಅವಕಾಶವಿರುವ ಕೊಳಚೆ ಪ್ರದೇಶಗಳನ್ನು ನಿಗದಿತ ತಲಾವಾರು ವೆಚ್ಚದನ್ವಯ ರಾಜ್ಯ ಸರ್ಕಾರದ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಅಲ್ಲದೆ ಅಗತ್ಯವಿರುವ ಕಡೆ ಶೇಕಡಾ ೨೦ ರಾಜ್ಯ ಸರ್ಕಾರದ ಅನುದಾನ ಮತ್ತು ಶೇ.೮೦ ಹುಡ್ಕೊ ಸಾಲದ ನೆರವಿನೊಂದಿಗೆ ಮನೆಗಳನ್ನು ನಿರ್ಮಿಸಿ ಪುನರ್‌ವಸತಿ ಕಲ್ಪಿಸಲಾಗುತ್ತಿದೆ. ಫಲಾನುಭವಿಗಳು ಈ ಸಾಲವನ್ನು ಬಡ್ಡಿಯೊಂದಿಗೆ ೨೦ ವರ್ಷಗಳ ಅವಧಿಯಲ್ಲಿ ಮಾಸಿಕ ಕಂತಿನ ರೂಪದಲ್ಲಿ ಮರುಪಾವತಿ ಮಾಡಬೇಕಾಗುತ್ತದೆ.

**ಕೋಲಾರ ಜಿಲ್ಲೆಯ ತಾಲೂಕುವಾರು ಕೊಳಚೆಪ್ರದೇಶಗಳ ವಿವರಗಳು ಈ ಕೆಳಗಿವ ಪಟ್ಟಿಯಲ್ಲಿ ನೀಡಿದೆ.**

(ಸಂಖ್ಯೆಗಳಲ್ಲಿ)

| ಕ್ರ.ಸಂ. | ನಗರ / ಪಟ್ಟಣ | ಕೊಳಚೆ ಪ್ರದೇಶಗಳು | ಗುಡಿಸಲುಗಳ ಸಂಖ್ಯೆ | ಜನಸಂಖ್ಯೆ |
|---|---|---|---|---|
| ೧ | ಕೋಲಾರ | ೧೨ | ೮೮ | ೪೧೬೫ |
| ೨ | ಬಂಗಾರಪೇಟೆ | ೩ | ೨೨ | ೧೩೪೩ |
| ೩ | ಚಿಕ್ಕಬಳ್ಳಾಪುರ | ೬ | ೧೨೦ | ೬೬೨೫ |
| ೪ | ಗೌರಿಬಿದನೂರು | ೪ | ೪೪೭ | ೨೨೫೮ |
| ೫ | ಶಿಡ್ಲಘಟ್ಟ | ೪ | ೭೪ | ೫೬೨೦ |
| ೬ | ಮುಳಬಾಗಿಲು | ೧೪ | ೮೪೦೪ | ೧೩೩೭೮ |
| ೭ | ಚಿಂತಾಮಣಿ | ೧೪ | ೧೫೧೩ | ೭೪೬೯ |
| ೮ | ಬಾಗೇಪಲ್ಲಿ | ೨ | ೪೦೦ | ೧೮೨೧ |
| ೯ | ಗುಡಿಬಂಡೆ | ೧ | ೧೬೦ | ೯೬೦ |
| ೧೦ | ಶ್ರೀನಿವಾಸಪುರ | ೬ | ೮೨ | ೬೮೯೦ |
| ೧೧ | ಮಾಲೂರು | ೧ | ೧೨೦ | ೬೯ |

ಮೂಲ: ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು

೨೦೦೧–೦೨ರಿಂದ ೨೦೦೩–೦೪ರವರೆಗೆ ಕೋಲಾರ ಜಿಲ್ಲೆಯಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳ ಆರ್ಥಿಕ ಹಾಗೂ ಭೌತಿಕ ಪ್ರಗತಿಗಳ ವಿವರ.

| ಕ್ರ.ಸಂ. | ವರ್ಷ | ಆರ್ಥಿಕ ಲಕ್ಷ ರೂ.ಗಳಲ್ಲಿ | ಭೌತಿಕ ಸಂಖ್ಯೆಗಳಲ್ಲಿ |
|---|---|---|---|
| ೧ | ೨೦೦೧–೦೨ | ೧೭೦೦ | ೨೧೫ |
| ೨ | ೨೦೦೨–೦೩ | ೩೭೫೦ | ೪೬೮೭ |
| ೩ | ೨೦೦೩–೦೪ | ೭೭೩ | ೯೯೬ |

೧೯೮೧ ರಿಂದ ೨೦೦೨–೦೩ರವರೆಗೆ ಕೋಲಾರ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆಯಡಿ ೪೪೧ ಹಾಗೂ ಹುಡ್ಕೋ ಯೋಜನೆಯಡಿ ೧,೨೦೮ ಹೀಗೆ ಒಟ್ಟು ೧,೬೪೯ ಮನೆಗಳನ್ನು ಕಟ್ಟಿಸಿಕೊಡಲಾಗಿದೆ.